₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 09.02.2026 ಸಂಪುಟ: 11 ಸಂಚಿಕೆ: 26 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶಿಶು ನೇಪಾಳದ ಎದುರು ಸೋಲಿಂದ ಪಾರಾದ ಇಂಗ್ಲೆಂಡ್

ಮುಂಬೈನಲ್ಲಿ ನಡೆದ ಟಿ20 ವಿಶ್ವಕಪ್‌ನ ಸಿ ಗುಂಪಿನ ಪಂದ್ಯದಲ್ಲಿ ಭಾನುವಾರ ಪ್ರಬಲ ಇಂಗ್ಲೆಂಡ್ ಅನನುಭವಿ ನೇಪಾಳದ ವಿರುದ್ಧ ಕಡೆಗೂ ಸೋಲು ತಪ್ಪಿಸಿಕೊಂಡಿದೆ. ಬರೀ 4 ರನ್‌ಗಳಿಂದ ಗೆದ್ದ ಇಂಗ್ಲೆಂಡ್ ಮರ್ಯಾದೆ ಉಳಿಸಿಕೊಂಡಿದೆ.

ಅರಣ್ಯ ಇಲಾಖೆಯ ಅವೈಜ್ಞಾನಿಕ ತೀರ್ಮಾನದಿಂದ ವಿದೇಶಿಗರು ವಿಮುಖ | ಸರಾಸರಿ 5000 ವಿದೇಶಿಗರಿಗೆ ಈಗ ಹಿಂಜರಿಕೆ, ಸರಕಾರಕ್ಕೆ ವಾರ್ಷಿಕ ಭಾರೀ ನಷ್ಟ

ಸಫಾರಿಗೆ ನಿರ್ಬಂಧ; ಕರುನಾಡ ಪ್ರವಾಸಿ ಸಂಸ್ಕೃತಿಗೆ ಧಕ್ಕೆ

ರಂಜಿತ್ ಎಚ್.ಅಶ್ವತ್ಥ ಬೆಂಗಳೂರು

ಯಾರದ್ದೋ ಪ್ರತಿಷ್ಠೆಗೆ ಬಲಿಯಾಗಿರುವ ಬಂಡೀಪುರ, ನಾಗರಹೊಳೆ ಸಫಾರಿ ಸಮಸ್ಯೆ ಯಿಂದ ಕೇವಲ ಈ ಭಾಗಕ್ಕೆ ಮಾತ್ರವಲ್ಲದೇ, ಮುಂದಿನ ದಿನದಲ್ಲಿ ಇಡೀ ರಾಜ್ಯದ ಪ್ರವಾ ಸೋದ್ಯಮದ ಮೇಲೆ ತೀವ್ರ ಹೊಡೆತ ಬೀಳುವ ಸಾಧ್ಯತೆಯಿದೆ ಎನ್ನುವ ಆತಂಕ ಶುರುವಾಗಿದೆ.

ಸಚಿವರ-ಅಧಿಕಾರಿಗಳ ಪ್ರತಿಷ್ಠೆಯೋ, ರೈತ ಸಂಘಗಳ ಒತ್ತಡಕ್ಕೋ ಮಣಿದು ಅರಣ್ಯ ಇಲಾಖೆ ಸಫಾರಿಯನ್ನು ನಿರ್ಬಂಧಿಸಿದೆ. ಹುಲಿ ಗಳು ಮಾನವರ ಮೇಲೆ ದಾಳಿ ಮಾಡಿರುವ 'ಕುಂಟುನೆಪ' ಮುಂದಿಟ್ಟುಕೊಂಡು ಬಂಡೀ ಪುರ-ನಾಗರಹೊಳೆ ಸಫಾರಿ ನಿರ್ಬಂಧಿಸಿರುವ 'ಪ್ರಭೂತಿ'ಗಳು ಕಾಡಿನಲ್ಲಾಗುತ್ತಿರುವ ಹುಲಿ ದಾಳಿಯ ಹಿಂದಿನ ಕಾರಣವೇನು ಎನ್ನುವುದು ತಿಳಿಯದೇ, ಸಫಾರಿಯನ್ನು ನಿರ್ಬಂಧಿಸಿದ್ದಾರೆ. ಮೂರು ತಿಂಗಳಿನಿಂದ ಆಗಿರುವ ಈ ನಿರ್ಬಂಧದಿಂದ, ಈ ಭಾಗದ ರೆಸಾರ್ಟ್,

ಹೋಮ್ ಸ್ಟೇ ಮಾಲೀಕರು ಈಗಾಗಲೇ ನಷ್ಟ ಅನುಭವಿಸಿ, ಬೀದಿಗೆ ಬೀಳುವ ಪರಿಸ್ಥಿತಿಯಲ್ಲಿದ್ದಾರೆ. ಇದರ ಮುಂದುವರಿದ ಭಾಗವಾಗಿ, ಸಫಾರಿಯ ನಿರ್ಬಂಧ ಇಡೀ ಕರ್ನಾಟಕ 'ಪ್ರವಾಸೋದ್ಯಮ'ದ ಮೇಲೆ ಪರಿಣಾಮ ಬೀರುತ್ತಿದೆ ಎನ್ನುವ ವಿಶ್ಲೇಷಣೆಗಳು ಶುರುವಾಗಿವೆ.

ಮೇಲ್ನೋಟಕ್ಕೆ ಈ ಸಫಾರಿಯ ನಿರ್ಬಂಧ ಕೇವಲ ಮೈಸೂರು, ಚಾಮರಾಜನಗರ ಭಾಗಕ್ಕೆ ಸೀಮಿತವಾಗಲಿದೆ ಎಂದು ವಿಶ್ಲೇಷಿಸಿದರೂ, ವಿದೇಶಿ ಪ್ರವಾಸಿಗರು, ಉತ್ತರ ಭಾರತದಿಂದ ಆಗಮಿಸುವ ಪ್ರವಾಸಿಗರ ಆಯಾಮದಲ್ಲಿ ನೋಡಿದರೆ ಇದು ಇಡೀ ಕರ್ನಾಟಕದ ಪ್ರವಾಸೋದ್ಯಮದ ಮೇಲೆ ಹೊಡೆತ ಬೀಳುತ್ತದೆ. → 4

- ಬಂಡೀಪುರ-ನಾಗರಹೊಳೆಗೆ ಸಫಾರಿಗೆಂದೇ ಪ್ರತಿವರ್ಷ ಐದು ಸಾವಿರಕ್ಕೂ ಹೆಚ್ಚು ಪ್ರವಾಸಿಗರ ಆಗಮನ
- ಸಫಾರಿ ನಿರ್ಬಂಧದಿಂದ, ಕರ್ನಾಟಕದ ಬದಲು ಬೇರೆ ರಾಜ್ಯಗಳತ್ತ ಮುಖ ಮಾಡಿರುವ ವಿದೇಶಿಗರು
- ವಿದೇಶೀಯರು ಬಾರದೇ ಹೋದರೆ ರಾಜ್ಯಕ್ಕೆ ವಾರ್ಷಿಕ ಕನಿಷ್ಠ 125 ಕೋಟಿ ರು. ನಷ್ಟ ಎನ್ನುವ ಅಂದಾಜು
- ರಾಜ್ಯದಲ್ಲಿನ ಬೆಳವಣಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆ, ಬುಕಿಂಗ್ ಮಾಡಲು ನಿರಾಸಕ್ತಿ
- ಸಫಾರಿ ತೆರೆಯದೇ ಹೋದರೆ, ಹಲವು ರಾಜ್ಯಗಳಿಂದ ಅಧಿಕೃತ ಮಾರ್ಗಸೂಚಿ ಬಿಡುಗಡೆಯ ಸಾಧ್ಯತೆ

125 ಕೋಟಿ ರು. ನಷ್ಟ

ಸಾಮಾನ್ಯವಾಗಿ ವಿದೇಶದಿಂದ ಬರುವ ಪ್ರವಾಸಿಗರು ಕೇವಲ ಒಂದು ಸ್ಥಳಕ್ಕೆಂದು ಬರುವುದಿಲ್ಲ. ಬಂಡೀಪುರಕ್ಕೆ ಬಂದವರು ಕರ್ನಾಟಕದ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಾರೆ. ಯಾವುದೇ ವಿದೇಶಿ ಪ್ರವಾಸಿಗ ಕರ್ನಾಟಕಕ್ಕೆ ಬಂದರೆ ಸರಾಸರಿ ಎರಡೂವರೆ ಲಕ್ಷ ರುಪಾಯಿಗಳನ್ನು ಇಲ್ಲಿ ಖರ್ಚು ಮಾಡುತ್ತಾನೆ ಎನ್ನುವ ಲೆಕ್ಕಾಚಾರವಿದೆ. ಹೀಗಿರುವಾಗ, ಬಂಡೀಪುರ-ನಾಗರಹೊಳೆಗೆ ವಾರ್ಷಿಕವಾಗಿ ಬರುವ ಐದು ಸಾವಿರ ವಿದೇಶಿ ಪ್ರವಾಸಿಗರು ಕರ್ನಾಟಕಕ್ಕೆ ಬಾರದೇ ಬೇರೆ ರಾಜ್ಯಕ್ಕೆ ಹೋದರೆ, ಕರ್ನಾಟಕಕ್ಕೆ ಸರಾಸರಿ ಲೆಕ್ಕದಲ್ಲಿ ಬರೋಬ್ಬರಿ 125 ಕೋಟಿ ರು. ನಷ್ಟವಾಗುತ್ತದೆ.

ಹುಲಿ ದಾಳಿಗೂ ಸಫಾರಿಗೂ ಸಂಬಂಧವೇ ಇಲ್ಲ

ಸಫಾರಿಗೂ ಹುಲಿಗಳ ದಾಳಿಗೂ ಸಂಬಂಧವಿಲ್ಲದಿದ್ದರೂ, ಸಫಾರಿಯನ್ನು ನಿರ್ಬಂಧಿಸಿರುವ ಅರಣ್ಯ ಇಲಾಖೆಯ ಮೇಲಧಿಕಾರಿಗಳಿಗೆ ಬಂಡೀಪುರ-ನಾಗರಹೊಳೆ ಪ್ರದೇಶದ ಸ್ಪಷ್ಟ ಚಿತ್ರಣವಿಲ್ಲ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗುತ್ತಿದೆ. ಏಕೆಂದರೆ, ಮಾನವರ ಮೇಲೆ ಹುಲಿ ದಾಳಿಯಾದ ಮೊದಲ ಘಟನೆ ನಡೆದಿದ್ದು ಹೆಡಿಯಾಳ ಭಾಗದಲ್ಲಿ. ಬಂಡೀಪುರ ಸಫಾರಿ ನಡೆಯುವ ಪ್ರದೇಶಕ್ಕೂ ಬರೋಬ್ಬರಿ 40 ಕಿಮೀ ಅಂತರವಿದೆ. ಹೀಗಿರುವಾಗ, 40 ಕಿಮೀ ದೂರದಲ್ಲಿ ಆಗುತ್ತಿರುವ ಹುಲಿ ದಾಳಿಗೆ ಕಾರಣವೇನು ಎನ್ನುವುದನ್ನು ಅರಿಯದೇ 'ಯಾರದ್ದೋ' ಒತ್ತಡ, ಹಿತಾಸಕ್ತಿಗೆ ಮಣಿದು ನಿರ್ಬಂಧಿಸುವ ಮೂಲಕ ಸಾಧಿಸಿದ್ದೇನು ಎನ್ನುವ ಪ್ರಶ್ನೆಗಳಿವೆ.

ಅಸ್ತಿತ್ವದಲ್ಲಿ ಉಳಿದು, ಸುಭದ್ರವಾಗಬೇಕಿದ್ದರೆ ಬಾಂಗ್ಲಾ ಹಿಂದೂಗಳು ಒಗ್ಗಟ್ಟಾಗಬೇಕು ಅವರಿಗೆ ಜಗತ್ತಿನ ಎಲ್ಲ ಹಿಂದೂಗಳ ಬೆಂಬಲವಿದೆ: ಆರ್‌ಎಸ್‌ಎಸ್ ಪರಮೋಚ್ಚ ನಾಯಕ

ಬಾಂಗ್ಲಾದ 1.25 ಕೋಟಿ ಹಿಂದೂಗಳು ಒಗ್ಗಟ್ಟಾಗಿ ಹೋರಾಡಲಿ: ಭಾಗವತ್

ದೆಹಲಿ: ಶೇಖ್ ಹಸೀನಾ ಬಾಂಗ್ಲಾದಿಂದ ಹೊರ ಬಿದ್ದ ನಂತರ, ಇತ್ತೀಚೆಗಿನ ಆಂತರಿಕ ಸಂಘರ್ಷದ ನಂತರ ಬಾಂಗ್ಲಾದಲ್ಲಿ ಹಿಂದೂಗಳ ಪರಿಸ್ಥಿತಿ ಕಠಿಣವಾಗಿದೆ. ಈಗಲೂ ಬಾಂಗ್ಲಾದಲ್ಲಿರುವ 1.25 ಕೋಟಿ ಹಿಂದೂಗಳು ಒಗ್ಗಟ್ಟಾಗಿ ಹೋರಾಡಿದರೆ, ಜಗತ್ತಿನಲ್ಲೆಲ್ಲ ಇರುವ ಹಿಂದೂಗಳು ಬೆಂಬಲ ನೀಡುತ್ತಾರೆ. ಆ ಭರವಸೆಯನ್ನು ನಾನು ನೀಡು ತ್ತೇನೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಸಂಘಚಾಲಕ ಮೋಹನ್ ಭಾಗವತ್ ಹೇಳಿ ದ್ದಾರೆ. ಈ ಮೂಲಕ ಪರಿಸ್ಥಿತಿಯನ್ನು ನಿಭಾಯಿ ಸಲು ಒಗ್ಗಟ್ಟಾಗಿ ಹೋರಾಡಿ, ನಿಮ್ಮ ಜೊತೆಗೆ ನಾವಿ ದ್ದೇವೆ ಎಂಬ ನೇರಸಂದೇಶವನ್ನು ಬಾಂಗ್ಲಾದ ಹಿಂದೂಗಳಿಗೆ ವರ್ಗಾಯಿಸಿದ್ದಾರೆ. ಪ್ರಸ್ತುತ ಬಾಂ ಗ್ಲಾದಲ್ಲಿ ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸಿ, ಕೊಲ್ಲಲಾಗುತ್ತಿದೆ. ಈ ಹಿನ್ನೆಲೆ ಯಲ್ಲಿ ಭಾಗವತ್ ಹೇಳಿಕೆ ಭಾರೀ ಮಹತ್ವ ಪಡೆದಿದೆ.

ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನೆಲೆ ಯಲ್ಲಿ ಮುಂಬೈನ ವರ್ಲಿಯಲ್ಲಿ ನಡೆದ '100 ವರ್ಷಗಳ ಸಂಘ ಪಯಣ: ಹೊಸ ದಿಗಂತಗಳು' ಎಂಬ 2 ದಿನಗಳ ಕಾರ್ಯಕ್ರಮದ 2ನೇ ದಿನವಾದ ಭಾನುವಾರ ಮೇಲಿನಂತೆ ಅವರು ನುಡಿದರು. → 4

ಸ್ಥಾನಕ್ಕೆ ಜಾತಿಯಿಲ್ಲ

ಸಂಘದಲ್ಲಿ ಮುಂದಿನ ಸರಸಂಘಚಾಲಕ ಯಾರಾಗುತ್ತಾರೆ ಎಂದು ಈಗ ನಾನು ಊಹಿಸಲಿಕ್ಕೆ ಸಾಧ್ಯವಿಲ್ಲ. ಯಾವುದೇ ಹಿಂದೂ, ಯಾವುದೇ ಜಾತಿಗೆ ಸೇರಿದ್ದರೂ ಸರಸಂಘಚಾಲಕನಾಗಬಹುದು. ಯಾರಾಗಬೇಕೆಂದು ನಿರ್ಧರಿಸುವುದು ಸಂಘಟನೆ. ನಾನು ಆ ಸ್ಥಾನಕ್ಕೇರುವಾಗ ಅರ್ಹರಾದ ಹಲವರಿದ್ದರು. ಆದರೆ ಅವರೆಲ್ಲ ಆಗಲೇ ನಿರ್ದಿಷ್ಟ ಜವಾಬ್ದಾರಿ ಹೊತ್ತಿದ್ದರಿಂದ ಅವರು ಲಭ್ಯರಿರಲಿಲ್ಲ. ಆದ್ದರಿಂದ ನನಗೆ ಹೊಣೆ ನೀಡಲಾಯಿತು ಎಂದಿದ್ದಾರೆ ಭಾಗವತ್.



ಸಂಘ ಹೇಳಿದರೆ ಸ್ಥಾನ ತ್ಯಾಗ

ಸಂಘ ಹೇಳಿದರೆ ನಾನು ಸರಸಂಘಚಾಲಕ ಸ್ಥಾನ ತ್ಯಜಿಸಲು ಸಿದ್ಧ. ಸಂಘವೇ ನನಗೆ ಈ ಸ್ಥಾನದಲ್ಲಿ ಮುಂದುವರಿಯಲು ಹೇಳಿದ್ದು. ಆರ್‌ಎಸ್‌ಎಸ್‌ನಲ್ಲಿ 75 ವರ್ಷಕ್ಕೆ ನಿವೃತ್ತಿ ಎಂಬ ಪದ್ಧತಿಯಿಲ್ಲ. ಸಂಘದಲ್ಲಿ ಚುನಾವಣೆಯ ಮೂಲಕ ಸರಸಂಘಚಾಲ ಕರನ್ನು ನಿರ್ಧರಿಸುವುದಿಲ್ಲ. ಅರ್ಹರನ್ನು, ಲಭ್ಯವಿರುವ ವ್ಯಕ್ತಿಗಳ ನಡುವೆ ಆಯ್ಕೆ ಮಾಡಲಾಗುತ್ತದೆ ಎಂದು ಭಾಗವತ್ ಸ್ಪಷ್ಟಪಡಿಸಿದ್ದಾರೆ.

3 ಮಕ್ಕಳನ್ನು ಹೊಂದಬೇಕು

ದೇಶದಲ್ಲಿ ಜನಸಂಖ್ಯಾ ಪ್ರಮಾಣ ಕುಸಿಯುತ್ತಿದೆ. ವೈಜ್ಞಾನಿಕ ಸಂಶೋಧನೆಗಳೂ ಕುಟುಂಬವೊಂದು 3 ಮಕ್ಕಳನ್ನು ಹೆರಬೇಕು ಎಂದು ಸೂಚಿಸಿವೆ. ಆದರೆ ಇವೆಲ್ಲ ವ್ಯಕ್ತಿಗಳ ಖಾಸಗಿ ಆಯ್ಕೆ. 19ರಿಂದ 25 ವರ್ಷಗಳ ನಡುವೆ ಮದುವೆಯಾಗಿ 3 ಮಕ್ಕಳನ್ನು ಹೊಂದುವುದರಿಂದ ಆರೋಗ್ಯ, ಕೌಟುಂಬಿಕ ಸ್ಥಿರತೆ, ಸಾಮಾಜಿಕ ಸಮತೋಲನ ಸಾಧ್ಯ. ಸದ್ಯ ಜನನ ಪ್ರಮಾಣ ಕುಸಿಯುತ್ತಿದೆ ಎಂದು ಭಾಗವತ್ ಹೇಳಿದ್ದಾರೆ.

ಜನಸಂಖ್ಯಾ ಅಸಮತೋಲನಕ್ಕೆ 3 ಕಾರಣ

ಆಮಿಷಗಳನ್ನೊಡ್ಡಿ, ವಂಚಿಸಿ ಮತಾಂತರ ಮಾಡುತ್ತಿರುವುದು, ಅಕ್ರಮ ಒಳ ನುಸುಳುವಿಕೆ, ಜನನ ಪ್ರಮಾಣ ಕಡಿಮೆಯಾಗಿರುವುದೇ ಭಾರತದಲ್ಲಿ ಜನಸಂಖ್ಯಾ ಅಸಮತೋಲನಕ್ಕೆ ಕಾರಣವಾಗಿದೆ. ಒಳ ನುಸುಳುವಿಕೆ ತಡೆಯಲು ನಿಧಾನಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮತಾಂತರ ತಡೆಯಬೇಕು, ಘರ್ ವಾಪಸಿಯಿಂದ ಮತಾಂತರ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಭಾಗವತ್ ಹೇಳಿದ್ದಾರೆ.

ಗಾಲ್ವಾನ್ ಸಂಘರ್ಷ ನಡೆದ ವಾರದಲ್ಲೇ ಘಟನೆ ಜಗತ್ತಿನ ನಿಗಾ ತಪ್ಪಿಸಲು ನೆಲದಾಳದಲ್ಲಿ ಪರೀಕ್ಷೆ?

ಚೀನಾ ರಹಸ್ಯ ಅಣ್ವಸ್ತ್ರ ಪರೀಕ್ಷೆ: ಅಮೆರಿಕ ಕಿಡಿ

ವಾಷಿಂಗ್ಟನ್: ಭಾರತ-ಚೀನಾ ಸೈನಿಕರ ನಡುವೆ ಗಾಲ್ವಾನ್‌ನಲ್ಲಿ ಘರ್ಷಣೆಯಾದ ಒಂದೇ ವಾರದಲ್ಲಿ ಚೀನಾ ರಹಸ್ಯವಾಗಿ ಅಣ್ವಸ್ತ್ರ ಪರೀಕ್ಷೆ ನಡೆಸಿದೆ. ಹೀಗೊಂದು ಸ್ಫೋಟಕ ಮಾಹಿತಿ ಅಮೆರಿಕದ ಆರೋಪದಿಂದ ಬಹಿರಂಗವಾಗಿದೆ. ಶುಕ್ರವಾರ ಜಿನೀವಾದಲ್ಲಿ ನಡೆದ ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಅಮೆರಿಕದ ರಕ್ಷಣಾ ಇಲಾಖೆಯ ಸಹಾಯಕ ಸಚಿವ ಥಾಮಸ್ ಡಿನ್ನಾನೋ, ಜಾಗತಿಕ ಸಂಸ್ಥೆಗಳಿಂದ ತಪ್ಪಿಸಿಕೊಳ್ಳಲು ಚೀನಾ ಡೀಕೌಪ್ಲಿಂಗ್ ತಂತ್ರಜ್ಞಾನ ಬಳಸಿ

2020, ಜೂ.22ರಂದು ನೆಲದಾಳದಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದೆ ಎಂದು ಹೇಳಿದ್ದಾರೆ. ಅಮೆರಿಕ-ಚೀನಾ ನಡುವಿನ ನ್ಯೂ ಸ್ಟಾರ್ಟ್ ಅಣು ಒಪ್ಪಂದ ಮುಕ್ತಾಯವಾದ ಒಂದೇ ದಿನದಲ್ಲಿ ಇಂತಹ ಆರೋಪ ಕೇಳಿಬಂದಿದೆ. → 4

ಗಾಲ್ವಾನ್: ಚೀನಾದಿಂದ ಉದ್ದೇಶಪೂರ್ವಕ ನಾಟಕ?

ಭಾರತದ ಗಡಿಯಲ್ಲಿರುವ ಶಿನ್ಜಿಯಾಂಗ್ ಪ್ರದೇಶದ ಲಾಪ್ ನೂರ್ ಸ್ಥಳದಲ್ಲಿ ಚೀನಾ ಡಿಕೌಪ್ಲಿಂಗ್ ಎಂಬ ತಂತ್ರ ಬಳಸಿ ಪರಮಾಣು ಪರೀಕ್ಷೆ ನಡೆಸಿದೆ ಎಂದು ಅಮೆರಿಕ ದೂರಿದೆ. ಈ ವಿಚಾರ ಬಹಿರಂಗವಾದ ಬೆನ್ನಲ್ಲೇ ಗಾಲ್ವಾನ್ ಘರ್ಷಣೆಯು ಚೀನಾದ ಉದ್ದೇಶಪೂರ್ವಕ ಕೃತ್ಯವೇ ಎಂಬ ಅನುಮಾನ ವ್ಯಕ್ತವಾಗಿದೆ. ಸಮಗ್ರ ಪರಮಾಣು ಪರೀಕ್ಷಾ ನಿಷೇಧ ಒಪ್ಪಂದದ ಅಡಿಯಲ್ಲಿ ಯಾವ ದೇಶವೂ ಅಣುಪರೀಕ್ಷೆ ನಡೆಸುವಂತಿಲ್ಲ. ಆದರೆ ಚೀನಾ ಗಡಿಯಲ್ಲಿ ಘರ್ಷಣೆ ನಡೆದರೆ ವಿಶ್ವದ ಕಣ್ಣು ಆ ವಿಚಾರದ ಬಗ್ಗೆ ಮಾತ್ರ ಇರುತ್ತದೆ. ಇನ್ನೊಂದು ಕಡೆ ರಹಸ್ಯವಾಗಿ ಪರೀಕ್ಷೆ ನಡೆಸಿದರೆ ಇದು ಯಾರಿಗೂ ತಿಳಿಯುವುದಿಲ್ಲ ಎಂಬ ಲೆಕ್ಕಾಚಾರ ಹಾಕಿಕೊಂಡು ಗಾಲ್ವಾನ್ ಘರ್ಷಣೆಗೆ ಚೀನಾ ಪ್ರಚೋದನೆ ನೀಡಿತ್ತಾ ಎಂಬ ಚರ್ಚೆ ಈಗ ಆರಂಭವಾಗಿದೆ.

ಭೀಕರ ಸ್ಫೋಟದ ಹೊಣೆ ಹೊತ್ತ ಐಸಿಸ್ ಉಗ್ರರು

ಪಾಕ್ ಸ್ಫೋಟ: ಸತ್ತವರು 200

ಇಸ್ಲಾಮಾಬಾದ್: ಪಾಕಿಸ್ತಾನದ ಇಸ್ಲಾಮಾಬಾದ್ ನಗರದ ಶಿಯಾ ಸಮುದಾಯದ ಮಸೀದಿಯಲ್ಲಿ ಶುಕ್ರವಾರ ನಡೆದ ಭೀಕರ ಬಾಂಬ್ ಸ್ಫೋಟಕ್ಕೆ ಬಲಿಯಾದ ವರ ಸಂಖ್ಯೆ 200 ಎಂಬುದು ದೃಢಪ ಟ್ಟಿದೆ. ಅಲ್ಲದೇ, ಸ್ಫೋಟದ ಹೊಣೆಯನ್ನು ಕುಖ್ಯಾತ ಭಯೋತ್ಪಾದಕ ಸಂಘಟನೆ 'ಇಸ್ಲಾಮಿಕ್ ಸ್ಟೇಟ್'(ಐಎಸ್‌ಐಎಸ್) ಹೊತ್ತುಕೊಂಡಿದೆ. 'ಐಎಸ್‌ಐಎಸ್'ನ ಮುಖವಾಣಿ 'ಅಮಾಕ್' ಮೂಲಕ ಈ ಬಗ್ಗೆ ಹೇಳಿಕೆ ನೀಡಲಾಗಿದೆ.



ಈ ದಾಳಿಯು ಪಾಕಿಸ್ತಾನ ಪ್ರಾಂತ್ಯದಲ್ಲಿ ಇಸ್ಲಾಮಿಕ್ ಸ್ಟೇಟ್ ಸೈನಿಕರು ನಡೆಸಿದ ಫಿದಾಯೀನ್ ಕಾರ್ಯಾಚರಣೆ (ಆತ್ಮಾಹುತಿ ದಾಳಿ) ಎಂದು ಉಗ್ರ ಸಂಘಟನೆ ಹೇಳಿಕೊಂಡಿದೆ. ಈ ಮಧ್ಯೆ, ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಸಂಘಟನೆಯ ಸದಸ್ಯರು ಖೊರಾಸನ್ ಪ್ರಾಂತ್ಯದಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಘಟನೆಗೆ ಸೇರಿಕೊಳ್ಳುವಂತೆ ಅಲ್-ನಬಾದ ಇತ್ತೀಚಿನ ಸಂಚಿಕೆಯಲ್ಲಿ ಕರೆ ನೀಡಿದೆ. ಶುಕ್ರವಾರ ಮಧ್ಯಾಹ್ನದ ಪ್ರಾರ್ಥನೆ ವೇಳೆ ಇಸ್ಲಾಮಾಬಾದ್‌ನ ಷಿಯಾ ಮಸೀದಿಯಲ್ಲಿ ನಡೆದ ಸ್ಫೋಟದಲ್ಲಿ 36 ಜನರು ಸಾವಿಗೀಡಾದರು ಎಂದು ಪಾಕ್ ಸರಕಾರ ಈ ಹಿಂದೆ ಹೇಳಿದೆ. ಆದರೆ, ಸಾವಿನ ಸಂಖ್ಯೆ 200 ಎಂದು ಅಮಾಕ್ ದೃಢಪಡಿಸಿದೆ. ಅಲ್ಲದೇ, ಸೈಫುಲ್ಲಾ ಅನ್ಸಾರಿ ಎಂಬಾತ ಆತ್ಮಾಹುತಿ ಬಾಂಬರ್ ಆಗಿದ್ದ ಎಂದು ಆತನ ಫೋಟೋವನ್ನು ಪ್ರಕಟಿಸಿದೆ.

ವಿಜಯಪುರ ಜಿಲ್ಲೆಯಲ್ಲಿ ಘಟನೆ, 2 ಪೈಲಟ್‌ಗಳಿಗೆ ತೀವ್ರ ಗಾಯ

ಮಂಗಳೂರು ಗ್ರಾಮದಲ್ಲಿ ವಿಮಾನ ಪತನ

ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಮಂಗಳೂರು ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ 3 ಗಂಟೆಗೆ ತರಬೇತಿ ನಿರತ ವಿಮಾನವೊಂದು ಪತನವಾಗಿದೆ. ಅದರಲ್ಲಿದ್ದ ಇಬ್ಬರು ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಲಬುರ್ಗಿಯಿಂದ ಬೆಳಗಾವಿಗೆ ತೆರಳುತ್ತಿದ್ದ ರೆಡ್ ಬರ್ಡ್ ಏವಿಯೇಷನ್‌ಗೆ ಸೇರಿದ ಈ ವಿಮಾನವು ಮಂಗಳೂರು ಗ್ರಾಮದ ಹೊಲದಲ್ಲಿ ಪತನವಾಗಿದೆ. ಕ್ಯಾಪ್ಟನ್ ಕುನಾಲ್ ಮಲ್ಹೋತ್ರಾ ಮತ್ತು ತರಬೇತಿ

ನಿರತ ಪೈಲಟ್ ಗೌತಮ್ ಶಂಕರ್ ಪಿ.ಆರ್. ವಿಮಾನದಿಂದ ಜಿಗಿದು ಪಾರಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ. ವಿಮಾನವು ತಲೆ ಕೆಳಗಾಗಿ ಮುರಿದು ಬಿದ್ದಿದ್ದು, ಹೆಚ್ಚಿನ ಮಾಹಿತಿ ತಿಳಿದುಬರಬೇಕಿದೆ ಎಂದು ನಿಂಬರಗಿ ಹೇಳಿದ್ದಾರೆ. ವಿಮಾನ ಪತನವಾಗಿರುವ ಸ್ಥಳದಲ್ಲಿ ಸುತ್ತಮುತ್ತಲಿನ ಸಾವಿರಾರು ಗ್ರಾಮಸ್ಥರು ನೋಡಲು ತೆರಳಿದ್ದರು.

ಬರೀ 20 ರು. ಲಂಚದ ಆರೋಪ, 30 ವರ್ಷ ಕೋರ್ಟ್‌ಗೆ ಅಲೆದಾಟ ಗುಜರಾತ್ ಪೇದೆ ಪ್ರಜಾಪತಿಯನ್ನು ದೋಷಮುಕ್ತಗೊಳಿಸಿದ ಹೈಕೋರ್ಟ್

ನಿರಪರಾಧಿ ಎನಿಸಿಕೊಂಡ ಮರುದಿನವೇ ಪೇದೆ ಸಾವು

ಗಾಂಧೀನಗರ: ಬರೀ 20 ರು. ಲಂಚ ಪಡೆದ ಆರೋಪದಲ್ಲಿ 30 ವರ್ಷ ನ್ಯಾಯಾಲಯದಲ್ಲಿ ಹೋರಾಡಿದ ಗುಜರಾತ್ ಪೊಲೀಸ್ ಪೇದೆ, ನಿರಪ ರಾಧಿ ಎಂದು ಫೆ.4ರಂದು ಗುಜರಾತ್ ಹೈಕೋರ್ಟ್ ತೀರ್ಪು ನೀಡಿತ್ತು. ಇದರ ಮರುದಿನವೇ ಅವರು ಮೃತಪಟ್ಟಿದ್ದಾರೆ. ನ್ಯಾಯ ಪೀಠ ತೀರ್ಪು ನೀಡಿದ ಕೂಡಲೇ ಪ್ರತಿಕ್ರಿ ಯಿಸಿದ್ದ ಪ್ರಜಾಪತಿ ಬಾಬು ಭಾಯಿ, ಜೀವನದಲ್ಲಿ ನನಗೆ ಅಂಟಿದ್ದ ಕಳಂಕವನ್ನು ತೆಗೆದುಹಾಕಲಾಗಿದೆ. ಈಗ ದೇವರು ನನ್ನನ್ನು ಕರೆದು ಕೊಂಡು ಹೋದರೂ ನನಗೆ ಯಾವುದೇ ದುಃಖ ಇರು ವುದಿಲ್ಲ ಎಂದಿದ್ದರು. ಅಚ್ಚರಿಯೆಂದರೆ ಫೆ.5ರ ರಾತ್ರಿ ನಿದ್ರೆಯಲ್ಲೇ ಪ್ರಜಾಪತಿ ಮೃತಪಟ್ಟಿದ್ದಾರೆ ಎಂದು ಗೊತ್ತಾಗಿದೆ.

ಈ ಪ್ರಕರಣ 1996ಕ್ಕೆ ಸಂಬಂಧಪಟ್ಟಿದ್ದು. ಪೊಲೀಸ್ ಪೇದೆ ಪ್ರಜಾಪತಿ ಅವರನ್ನು ಅಹಮದಾಬಾದ್‌ನಲ್ಲಿ ನಿಯೋಜಿಸಲಾಗಿತ್ತು. ಟ್ರಕ್ ಒಂದನ್ನು ಅಕ್ರಮವಾಗಿ ನಗರಕ್ಕೆ ಪ್ರವೇಶ ನೀಡಲು ಮೂವರು ಪೇದೆಗಳಾದ ಪ್ರಜಾಪತಿ, ಸೇವನ್‌ಕುಮಾರ್, ನಸ್ರುಲ್ಲಾ ಖಾನ್ ಲಂಚ ಸ್ವೀಕರಿಸಿದ್ದಾರೆ ಎಂಬ ಪ್ರಕರಣ ದಾಖಲಾಗಿತ್ತು. ಆಗ 20 ರು. ಲಂಚ ಪಡೆದ ಆರೋಪ ಪ್ರಜಾಪತಿ ಮೇಲಿತ್ತು. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಅವರ ವಿರುದ್ಧ ಆರೋಪಗಳನ್ನು ಹೊರಿಸಲಾಗಿತ್ತು.

1997ರಲ್ಲಿ ಸೆಷನ್ಸ್ ನ್ಯಾಯಾಲಯದಲ್ಲಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿತ್ತು. 2002ರಲ್ಲಿ ಆರೋಪ ಗಳನ್ನು ರೂಪಿಸಲಾಯಿತು. ಸಾಕ್ಷಿಗಳ ವಿಚಾರಣೆ 2003ರಲ್ಲಿ ಪ್ರಾರಂಭವಾಯಿತು. 2004ರಲ್ಲಿ ಅವರು ಶಿಕ್ಷೆಗೊಳಗಾಗಿದ್ದರು. → 4

ಇನ್ನು ಸತ್ತರೂ ಚಿಂತೆಯಿಲ್ಲ ಎಂದು ಹೇಳಿದಂತೆಯೇ ಆಯ್ತು

ಇದು 1996ರಲ್ಲಿ ನಡೆದ ಘಟನೆ. ಬರೀ 20 ರು. ಲಂಚ ಪಡೆದರೆಂಬ ಆರೋಪದಲ್ಲಿ ಅಹ್ಮದಾಬಾದ್‌ನಲ್ಲಿ ಪೇದೆಯಾಗಿದ್ದ ಬಾಬುಭಾಯಿ ಪ್ರಜಾಪತಿ ವಿರುದ್ಧ ಭ್ರಷ್ಟಾಚಾರ ಪ್ರಕರಣ ಅಹ್ಮದಾಬಾದ್‌ನಲ್ಲಿ ದಾಖಲಾಗಿತ್ತು. 2004ರಲ್ಲಿ ಅವರನ್ನು ಸೇವೆಯಿಂದ ವಜಾ ಮಾಡಿ, 4 ವರ್ಷ ಜೈಲು ಶಿಕ್ಷೆ ನೀಡಲಾಗಿತ್ತು. ಫೆ.4ರಂದು ಪ್ರಜಾಪತಿ ನಿರಪರಾಧಿ ಎಂದು ಗುಜರಾತ್ ಹೈಕೋರ್ಟ್ ತೀರ್ಪು ನೀಡಿತ್ತು. ಈ ವೇಳೆ ಇನ್ನು ಸತ್ತರೂ ಚಿಂತೆಯಿಲ್ಲ ಎಂದು ಪ್ರಜಾಪತಿ ಹೇಳಿದ್ದರು. ಅದರಂತೆ ಅವರು ಮಲಗಿದ್ದಲ್ಲೇ ಮೃತಪಟ್ಟಿದ್ದಾರೆ.

ಮೆಟ್ರೋ ದರ ಏರಿಕೆಗೆ ಅಂತೂ ತಾತ್ಕಾಲಿಕ ತಡೆ

ಬೆಂಗಳೂರು: ಆಡಳಿತ-ಪ್ರತಿಪಕ್ಷಗಳ ನಡುವಿನ ವಾಕ್ಸಮರಕ್ಕೆ ಕಾರಣವಾಗಿದ್ದ ಮೆಟ್ರೋ ದರ ಏರಿಕೆಯ ತೀರ್ಮಾನದಿಂದ ಬಿಎಂಆರ್‌ಸಿಎಲ್ ಕೊನೆಗೂ ತಾತ್ಕಾಲಿಕವಾಗಿ ಹಿಂದೆ ಸರಿದಿದೆ. ದರ ಏರಿಕೆ ವಿರೋಧಿಸಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಕೇಂದ್ರ ಸಚಿವ ಮನೋಹರ್‌ಲಾಲ್ ಖಟ್ಟರ್‌ರೊಂದಿಗೆ ಚರ್ಚಿಸಿ, ದರ ಏರಿಸದಂತೆ ಮನವಿ ಮಾಡಿದ್ದರು. ಇದರ ಹೊರತಾಗಿಯೂ, ಸೋಮವಾರದಿಂದ ದರ ಏರಿಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಹೇಳಿದ್ದು ಗೊಂದಲಕ್ಕೆ ಕಾರಣವಾಗಿತ್ತು.

ಬಜೆಟ್‌ನಲ್ಲಿ ಪೊಲೀಸರಿಗೆ ಹೊಸ ವಾಹನ ಭಾಗ್ಯ?

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರ ದಾಖಲೆಯ 17ನೇ ಬಜೆಟ್‌ನಲ್ಲಿ ಗೃಹ ಇಲಾಖೆಗೆ ಹೊಸ 'ವಾಹನ ಭಾಗ್ಯ' ಸಿಗುವ ಸಾಧ್ಯತೆ ದಟ್ಟವಾಗಿದೆ. ಪೊಲೀಸ್ ಸಿಬ್ಬಂದಿಗೆ ವಸತಿ ಭಾಗ್ಯವೂ ಸಿಗುವ ಸಾಧ್ಯತೆ ದಟ್ಟವಾಗಿದೆ. ಸಿಎಂ ಸಿದ್ದರಾಮಯ್ಯ ಗೃಹ ಇಲಾಖೆಯೊಂದಿಗೆ ನಡೆಸಿದ ಚರ್ಚೆಯಲ್ಲಿ, ಗೃಹ ಸಚಿವ ಡಾ.ಜಿ. ಪರಮೇಶ್ವರ ಕೇಂದ್ರ ಸರಕಾರದ ನಿಯಮದ ಪ್ರಕಾರ 15 ವರ್ಷವಾಗಿರುವ ವಾಹನಗಳನ್ನು ಬಳಸುವಂತಿಲ್ಲ ಎಂದಿರುವುದರಿಂದ ಹೊಸ ವಾಹನ ಖರೀದಿಸುವ ಸಾಧ್ಯತೆಯಿದೆ.

ಡಿಕೆಶಿ, ಯತೀಂದ್ರ ಹೇಳಿಕೆ ವೈಯಕ್ತಿಕ, ವರಿಷ್ಠರೇ ಅಂತಿಮ: ಗೃಹಸಚಿವ

ಹೈಕಮಾಂಡ್ ಸುಮ್ಮನಿದೆ ಅಂದರೆ ಬದಲಾವಣೆ ಇಲ್ಲ: ಪರಮೇಶ್ವರ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತಣ್ಣಗಾಗಿದ್ದ 'ಮುಖ್ಯಮಂತ್ರಿ ಬದಲಾವಣೆ' ವಿಷಯ, ಯತೀಂದ್ರ ಅವರ 'ಪೂರ್ಣಾವಧಿ ಸಿಎಂ' ಹೇಳಿಕೆ ಬಳಿಕ ಮತ್ತೆ ಮುನ್ನಲೆಗೆ ಬಂದಿದ್ದು, ಕೂಡಲೇ ಹೈಕಮಾಂಡ್ ಮಧ್ಯಪ್ರವೇಶಿಸಬೇಕು ಎನ್ನುವ ಆಗ್ರಹ ಶುರುವಾಗಿದೆ. ಬೆಳಗಾವಿ ಅಧಿವೇಶನದ ವೇಳೆ 'ಕದನ ವಿರಾಮ' ಘೋಷಣೆಯಾದ ಬಳಿಕ ಜಂಟಿ ಅಧಿವೇಶನ ಮುಗಿಯುವ ತನಕ ನಾಯಕತ್ವ ಬದಲಾವಣೆ ವಿಷಯ ಚರ್ಚೆಯಾಗಿರಲಿಲ್ಲ. ಆದರೆ ಮೈಸೂರಿನಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರ 'ಪೂರ್ಣಾವಧಿ' ಸಿಎಂ ಹೇಳಿಕೆಯ ಬಳಿಕ ಪುನಃ ಪಕ್ಷದಲ್ಲಿ ಗೊಂದಲ ಶುರುವಾಗಿದೆ. ಈ ಗೊಂದಲಕ್ಕೆ ತಾರ್ತಿಕ ಅಂತ್ಯವನ್ನು ಹೈಕಮಾಂಡ್ ಕಾಣಿಸಬೇಕು ಎನ್ನುವ ಮಾತುಗಳು ಕೇಳಿಬರುತ್ತಿದೆ.

ಈ ಬಗ್ಗೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ, ದೆಹಲಿಯಲ್ಲಿ ಏನು ನಡೆದಿದೆ ಎನ್ನುವುದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಪಕ್ಷದ ಹೈಕಮಾಂಡ್‌ಗೆ ಮಾತ್ರ ಗೊತ್ತಿದೆ. ಹೈಕಮಾಂಡ್ ಸುಮ್ಮನೆ ಇದೆ ಎಂದರೆ ನಾವೇನು ಅರ್ಥ ಮಾಡಿಕೊಳ್ಳಬೇಕು? ಸದ್ಯ ಯಾವುದೇ ಮಾತಾಡಿಲ್ಲ ಎಂದರೆ ಯಾವುದೇ ಬದಲಾವಣೆ ಇಲ್ಲ ಎಂದರ್ಥ ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಎಂಬುದು ಇತ್ಯರ್ಥ ಆಗಿರುವ ವಿಚಾರ ಎನ್ನುವ ಯತೀಂದ್ರ ಹೇಳಿಕೆ ವೈಯಕ್ತಿಕ. ನಾವು ಹೈಕಮಾಂಡ್ ಮೇಲೆ ಅವಲಂಬಿಸಿದ್ದೇವೆ. ಅಧಿಕಾರದ ಒಪ್ಪಂದವಾಗಿದೆ ಎಂದರೆ ಯಾರು ಹೇಳಿದ್ದು? ಹೈಕಮಾಂಡ್‌ನವರು ಹೇಳಿದ್ದಾರಾ? ಅದನ್ನು ಹೈಕಮಾಂಡ್ ಹೇಳಬೇಕು. ಅದರ ಬಗ್ಗೆ ಡಿಕೆಶಿ ಹೇಳಿರಬಹುದು. ಅದು ಅವರ ಅಭಿಪ್ರಾಯ. ಅವರಿಗೆ ಗೊತ್ತಿರುವ ವಿಚಾರ ನಮಗೆ ಗೊತ್ತಿಲ್ಲ ಎಂದರು.

ಒಂದು ವೇಳೆ ಇಬ್ಬರ ನಡುವೆ ಒಪ್ಪಂದವಾಗಿದ್ದರೆ ಹೈಕಮಾಂಡ್ ಹೇಳಬಹುದು ಅಥವಾ ಕ್ರಮವಹಿಸಬಹುದು. ಹೈಕಮಾಂಡ್ ಏನೂ ಹೇಳದೇ, ಏನೂ ತೀರ್ಮಾನ ಮಾಡದೇ ನಮಗೆ ಕೇಳಿದರೆ ಪ್ರಯೋಜನವಿಲ್ಲ. ಇಂತಹ ಪರಿಸ್ಥಿತಿಯನ್ನು ಯಾವ ರೀತಿ ನಿಭಾಯಿಸಬೇಕು ಎನ್ನುವುದು ಹೈಕಮಾಂಡ್‌ಗೆ ಗೊತ್ತಿದೆ. ಯಾರು ಏನೇ ಹೇಳಿಕೆ ನೀಡಿದರೂ ಅಂತಿಮ ನಿರ್ಧಾರ ಹೈಕಮಾಂಡ್ ಮಾಡಬೇಕು. ಯಾವಾಗ ತೀರ್ಮಾನ ಮಾಡಬೇಕೋ, ಅದನ್ನು ಮಾಡುತ್ತಾರೆ ಎಂದಿದ್ದಾರೆ.

ಮುಖ್ಯಮಂತ್ರಿ ಕುರ್ಚಿ ವಿಷಯಕ್ಕೆ ಸಂಬಂಧಿಸಿದಂತೆ ಒಪ್ಪಂದವಾಗಿದ್ದರೆ ಹೈಕಮಾಂಡ್ ಹೇಳಬಹುದು ಅಥವಾ ಕ್ರಮ ತಗೆದುಕೊಳ್ಳಬಹುದು. ಏನೂ ಹೇಳದೇ, ಏನೂ ತೀರ್ಮಾನ ಮಾಡದೇ ನಮಗೆ ಕೇಳಿದರೆ ಯಾವುದೇ ಪ್ರಯೋಜನವಿಲ್ಲ. ಹೈಕಮಾಂಡ್‌ಗೆ ಏನು ಮಾಡಬೇಕು ಅಂತ ಗೊತ್ತಿದೆ. ಈ ವಿಷಯವನ್ನು ಹೇಗೆ ನಿಭಾಯಿಸಬೇಕು ಎನ್ನುವುದು ದೆಹಲಿ ನಾಯಕರಿಗೆ ಗೊತ್ತಿದೆ. ಯಾವಾಗ ತೀರ್ಮಾನಿಸಬೇಕೋ ಅಗ ತೀರ್ಮಾನಿಸುತ್ತಾರೆ.
-ಡಾ.ಜಿ. ಪರಮೇಶ್ವರ, ಗೃಹ ಸಚಿವ

ಸೊಂಪಾದ ಪುಟಗಳು

ರಾಜೀನಾಮೆ ಕೊಡ್ತೀನಂದ್ರಾ ಮಲ್ಲಿಕಾರ್ಜುನ್?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಮೌನಕ್ರಾಂತಿಯಲ್ಲಿ ತೊಡಗಿಸಿಕೊಂಡ ಡಬ್ಬಾವಾಲಾಗಳು
ವಿದೇಶವಾಸಿ
ಕಿರಣ್ ಉಪಾಧ್ಯಾಯ, ಬಹ್ರೈನ್ 6

ದಾರಿದೀಪೋಕ್ತಿ

ಜೀವನ ಅಂದ್ರೆ ಎಲ್ಲವನ್ನೂ ಹೊಂದಿರುವುದಲ್ಲ, ಆದರೆ ಏನನ್ನು ಹೊಂದಿದ್ದೇವೋ ಆ ಎಲ್ಲವುಗಳಿಗೂ ಅರ್ಥವನ್ನು ಹೊಂದುವುದು. ಆಗ ಮಾತ್ರ ನಾವು ಯಾಕೆ ಅವುಗಳನ್ನು ಪಡೆಯಲು ಪ್ರಯತ್ನಿಸಿದ್ದು ಎಂಬುದು ಗೊತ್ತಾಗುತ್ತದೆ.

ವಕ್ರತುಂಡೋಕ್ತಿ

ಪ್ರೀತಿಗಿಂತ ವೈಫೈ ಮುಖ್ಯ. ಕಾರಣ ಪ್ರೀತಿ ಇಲ್ಲದಿದ್ದರೂ ಬದುಕಬಹುದು, ಆದರೆ ವೈಫೈ ಇಲ್ಲದೇ ಒಂದು ನಿಮಿಷವೂ ಬದುಕುವುದು ಅಸಾಧ್ಯ.

ಮಲೇಷ್ಯಾ ಜೊತೆ ಪ್ರಧಾನಿ ಮೋದಿ ಮಹತ್ವದ ಮಾತುಕತೆ

ಕೌಲಾಲಂಪುರ: ಭಯೋತ್ಪಾದನೆ, ಉಗ್ರರ ನಾಶ ವಿಚಾರದಲ್ಲಿ ರಾಜೀ ಎಂಬುದು ಇಲ್ಲ. ಇಬ್ಬಗೆ ನಿಲುವಂತೂ ಇಲ್ಲವೇ ಇಲ್ಲ ಎಂದು ಭಾರತ ದೃಢವಾಗಿ ಹೇಳಿದೆ. ಎರಡು ದಿನಗಳ ಮಲೇಷ್ಯಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಕೌಲಾಲಂಪುರದಲ್ಲಿ ಈ ಮಾತನ್ನು ಭಾನುವಾರ ಸ್ಪಷ್ಟವಾಗಿ ಹೇಳಿದ್ದಾರೆ. ರಕ್ಷಣಾ ವಲಯ ಮತ್ತು ಭದ್ರತೆ ಹಾಗೂ ಸೆಮಿಕಂಡಕ್ಟರ್‌ಗಳ ತಯಾರಿಕೆ ವಿಚಾರದಲ್ಲಿ ಪರಸ್ಪರ ಸಹಕಾರ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಜತೆ ಪುತ್ರಜಯದಲ್ಲಿನ 'ಪೆರ್ದಾನಾ ಪುತ್ರ' ಭವನದಲ್ಲಿ ಮಹತ್ವದ ಸಭೆ ನಡೆಸಿದ ಪ್ರಧಾನಿ ಮೋದಿ, ಇನ್ನೂ ಹಲವು ವಿಚಾರಗಳ ಕುರಿತು ಮಾತುಕತೆ ನಡೆಸಿದ್ದಾರೆ.

ಭಾರತದ ರಷ್ಯಾ ತೈಲ ಖರೀದಿ ಇಳಿಮುಖ?

ದೆಹಲಿ: ಅಮೆರಿಕ ಜತೆಗಿನ ಇತ್ತೀಚಿನ ಒಪ್ಪಂದದ ಪೂರ್ಣ ಜಾರಿಗಾಗಿ ಭಾರತ, ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿಮೆ ಮಾಡಲಿದೆ. ಆದರೆ ಪೂರ್ಣವಾಗಿ ಸ್ಥಗಿತಗೊಳಿಸುವುದಿಲ್ಲ ಎಂದು ಮೂಲಗಳು ಹೇಳಿವೆ. ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿ ಅಮೆರಿಕದಿಂದ ಖರೀದಿಸಿ, ಇಲ್ಲವೇ ಅಮೆರಿಕದ ನಿಯಂತ್ರಣದಲ್ಲಿರುವ ವೆನೆಜುವೆಲಾದಲ್ಲಿನ ತೈಲ ಕಂಪನಿಗಳಿಂದ ಖರೀದಿಸಿ ಎಂದು ಟ್ರಂಪ್, ಭಾರತದ ಮೇಲೆ ಒತ್ತಡ ಹೇರುತ್ತಿದ್ದಾರೆ. ಭಾರತದ ತೆರಿಗೆ ಕಡಿತ ಮಾಡಿದ್ದನ್ನು ಜಾರಿ ಮಾಡಬೇಕಾದರೆ ರಷ್ಯಾದಿಂದ ತೈಲ ಖರೀದಿ ಕಡಿಮೆ ಮಾಡುವುದು ಅನಿವಾರ್ಯ ಎನ್ನಲಾಗಿದೆ. ಈ ಕುರಿತು ಕೇಂದ್ರ ಸರಕಾರವಾಗಲೀ, ರಷ್ಯಾವಾಗಲೀ ಯಾವುದೇ ಅಧಿಕೃತ ಹೇಳಿಕೆಯನ್ನು ಇನ್ನೂ ನೀಡಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜಸ್ಥಾನದ ಆಭರಣ ಅಂಗಡಿಯೊಂದರಿಂದ ಚಿನ್ನದ ಸರ ಕಚ್ಚಿ ಹಾರಿಹೋದ ಪಾರಿವಾಳ. ಸುದ್ದಿ



ಸಮಾಚಾರ ಸಣ್ಣದಲ್ಲ

ಚಂದ್ರಚೂಡ್ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಅಸಂವಿಧಾನಿಕ ಪದಬಳಕೆ ಆರೋಪದ ಮೇಲೆ ನಟ ಹಾಗೂ ನಿರ್ದೇಶಕ ಚಕ್ರವರ್ತಿ ಚಂದ್ರಚೂಡ್ ವಿರುದ್ಧ ಉಪ್ಪರ ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.ನಿರ್ಮಾಪಕ ಕೆ.ಮಂಜು ನೀಡಿದ ದೂರಿನ ಆಧಾರದ ಮೇಲೆ ಎಫ್ ಐಆರ್ ದಾಖಲಾಗಿದೆ. ಬಿಎನ್‌ಎಸ್ ಸೆಕ್ಷನ್ 351, 352 ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಮಾನಹಾನಿ, ಬೆದರಿಕೆ, ಶಾಂತಿ ಭಂಗವನ್ನ ಉಂಟು ಮಾಡುವ ಆರೋಪದಡಿಲ್ಲಿ ಪ್ರಕರಣ ದಾಖಲಾಗಿದೆ. ಚಕ್ರವರ್ತಿ ಚಂದ್ರಚೂಡ್ ನಿರ್ಮಾಪಕರ ಬಗ್ಗೆ ಅಸಂವಿಧಾನಿಕ ಪದಬಳಕೆ ಮಾಡಿ ಮಾತನಾಡಿದ್ದರು. ಕನ್ನಡ ಚಿತ್ರ ನಿರ್ಮಾಪಕರ ಪರವಾಗಿ ನಿರ್ಮಾಪಕ ಕೆ.ಮಂಜು ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ಸಂಬಂಧ ಆರಂಭದಲ್ಲಿ ಎನ್‌ಸಿಆರ್ ದಾಖಲಾಗಿತ್ತು. ಕೋರ್ಟ್ ಅನುಮತಿ ಪಡೆದು, ಚಂದ್ರಚೂಡ್ ವಿರುದ್ಧ ಎಫ್ ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಪ್ರಕರಣ ಸಂಬಂಧ ಹೇಳಿಕೆ ಪಡೆಯಲು ನಟ ನಿರ್ದೇಶಕ ಚಂದ್ರಚೂಡ್‌ಗೆ ನೋಟಿಸ್ ಕೊಟ್ಟು ವಿಚಾರಣೆಗೆ ಕರೆಯಲು ಉಪ್ಪಾರ ಪೇಟೆ ಪೊಲೀಸರು ಮುಂದಾಗಿದ್ದಾರೆ.

ಪೊಲೀಸರಿಗೆ ಬೆದರಿಕೆ ರೌಡಿಶೀಟರ್ ಬಂಧನ

ಬೆಂಗಳೂರು: ಕರ್ತವ್ಯಕ್ಕೆ ಅಡ್ಡಿಪಡಿಸಿ, ಪೊಲೀಸರಿಗೆ ಜೀವ ಬೆದರಿಕೆ ಹಾಕಿದ ರೌಡಿಶೀಟರ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಪಳನಿ ಅಲಿಯಾಸ್ ಕರ್ಚೀಫ್ ಪಳನಿ (42) ಬಂಧಿತ. ಬೆಳ್ಳಂದೂರು ಠಾಣಾ ವ್ಯಾಪ್ತಿಯ ರೌಡಿಶೀಟರ್‌ಗಳು ಸೇರಿ ಕೋಣನಕುಂಟೆ, ಕೆ.ಎಸ್.ಲೇಔಟ್, ವಿಲ್ಸನ್ ಗಾರ್ಡನ್, ಬೆಳ್ಳಂದೂರು ಸೇರಿ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಕೊಲೆ, ಕೊಲೆಗೆ ಯತ್ನ ಮತ್ತು ಮಕ್ಕಳ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದವರ ಬಗ್ಗೆ ಸಿಸಿಬಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದರು. ಈ ವೇಳೆ ಅಶೋಕ ನಗ ಪೊಲೀಸ್ ಠಾಣೆಯ ರೌಡಿಶೀಟರ್ ಪಳನಿ, ಕಸವನಹಳ್ಳಿಯ ಸ್ಲಂಬೋರ್ಡ್ ಮನೆಯಲ್ಲಿ ವಾಸವಾಗಿದ್ದುಕೊಂಡು ಸ್ಥಳೀಯರಿಗೆ ಬೆದರಿಕೆ ಹಾಕಿ , ಹಣ ವಸೂಲು ಮಾಡುತ್ತಿದ್ದ. ಸ್ಥಳಕ್ಕೆ ತೆರಳಿದ್ದ ಸಿಸಿಬಿ ಪೊಲೀಸರ ಮೇಲೆ ಏರುಧ್ವನಿಯಲ್ಲಿ ಮಾತನಾಡಿ, ಬೆದರಿಕೆ ಹಾಕಿ, ಕಲ್ಲಿನಿಂದ ಹಲ್ಲೆಗೆ ಯತ್ನ ನಡೆಸಿದ್ದ. ಆರೋಪಿ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆಗೆ ಯತ್ನ. ಸುಲಿಗೆ, ದರೋಡೆ, ಕಳ್ಳತನ ಸೇರಿ ಒಟ್ಟು 15ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಕ್ಯಾಬ್ ಚಾಲಕನ ಮೇಲೆ ಯುವತಿಯರ ಹಲ್ಲೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಅಪಘಾತ ಮಾಡಿ, ಕ್ಯಾಬ್ ಚಾಲಕನ ಮೇಲೆ ಇಬ್ಬರು ಯುವತಿಯರು ಹಲ್ಲೆ ನಡೆಸಿದ್ದಾರೆ. ಯುವತಿಯರು ಜೆ.ಪಿ.ನಗರ ಹಾಗೂ ಕೋರಮಂಗಲದಲ್ಲಿ ವಾಸವಾಗಿದ್ದಾರೆ. ಕ್ಯಾಬ್ ಚಾಲಕನ ಜತೆ ಗಲಾಟೆ ಮಾಡಿಕೊಂಡು, ರಂಪಾಟ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಹುಳಿಮಾವು ಪೊಲೀಸ್ ಠಾಣೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆಯ ಖಾಸಗಿ ಹೋಟೆಲ್‌ಗೆ ಸ್ನೇಹಿತರೊಂದಿಗೆ ಬಂದಿದ್ದ ಉತ್ತರ ಭಾರತದ ಲೀಸಾ ಹಾಗೂ ಮ್ಯಾಥ್ಯೂ ಅವರು ತಮ್ಮ ದ್ವಿಚಕ್ರ ವಾಹನವನ್ನು ಕ್ಯಾಬ್‌ಗೆ ಡಿಕ್ಕಿ ಹೊಡೆಸಿದ್ದಾರೆ. ಇದನ್ನು ಪ್ರಶ್ನಿಸಿದ್ದ ಚಾಲಕ ಅಹ್ಮದ್ ಜತೆ ವಾಗ್ವಾದಕ್ಕೆ ಇಳಿದಿದ್ದಾರೆ. ಈ ವೇಳೆ ಬುದ್ಧಿ ಹೇಳಲು ಬಂದ ಸ್ಥಳೀಯರ ಜತೆಗೂ ಗಲಾಟೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಹುಳಿಮಾವು ಠಾಣೆ ಪೊಲೀಸರು ಭೇಟಿ ನೀಡಿ ಯುವತಿಯರನ್ನು ನಿಯಂತ್ರಿಸಿದ್ದಾರೆ. ಇಬ್ಬರನ್ನೂ ಠಾಣೆಗೆ ಕರೆದೊಯ್ದ ಪೊಲೀಸರು, ಹೇಳಿಕೆ ದಾಖಲಿಸಿಕೊಂಡು, ಬುದ್ಧಿವಾದ ಹೇಳಿ ಕಳುಹಿಸಿದ್ದಾರೆ.

ಬೆಳೆ ಮತ್ತು ಗ್ರಾಮೀಣ ಮಿಷನ್‌ಅಡಿ ರಾಜ್ಯಕ್ಕೆ 191.67 ಕೋಟಿ.ರು ಅನುದಾನ | ವಿಶ್ವದ ಮಾರುಕಟ್ಟೆಗೆ ಸಿರಿಧಾನ್ಯ ತಲುಪಿಸಲು ಕೇಂದ್ರ ಕ್ರಮ: ಚೌಹಾಣ್

ರೈತರ ವಿಷಯದಲ್ಲಿ ರಾಜಕೀಯ ಮಾಡುವುದಿಲ್ಲ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ 2026ರ ಅಂತಾರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ ಭಾನುವಾರ ಸಂಭ್ರಮದ ತೆರೆ ಬಿದ್ದಿದೆ. ಕೃಷಿ, ಕೈಗಾರಿಕೆ, ತಂತ್ರಜ್ಞಾನ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ನವೋದ್ಯಮ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವಿಸ್ತರಣೆಗೆ ರೈತರ ವಾಣಿಜ್ಯ ಮೇಳ ಹೊಸ ದಿಕ್ಕು ನೀಡಿದೆ. ದೇಶ-ವಿದೇಶಗಳ ಪ್ರದರ್ಶಕರು, ಉದ್ಯಮಿಗಳು ಹಾಗೂ ಲಕ್ಷಾಂತರ ರೈತರು ಮತ್ತು ನಾಗರಿಕರು ಭಾಗವಹಿಸಿ ಅಂತರಾಷ್ಟ್ರೀಯ ವಾಣಿಜ್ಯ ಮೇಳವನ್ನು ಯಶಸ್ವಿಗೊಳಿಸಿದರು.

ಭಾನುವಾರ ನಡೆದ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು, ರಾಜ್ಯದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಬೆಳೆ ಮಿಷನ್ ಮತ್ತು ಗ್ರಾಮೀಣ ಮಿಷನ್ ಅಡಿಯಲ್ಲಿ ಕರ್ನಾಟಕಕ್ಕೆ 191.67 ಕೋಟಿ ರು. ಬಿಡುಗಡೆ ಮಾಡಿ, ಅನುಮೋದನಾ ಪತ್ರವನ್ನು ಹಸ್ತಾಂತರಿಸಿದರು. ಈ ವೇಳೆ ಮಾತನಾಡಿದ ಅವರು, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬಾಕಿ ಇರುವ 154 ಕೋಟಿ ರು. ಶೀಘ್ರದಲ್ಲೇ ಬಿಡುಗಡೆ ಮಾಡಲಾಗುತ್ತದೆ ಎಂದರು.

ರೈತರು ರಾಜಕೀಯವನ್ನು ಮೀರಿ ಮೇಲಿನ ಸ್ಥಾನದಲ್ಲಿರುವವರು. ಕರ್ನಾಟಕದಲ್ಲಿ ಕೃಷಿಯನ್ನು ಬಲಪಡಿಸಲು, ರೈತರ ಆದಾಯ ಹೆಚ್ಚಿಸಲು ಮತ್ತು ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಚಟುವಟಿಕೆಗಳನ್ನು ವಿಸ್ತರಿಸಲು ಕೇಂದ್ರ ಸರಕಾರ ಯಾವುದೇ ಭೇದಭಾವವಿಲ್ಲದೆ ರಾಜ್ಯ ಸರಕಾರದೊಂದಿಗೆ ಹೆಗಲಿಗೆ ಹೆಗಲು ಸೇರಿಸಿ ಕೆಲಸ ಮಾಡಲಿದೆ. ತೊಗರಿ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದ್ದು, ಆದರೆ ಪ್ರತಿ ಹೆಕ್ಟೇರ್



ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಬೆಳೆ ಮಿಷನ್ ಮತ್ತು ಗ್ರಾಮೀಣ ಮಿಷನ್ ಅಡಿಯಲ್ಲಿ ಹಣ ಬಿಡುಗಡೆ ಮಾಡಿದ ಅನುಮೋದನಾ ಪತ್ರವನ್ನು ಹಸ್ತಾಂತರಿಸಿದರು. ಈ ವೇಳೆ ರಾಜ್ಯ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಉಪಸ್ಥಿತರಿದ್ದರು.

ಉತ್ಪಾದನೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದೆ ಹೀಗಾಗಿ ಇಳುವರಿ ಹೆಚ್ಚಿಸಲು ಉತ್ತಮ ಬೀಜ, ವಿಜ್ಞಾನಾಧಾರಿತ ಕೃಷಿ ಹಾಗೂ ಹೊಸ ತಂತ್ರಜ್ಞಾನಗಳ ಅಳವಡಿಕೆ ಮುಖ್ಯ ಎಂದರು.

35 ದಾಲ್ ಮಿಲ್ ಸ್ಥಾಪನೆ ಹಾಗೂ ಸಹಾಯಧನ:

ಉತ್ಪಾದನೆಯ ಜತೆಗೆ ಸಂಸ್ಕರಣೆ ಅಗತ್ಯವಾಗಿದ್ದು, ಆ ಸಲುವಾಗಿ ಕರ್ನಾಟಕದಲ್ಲಿ 35 ದಾಲ್ ಮಿಲ್‌ಗಳನ್ನು ಸ್ಥಾಪಿಸಲಾಗುವುದು. ಜತೆಗೆ ಪ್ರತಿ ಮಿಲ್‌ಗೆ ಕೇಂದ್ರದಿಂದ 25 ಲಕ್ಷ ರು. ಅನುದಾನ ನೀಡಲಾಗುತ್ತದೆ. ರೈತ ಉತ್ಪಾದಕ ಸಂಘಗಳು, ರೈತ ಗುಂಪುಗಳು ಮತ್ತು ಖಾಸಗಿ ವಲಯವನ್ನು ಈ ಘಟಕಗಳನ್ನು ಸ್ಥಾಪಿಸಲು ಉತ್ತೇಜಿಸಲಾಗುತ್ತದೆ. ಇದರಿಂದ ರೈತರಿಗೆ ಉತ್ತಮ ಬೆಲೆ ಮತ್ತು ಗ್ರಾಮೀಣ ಉದ್ಯೋಗ ಸೃಷ್ಟಿ ಸಾಧ್ಯವಾಗಲಿದೆ ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ಕೇಂದ್ರ ಕೃಷಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕರ್ನಾಟಕ ಮಾದರಿ ರಾಜ್ಯವಾಗಿ ಹೊರಹೊಮ್ಮಿದ್ದು, ಕೃಷಿ ಕ್ಷೇತ್ರದಲ್ಲಿ ರಫ್ತು ಮತ್ತು ಮೂಲಸೌಕರ್ಯಗಳನ್ನು ವಿಸ್ತರಿಸಲು ಕೇಂದ್ರ ಸರಕಾರದ ಹೆಚ್ಚಿನ ಬೆಂಬಲದ ಅಗತ್ಯವಿದೆ. ರೈತರನ್ನು ಕೃಷಿ ಉದ್ಯಮಿಗಳಾಗಿ ರೂಪಿಸಲು ಹಾಗೂ ದೇಶದ ಕೃಷಿ ಆರ್ಥಿಕತೆಯನ್ನು ಬಲಪಡಿಸಲು ಕೇಂದ್ರ-ರಾಜ್ಯಗಳ ಸಮನ್ವಯ ಅತ್ಯಂತ ಅಗತ್ಯ ಎಂದರು.

ಕರ್ನಾಟಕ ದೇಶದಲ್ಲೇ ಸಾವಯವ ಕೃಷಿ, ಸಿರಿಧಾನ್ಯಗಳು ಮತ್ತು ಆಹಾರ ಸಂಸ್ಕರಣೆಗೆ ಮೊದಲ ಆದ್ಯತೆ ನೀಡಿದ ರಾಜ್ಯವಾಗಿದೆ. 10 ವಿಭಿನ್ನ ಕೃಷಿ-ಹವಾಮಾನ ವಲಯಗಳನ್ನು ಹೊಂದಿರುವ ರಾಜ್ಯ ವೈವಿಧ್ಯತೆ, ಸಿರಿಧಾನ್ಯಗಳು, ಕಾಫಿ, ರೇಷ್ಮೆ, ಮಸಾಲೆ ಪದಾರ್ಥಗಳು ಹಾಗೂ ಸಂಸ್ಕರಿಸಿದ ಹಣ್ಣು-ತರಕಾರಿಗಳ ಉತ್ಪಾದನೆ ಮತ್ತು ರಫ್ತಿನಲ್ಲಿ ಕರ್ನಾಟಕವನ್ನು ಪ್ರಮುಖ ಕೇಂದ್ರವನ್ನಾಗಿ ರೂಪಿಸಿದೆ.

ಮಳಿಗೆಗಳಿಗೆ ಪ್ರಶಸ್ತಿ ಪ್ರದಾನ

ವಾಣಿಜ್ಯ ಮೇಳದಲ್ಲಿ ಸ್ಥಾಪಿಸಿದ 300 ಕ್ಕೂ ಹೆಚ್ಚು ಮಳಿಗೆಗಳಿದ್ದು, ಅದರಲ್ಲಿ ಪ್ರೀಮಿಯಂ ಮಳಿಗೆ ವಿಭಾಗದಲ್ಲಿ ಅಕ್ಷಯ ಕಲ್ಪ ಆರ್ಗಾನಿಕ್ಸ್ ಸಂಸ್ಥೆಗೆ , ಮೀಡಿಯಂ ಮತ್ತು ಎಕನಾಮಿಕ್ ವಿಭಾಗದಲ್ಲಿ ಅಥರ್ವ್ ಆರ್ಗಾನಿಕ್ಸ್ ಸಂಸ್ಥೆ, ಮಲೆನಾಡು ರೈತ ಉತ್ಪಾದನ ಸಂಸ್ಥೆಗೆ, ಫುಡ್ ಪ್ರೊಸೆಸಿಂಗ್ ಮತ್ತು ವ್ಯಾಲ್ಯೂ ಎಡಿಷನ್ ವಿಭಾಗದಲ್ಲಿ ಕೆಪೆಕ್‌ನ ವಸಂತಿ ಆಗ್ರೋ ಇನ್ನೋವೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕದ ಸಿರಿಧಾನ್ಯ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳು ದೇಶ ಮತ್ತು ವಿಶ್ವದ ಮಾರುಕಟ್ಟೆಗಳಿಗೆ ತಲುಪಿಸಲು ಕೇಂದ್ರ ಕ್ರಮ ಕೈಗೊಳ್ಳಲಿದೆ. ಪ್ರದರ್ಶನದಲ್ಲಿ ಹಲವು ಉತ್ಪನ್ನಗಳನ್ನು ಸ್ವತಃ ಪರಿಶೀಲಿಸಿದ್ದೇನೆ ಜತಗೆ ಅವುಗಳ ಗುಣಮಟ್ಟವು ಹೆಚ್ಚಿದ್ದು, ಕರ್ನಾಟಕದ ಬ್ರಾಂಡ್‌ಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ನೀಡಲಾಗುತ್ತದೆ.

- ಶಿವರಾಜ್‌ಸಿಂಗ್ ಚೌಹಾಣ್ ಕೇಂದ್ರ ಕೃಷಿ ಸಚಿವ

ಸಿರಿಧಾನ್ಯಗಳ ಮಹತ್ವವನ್ನು ದೇಶಕ್ಕೆ ಹಾಗೂ ಜಗತ್ತಿಗೆ ಪರಿಚಯಿಸುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. 2018ರಲ್ಲಿ ವಾಣಿಜ್ಯ ವೇಳದ ವೇದಿಕೆಯಿಂದ ಆರಂಭವಾದ ಪ್ರಯತ್ನದ ಫಲವಾಗಿ, 2023ನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಿಸಲಾಗಿದ್ದು, ಇದರಲ್ಲಿ ಕರ್ನಾಟಕದ ಪಾತ್ರ ಮಹತ್ವದ್ದು. ಕೃಷಿ ವೆಚ್ಚದಲ್ಲಿ ಶ್ರಮ ವೆಚ್ಚವೇ ಶೇ. 50ರಷ್ಟು ಇರುವುದರಿಂದ, ಯಾಂತ್ರೀಕರಣದಿಂದ ರೈತರ ವೆಚ್ಚ ಕಡಿಮೆ ಮಾಡಬಹುದು. ಜತೆಗೆ, ಮಾರುಕಟ್ಟೆ ಅರಿವು ಹಾಗೂ ಅಂತರರಾಷ್ಟ್ರೀಯ ಬೇಡಿಕೆ ಹೆಚ್ಚಿಸಿದರೆ ಸಿರಿಧಾನ್ಯಗಳಿಗೆ ಉತ್ತಮ ಬೆಲೆ ದೊರೆಯುತ್ತದೆ.

-ಕೃಷ್ಣ ಬೈರೇಗೌಡ ಕಂದಾಯ ಸಚಿವ

ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳ ಅಧಿಕೃತೀಕರಣ ಯೋಜನೆ ಜಾರಿಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದು, ಸಾವಿರಾರು ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲ ಮತ್ತು ಸಹಾಯಧನ ನೀಡಲಾಗಿದೆ. ಕೇಂದ್ರ ಸರಕಾರದ ಶೇ. 35 ರಷ್ಟು ಸಹಾಯಧನ ನೀಡುವ ಯೋಜನೆಗೆ ರಾಜ್ಯ ಸರಕಾರ ಹೆಚ್ಚುವರಿ ಶೇ.15 ನೆರವು ನೀಡುತ್ತಿದ್ದು, ಉದ್ಯಮಿಗಳಿಗೆ ಒಟ್ಟು ಶೇ. 50 ರಷ್ಟು ಸಹಾಯಧನ ಸಿಗುತ್ತಿದೆ ಎಂದರು.

ಈ ವೇಳೆ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ್ ಎಂ. ದಳವಾಯಿ, ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷ ಎಂ. ಆಂಜನೇಯಪ್ಪ, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆಯ ಅಧ್ಯಕ್ಷ ಲಾವಣ್ಯ ಬಿಲ್ಲಾಲ್ ಜೈನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರೀತಿಸಿದ ಯುವತಿಗೆ ಮದುವೆ ನಿಶ್ಚಯ; ಬಾಡಿಬಿಲ್ಡರ್ ಆತ್ಮಹತ್ಯೆ

ಬೆಂಗಳೂರು: ಪ್ರೀತಿಸಿದ ಯುವತಿಗೆ ಬೇರೊಬ್ಬನ ಜತೆ ಮದುವೆ ನಿಶ್ಚಯವಾಯಿತೆಂದು ನೊಂದು ಡೆತ್ ನೋಟ್ ಬರೆದಿಟ್ಟು ಬಾಡಿಬಿಲ್ಡರ್ ಆತ್ಮಹತ್ಯೆಗೆ ಶರಣಾದ ಘಟನೆ ಮಹಾಲಕ್ಷ್ಮೀ ಲೇಔಟ್‌ನಲ್ಲಿ ಘಟನೆ ನಡೆದಿದೆ. ಮನೆಯಲ್ಲಿ ನೇಣು ಬಿಗಿದು ಕೊಂಡು ಕಿರಣ್ (26) ಎಂಬವರು ಸಾವನ್ನಪ್ಪಿದ್ದಾರೆ. ಇವರು ಮೂರು ವರ್ಷ ಗಳಿಂದ ಯುವತಿ ಯೋರ್ವಳನ್ನು ಪ್ರೀತಿಸುತ್ತಿದ್ದರು. ಆಕೆಗೆ ಬೇರೆ ಯುವಕನ ಜತೆ ಮದುವೆ ನಿಶ್ಚಯವಾದ ಕಾರಣ, ಯುವತಿ ಹಾಗೂ ಆಕೆಯ ತಾಯಿಯ ಹೆಸರನ್ನು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿ ಆತ್ಮಹತ್ಯೆಗೆ ಶರಣಾಗಿರುವುದು ತಿಳಿದು ಬಂದಿದೆ.ಹಲವು ವರ್ಷಗಳಿಂದ ಜಿಮ್ ಟ್ರೈನರ್, ಬಾಡಿ ಬಿಲ್ಡರ್ ಆಗಿ ಗುರುತಿಸಿಕೊಂಡಿದ್ದ ಕಿರಣ್, ಮೂರು ವರ್ಷಗಳಿಂದ ಯುವತಿಯನ್ನು ಪ್ರೀತಿಸುತ್ತಿದ್ದರು. ಆದರೆ ತನಗೆ ಬೇರೆ ಯುವಕನೊಂದಿಗೆ ಮದುವೆ ನಿಶ್ಚಯವಾಗಿದೆ ಎಂದಿದ್ದ ಯುವತಿ, ಆಮಂತ್ರಣ ಪತ್ರಿಕೆ, ಹೊಸ ಸೀರೆಯ ಫೋಟೋಗಳನ್ನು ತೋರಿಸಿದ್ದರು ಎಂಬ ಮಾಹಿತಿ ಇದೆ. ಇದರಿಂದಾಗಿ ಕಿರಣ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಮಹಾಲಕ್ಷ್ಮೀಲೇಔಟ್ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಪ್ರಿಯತಮೆಗೆ ಬೇರೆ ಮದುವೆ ವಿಚಾರ ತಿಳಿದು ಬೇಸರದಲ್ಲಿ ಮನೆಗೆ ಬಂದಿದ್ದ ಕಿರಣ್ ಶನಿವಾರ ಸಂಜೆ ವೈಟ್ ಶೀಟ್ ಮತ್ತು ಪೆನ್ ಕೊಡುವಂತೆ ಕೇಳಿದ್ದಾನೆ. ಯಾಕಪ್ಪಾ ವೈಟ್ ಹಾಳೆ? ಎಂದು ವಿಚಾರಿಸಿದಾಗ, 'ಹೆದರಬೇಡಮ್ಮ ಫೈನಾನ್ಸ್ ಲೆಕ್ಕ ಬರೀತೀನಿ' ಎಂದಿದ್ದ. ಆದರೆ ಪ್ರಾಣ ಕಳೆದುಕೊಂಡಿದ್ದಾನೆ ಎಂದು ಕಿರಣ್ ಅವರ ತಾಯಿ ತಿಳಿಸಿದ್ದಾರೆ. ಯುವತಿ ಹಾಗೂ ಆಕೆಯ ಕುಟುಂಬಸ್ಥರ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಠಾಣೆಗೆ ಕಿರಣ್ ಕುಟುಂಬಸ್ಥರು ದೂರು ನೀಡಿದ್ದು, ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇನ್ನು ಪ್ರತ್ಯೇಕ ಘಟನೆಯಲ್ಲಿ ಮೂವರು ಮಕ್ಕಳ ಕೊಂದು ತಾಯಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬಾಗಲ ಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಹಿರೇ ಮುಚಳಗುಡ್ಡ ಗ್ರಾಮದಲ್ಲಿ ಇತ್ತೀಚಿಗೆ ನಡೆದಿತ್ತು. ಕೌಟುಂಬಿಕ ಕಲಹದಿಂದ ರೂಪಾ ಹನಮಂತ ಗೌಡರ (27) ಎಂಬುವವರು ಮಕ್ಕಳನ್ನು ಕೊಂದು ಬಳಿಕ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾರೆ.

ರೈತನ ಮೇಲೆ ಕಾಡಾನೆ ದಾಳಿ

ಆನೇಕಲ್: ಬೈಕ್‌ನಲ್ಲಿ ಹೋಗುತ್ತಿದ್ದ ರೈತನ ಮೇಲೆ ಕಾಡಾನೆಯೊಂದು ದಾಳಿ ನಡೆಸಿ ಸೊಂಡಿಲಿನಿಂದ ಎತ್ತಿ ಎಸೆದ ಘಟನೆ ಆನೇಕಲ್ ಗಡಿಭಾಗ ತಮಿಳುನಾಡಿನ ಗಂಗನಹಳ್ಳಿ ಬಳಿ ನಡೆದಿದೆ.

ನೆರೆಯ ಬ್ಯಾಲದಕೆರೆ ವಾಸಿ ವೆಂಕಟೇಶ್ (59) ಮೃತಪಟ್ಟ ವ್ಯಕ್ತಿ. ರೈತ ವೆಂಕಟೇಶ್ ರವರ ಮಗ ಶ್ರೀನಿವಾಸ್‌ಗೆ ತೀವ್ರ ಗಾಯಗಳಾಗಿದ್ದು ಪ್ರಾಣಪಾಯದಿಂದ ಪಾರಾಗಿದ್ದಾರೆ. ಬ್ಯಾಲಕೆರೆ ವೆಂಕಟೇಶ್ ಮತ್ತು ಅವರ ಮಗ ಬೈಕಿನಲ್ಲಿ ತಮ್ಮ ಮನೆಗೆ ತೆರಳುತ್ತಿದ್ದಾಗ ಏಕಾ ಏಕಿ 4 ಆನೆಗಳು ಘೀಳಿಡುತ್ತಾ ಇವರ ಮೇಲೆ ದಾಳಿ ಮಾಡಿದವು. ಬೈಕನ್ನು ಓಡಿಸುತ್ತಿದ್ದ ವೆಂಕಟೇಶ್ ಆನೆ ದಾಳಿಗೆ ನೇರವಾಗಿ ಸಿಕ್ಕು ಕೆಳಗೆ ಬಿದ್ದರು. ಹಿಂಬದಿ ಇದ್ದ ಶ್ರೀನಿವಾಸ್ ಕಿರುಚುತ್ತಾ ನೆಲದ ಮೇಲಿಂದ ಎದ್ದು ತಪ್ಪಿಸಿಕೊಂಡರು. ಕೆಳಗೆ ಬಿದ್ದ ವೆಂಕಟೇಶ್ ಮೇಲೆ ನುಗ್ಗಿದ ಆನೆ ಸೊಂಡಿಲಿಂದ ಎತ್ತಿ ಎಸೆದು ತಲೆಯ ಮೇಲೆ ಕಾಲಿಟ್ಟು ತುಳಿಯಿತು. ಕೂಡಲೇ ಗ್ರಾಮದಲ್ಲಿನ ಬಂಧುಗಳಿಗೆ ಕರೆ ಮಾಡಿ ತಿಳಿಸಿದಾಗ ಎಲ್ಲರೂ ಬಂದು ವೆಂಕಟೇಶ್ ರನ್ನು ಬೈಕಿನಲ್ಲಿ ಕೂರಿಸಿಕೊಂಡು ಥಳಿ ಆಸ್ಪತ್ರೆಗೆ ಕರೆದೊಯ್ದರು. ತೀವ್ರ ರಕ್ತ ಸ್ರಾವವಾಗಿದ್ದು ಕೊನೆಯುಸಿರೆಳೆದಿದ್ದಾರೆ ಎಂದು ವೈದ್ಯರು ಘೋಷಿಸಿದರು.

ಇತ್ತೀಚೆಗೆ ಗಡಿ ಭಾಗದಲ್ಲಿ ಆನೆಗಳ ಉಪಟಳ ಹೆಚ್ಚಾಗುತ್ತಿದೆ ಎಂದು ಗ್ರಾಮಸ್ಥರು ತಮ್ಮ ಅಲಳನ್ನು ತೋಡಿಕೊಂಡರು. ಅರಣ್ಯ ಇಲಾಖೆ ಸಿಬ್ಬಂದಿ ಆನೆಯನ್ನು ಕಾಡಿಗೆ ಓಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ರೊಚ್ಚಿಗೆದ್ದ ಸ್ಥಳೀಯರು ರಾತ್ರಿಯಿಡಿ ಗಂಗಾನಹಳ್ಳಿ ಬಳಿ ಶವವಿಟ್ಟು ಪ್ರತಿಭಟನೆ ನಡೆಸಿದರು..

ದೋಷಪೂರಿತ ತನಿಖೆ ನಡೆಸಿರುವವರ ವಿರುದ್ಧ ಕ್ರಮಕ್ಕೆ ಸೂಚನೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು; ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣದಲ್ಲಿ ಕಳಪೆ ಮತ್ತು ದೋಷಪೂರಿತ ತನಿಖೆ ನಡೆಸಿ ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಗೊಳ್ಳಲು ಇದನ್ನು ಖು ಲಾಸೆ ಸಮಿತಿಯ ಮುಂದೆ ಇಡಬೇಕು ಎಂದು ವಿಶೇಷ ಸಿಬಿಐ ನ್ಯಾಯಾಲಯ ನೀಡಿದ್ದ ತೀರ್ಪಿನಲ್ಲಿನ ನಿರ್ದೇಶನ ಅನುಷ್ಠಾನಗೊಳಿಸುವಂತೆ ಕೋರಿದ್ದ ಅರ್ಜಿಯ ಸಂಬಂಧ ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಸಿಬಿಐ ಚೆನ್ನೈನ ವಿಶೇಷ ತನಿಖಾದಳಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸಿಬಿಐ ವಿಶೇಷ ನ್ಯಾಯಾಲಯವು 16.06.2023ರಂದು ಹೊರಡಿಸಿದ್ದ ತೀರ್ಪಿನಲ್ಲಿನ ನಿರ್ದೇಶನ ಜಾರಿಗೊಳಿಸಲು ಸಿಬಿಐಗೆ ನಿರ್ದೇಶಿಸುವಂತೆ ಕೋರಿ ಸೌಜನ್ಯ ತಾಯಿ ಕುಸುಮವತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರ ಏಕಸದಸ್ಯ ಪೀಠ ನಡೆಸಿತು. ಅರ್ಜಿದಾರರ ಪರ ವಕೀಲ ಎಂ.ಆರ್.ಬಾಲಕೃಷ್ಣ ಅವರು ಸಿಬಿಐ ಅಡಿ ಖುಲಾಸೆ ಸಮಿತಿ ಇದೆಯೇ ಎಂಬುದಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ ಎಂದರು.

ಫೆಬ್ರವರಿ 23ಕ್ಕೆ ವಿಚಾರಣೆ ಮುಂದೂಡಿಕೆ

ಪೀಠವು ಗೃಹ ಇಲಾಖೆ, ಪೊಲೀಸ್ ಮಹಾನಿರ್ದೇಶಕ, ಅಪರಾಧ ಮತ್ತು ತಾಂತ್ರಿಕ ಸೇವೆಗಳ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪಶ್ಚಿಮ ವಿಭಾಗದ ಪೊಲೀಸ್ ಮಹಾನಿರ್ದೇಶಕರು, ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ, ಸಿಬಿಐ ದೆಹಲಿ ಮತ್ತು ಚೆನ್ನೈ ವಿಭಾಗದ ವಿಶೇಷ ತನಿಖಾ ದಳಕ್ಕೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಫೆಬ್ರವರಿ 23ಕ್ಕೆ ಮುಂದೂಡಿದೆ.

ಪ್ರಕರಣದ ಹಿನ್ನೆಲೆ: ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಸೌಜನ್ಯ 2012ರ ಅಕ್ಟೋಬರ್ 9ರಂದು ನಾಪತ್ತೆಯಾಗಿದ್ದರು.

ಮರು ದಿನ ಮೃತ ವಿದ್ಯಾರ್ಥಿನಿಯ ದೇಹವು ಮಣ್ಣಸಂಕ ಬಳಿ ಪತ್ತೆಯಾಗಿತ್ತು. ಆಕೆಯ ಮೇಲೆ ಅತ್ಯಾಚಾರ ಮಾಡಿ, ಕೊಲೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಬೆಳ್ತಂಗಡಿ ಠಾಣೆಯಲ್ಲಿ ಮೊದಲಿಗೆ ಆಕೆಯ ತಂದೆ ಚಂದ್ರಪ್ಪ ಗೌಡ ಅವರು ತನ್ನ ಎರಡನೇ ಪುತ್ರಿ ಸೌಜನ್ಯ ನಾಪತ್ತೆಯಾಗಿದ್ದಾರೆ ಎಂದು ದೂರು ನೀಡಿದ್ದರು. ಆನಂತರ ಅದನ್ನು ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನಾಗಿ ಪರಿವರ್ತಿಸಲಾಗಿತ್ತು. 2013ರಲ್ಲಿ ಪ್ರಕರಣವು ಸಿಬಿಐಗೆ ವರ್ಗಾವಣೆಗೊಂಡಿದ್ದು, 2015ರಲ್ಲಿ ಪ್ರಕರಣವು ಮಂಗಳೂರಿನಿಂದ ಬೆಂಗಳೂರಿನ ಸಿಬಿಐ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತ್ತು.

ಇದರ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಅವರು ಪ್ರಕರಣದಲ್ಲಿನ ಆರೋಪಿ ಸಂತೋಷ ರಾವ್‌ನನ್ನು ಅತ್ಯಾಚಾರ (ಐಪಿಸಿ ಸೆಕ್ಷನ್ 376) ಮತ್ತು ಕೊಲೆ (ಐಪಿಸಿ ಸೆಕ್ಷನ್ 302) ಪ್ರಕರಣದಲ್ಲಿ ನಿರ್ದೋಷಿ ಎಂದು ಘೋಷಿಸಿತ್ತು.

ಅಲ್ಲದೇ, 11 ವರ್ಷಗಳಿಂದ ಜೈಲಿನಲ್ಲಿದ್ದ ಸಂತೋಷ್ ರಾವ್‌ನನ್ನು ತಕ್ಷಣ ಬಿಡುಗಡೆ ಮಾಡುವಂತೆ ನಿರ್ದೇಶಿಸಿತ್ತು. ಅಲ್ಲದೇ, ಕಳಪೆ ಮತ್ತು ದೋಷಪೂರಿತ ತನಿಖೆ ನಡೆಸಿರುವ ಮತ್ತು ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಈ ಪ್ರಕರಣವನ್ನು ಖುಲಾಸೆ ಸಮಿತಿಯ ಮುಂದೆ ಇಡಬೇಕು ಎಂದು ನಿರ್ದೇಶಿಸಿತಲ್ಲದೇ ತನಿಖೆಯಲ್ಲಿ ವೈಜ್ಞಾನಿಕ ಸಾಕ್ಷ್ಯಿಯು ವಿಫಲವಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು. ವಿಚಾರಣಾಧೀನ ನ್ಯಾಯಾಲಯ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಜಾಹೀರಾತು ಅಕ್ರಮವಾಗಿ ತೆರವು; ಎಫ್‌ಐಆರ್

ಬೆಂಗಳೂರು : ಬೆಂಗಳೂರು ಸೇರಿದಂತೆ ರಾಜ್ಯ ಸರಕಾರದ ಸಾರಿಗೆ ನಿಗಮಗಳ ಬಸ್‌ನ ಹೊರ ಭಾಗದಲ್ಲಿ ಅಳವಡಿಸಿದ್ದ ಜಾಹೀರಾತುಗಳು ಸದುದ್ದೇಶವನ್ನು ಹೊಂದಿದ್ದು, ಆದಾಯದ ಮೂಲವಾದ ಜಾಹೀರಾತನ್ನು ಅಕ್ರಮವಾಗಿ ತೆರವುಗೊಳಿಸಿದರೆ ಕಾನೂನು ಕ್ರಮ ಕೈಗೊಳ್ಳಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಬಸ್‌ಗಳ ಮೇಲೆ ಅಳವಡಿಸಲಾಗಿದ್ದ ಸಿಗರೇಟ್, ಪಾನ್ ಮಸಾಲ ಸೇರಿದಂತೆ ತಂಬಾಕು ಉತ್ಪನ್ನಗಳ ಜಾಹೀರಾತುಗಳಿಗೆ ಕನ್ನಡಪರ ಸಂಘಟನೆಗಳಿಂದ ಸಾರ್ವಜನಿಕರು ಭಾರೀ ಆಕ್ರೋಶ ವ್ಯಕ್ತಪಡಿಸಿದ್ದು, ಜಾಹೀರಾತುಗಳನ್ನು ತೆರವು ಮಾಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತಂತೆ ಅಭಿಯಾನಗಳು ಆರಂಭವಾಗಿದ್ದವು. ಈ ಅಭಿಯಾನಗಳ ಬೆನ್ನಲ್ಲೇ ಎಚ್ಚೆತ್ತ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಬಸ್‌ಗಳ ಮೇಲೆ ಜಾಹೀರಾತು ಅಳವಡಿಕೆ ನಿರ್ಬಂಧಿಸಿ ಆದೇಶಿಸಿದ್ದರು. ಆ ಜಾಹೀರಾತುಗಳ ತೆರವಿಗೆ ಫೆಬ್ರವರಿ 18ರವರೆಗೆ ಗಡುವು ನೀಡಲಾಗಿತ್ತು.

ಆದರೆ ಕೆಎಸ್‌ಆರ್‌ಟಿಸಿಯು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಬಸ್‌ಗಳಲ್ಲಿನ ತಂಬಾಕು ಸಂಬಂಧಿತ ಜಾಹೀರಾತುಗಳನ್ನು ಅಧಿಕಾರಿಗಳೇ ತೆರವುಗೊಳಿಸುತ್ತಿದ್ದಾರೆ. ಆದರೆ ತಂಬಾಕು ಉತ್ಪನ್ನ ಅಲ್ಲದ ವಿಷಯಗಳಿಗೆ ಸಂಬಂಧಿಸಿದ ಜಾಹೀರಾ ತುಗಳನ್ನು ಕೆಲವರು ಅಕ್ರಮವಾಗಿ ತೆರವು ಮಾಡುತ್ತಿರುವುದು ಸಾರಿಗೆ ಸಂಸ್ಥೆಗೆ ತಿಳಿದು ಬಂದಿದೆ. ಸಾರ್ವಜನಿಕರು ಹೀಗೆ ಅಕ್ರಮವಾಗಿ ತೆರವುಗೊಳಿಸುವುದು ಅಪರಾಧವಾಗಿದ್ದು, ಅಂತಹವರ ಮೇಲೆ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಕೆಎಸ್‌ಆರ್‌ಟಿಸಿ ನೀಡಿದ ಮಾಹಿತಿಯಲ್ಲಿ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ನಿಗಮದ ಸಾರಿಗೇತರ ಆದಾಯ ಹೆಚ್ಚಿಸಲು ಹಲವಾರು ವರ್ಷಗಳಿಂದ ನಿಗಮದ ಬಸ್‌ಗಳ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ಸಾರಿಗೆ ಮತ್ತು ಮುಜರಾಯಿ ಸಚಿವರ ಟಿಪ್ಪಣಿಯಂತೆ, ಬಸ್‌ಗಳ ಜಾಹೀರಾತುಗಳಲ್ಲಿ ತಂಬಾಕು ಉತ್ಪನ್ನಗಳ ಸೇವನೆಗೆ ಪ್ರಚೋದಿಸುವ ನೇರವಾದ ಅಥವಾ ಪರೋಕ್ಷವಾದ ಜಾಹೀರಾತುಗಳನ್ನು ದಿನಾಂಕ 15-02-2026 ರೊಳಗಾಗಿ ತೆರವುಗೊಳಿಸಲು ಈಗಾಗಲೇ ಸೂಚನೆ ನೀಡಿದ್ದಾರೆ.

ಜಾಹೀರಾತಿಗೆ ಅವಕಾಶ ಇದೆ: ಆಕ್ಷೇಪಣೆ ಸಲ್ಲಿಸಿ:

ನಿಗಮದ ಬಸ್ಸುಗಳ ಮೇಲೆ ಎಎಸ್‌ಸಿಐ (Advertisement Standard Council of India Code (ASCI Code) ನಿಯಮಾವಳಿಗಳನ್ವಯ ಜಾಹೀರಾತುಗಳನ್ನು ಪ್ರದರ್ಶಿಸಲು ಅವಕಾಶವಿರುತ್ತದೆ. ನಿಗಮದ ವಾಹನಗಳ ಮೇಲೆ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳು ನಿಗಮಕ್ಕೆ ಸಾರಿಗೇತರ ಆದಾಯದ ಮೂಲವಾಗಿರುತ್ತದೆ. ಆದರೂ ನಿಗಮದ ಬಸ್‌ಗಳ ಮೇಲೆ ಪ್ರದರ್ಶಿತವಾಗುತ್ತಿರುವ ಇತರ ಜಾಹೀರಾತಿನ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆ/ದೂರುಗಳು ಇದ್ದಲ್ಲಿ, ಲಿಖಿತ ಮನವಿಯನ್ನು ಪಡೆದು, ಈ ಸಂಬಂಧ ಕರಾರಿನ ನಿಯಮಾವಳಿಯಂತೆ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವುದು. ಆದರೆ, ಕೆಲವು ವ್ಯಕ್ತಿಗಳು ಸಾರ್ವಜನಿಕ ಬಸ್‌ಗಳಲ್ಲಿನ ಜಾಹೀರಾತುಗಳನ್ನು ಅಕ್ರಮವಾಗಿ ತೆರವುಗೊಳಿಸುತ್ತಿರುವುದು ಕಾನೂನು ಬಾಹಿರವಾಗಿರುತ್ತದೆ. ಅಂತಹ ವ್ಯಕ್ತಿಗಳ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿ ಊಐಕ್ಕ ದಾಖಲಿಸಿ, ಎಲ್ಲಾ ರೀತಿಯ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಿದೆ ಎಂದು ತಿಳಿಸಿದೆ.

ಅಲ್ಲದೇ ಬಸ್ ನಿಲ್ದಾಣದ ಸಿಬ್ಬಂದಿ, ಚಾಲನಾ ಸಿಬ್ಬಂದಿ ಹಾಗೂ ಇತರೆ ಸಿಬ್ಬಂದಿಗೂ ಈ ಸಂಬಂಧ ಸೂಕ್ತ ತಿಳುವಳಿಕೆ /ನಿರ್ದೇಶನ ನೀಡಬೇಕು. ಜತೆಗೆ ಈ ಅಂಶಗಳ ಸಂಬಂಧ ಅಗತ್ಯ ಕ್ರಮ ಕೈಗೊಂಡಿದ್ದರ ಕುರಿತು ಅಗತ್ಯ ವರದಿ ನೀಡುವಂತೆ ಸಾರಿಗೆ ಸಂಸ್ಥೆ ತಿಳಿಸಿದೆ.

10 ಲಕ್ಷ ರು. ಮೌಲ್ಯದ ಚಿನ್ನಾಭರಣ ಹಿಂದಿರುಗಿಸಿದ ಬಿಎಂಟಿಸಿ ಸಿಬ್ಬಂದಿ

ಬೆಂಗಳೂರು: ಬಸ್‌ನಲ್ಲಿದ್ದ 10 ಲಕ್ಷ ರು.ಮೌಲ್ಯದ ಚಿನ್ನಾಭರಣವನ್ನು ಸುರಕ್ಷಿತವಾಗಿ ಮಾಲೀಕರಿಗೆ ಹಿಂದಿರುಗಿಸಿದ ಬಿಎಂಟಿಸಿ ಬಸ್ ಸಿಬ್ಬಂದಿ ಪ್ರಾಮಾಣಿಕತೆಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ಸುಮಾರು ಹತ್ತು ಲಕ್ಷ ರು. ಮೌಲ್ಯದ ಚಿನ್ನಾಭರಣಗಳಿರುವ ಬ್ಯಾಗನ್ನು ಬಸ್‌ನಲ್ಲಿ ಬಿಟ್ಟು ಇಳಿದಿದ್ದ ಮಹಿಳೆಗೆ ಬ್ಯಾಗನ್ನು ಸುರಕ್ಷಿತವಾಗಿ ಹಿಂತಿರುಗಿಸಿದ್ದಾರೆ. ಜನವರಿ 31 ರಂದು ಕೆ.ಆರ್. ಮಾರ್ಕೆಟ್‌ನಿಂದ ಪದ್ಮನಾಭನಗರಕ್ಕೆ ಸಂಚರಿಸುತ್ತಿದ್ದ ಬಸ್‌ನಲ್ಲಿ ಈ ಘಟನೆ ನಡೆದಿತ್ತು. ಕೆ.ಆರ್ ಮಾರ್ಕೆಟ್‌ನಲ್ಲಿ ಬಸ್ ಹತ್ತಿದ ಮಹಿಳೆಯೊಬ್ಬರು ಚಿನ್ನಾಭರಣವಿರುವ ಬ್ಯಾಗನ್ನು ಬಸ್‌ನಲ್ಲೇ ಬಿಟ್ಟು ಬಸವನಗುಡಿಯಲ್ಲಿ ಇಳಿದಿದ್ದರು. ಬಸ್ ರಶ್ ಇದ್ದ ಕಾರಣ ಸಿಬ್ಬಂದಿ ಬ್ಯಾಗ್ ಗಮನಿಸಿರಲಿಲ್ಲ. ನಂತರ ಮಹಿಳೆ ಬಿಎಂಟಿಸಿ ಸೆಂಟ್ರಲ್ ಆಫೀಸ್‌ಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಟಿಕೆಟ್‌ನಲ್ಲಿ ನಮೂದಿಸಿದ ಬಸ್ ನಂಬರ್ ಮೂಲಕ ಬಸ್ ಪತ್ತೆ ಮಾಡಿ, ಬಸ್‌ಗೆ ಹೋದಾಗ ಬ್ಯಾಗ್ ಸಿಕ್ಕಿದೆ. ಈ ವೇಳೆ ಮಹಿಳೆ ಗಾಬರಿಗೊಂಡು ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಕೊನೆಗೆ ಬಸ್ ಸಿಬ್ಬಂದಿಗೆ ಧನ್ಯವಾದ ತಿಳಿಸಿದ್ದಾರೆ.

ಮೂವರು ಕಾರ್ಮಿಕರ ಸಾವು

ಕೋಲಾರ: ಬ್ರೇಕ್ ಫೇಲ್ ಆದ ಬೊಲೆರೋ ವಾಹನ ಪಲ್ಟಿ ಹೊಡೆದು ಮೂವರು ಕೂಲಿ ಕಾರ್ಮಿಕರು ಸ್ಥಳದಲ್ಲೇ ಅಸುನೀಗಿರುವ ಘಟನೆ ಶ್ರೀನಿವಾಸಪುರ ತಾಲೂಕಿನ ದೊಡ್ಡಮಲದೊಡ್ಡಿ ರೈಲ್ವೆ ಬ್ರಿಡ್ಜ್ ಸಮೀಪ ನಡೆದಿದೆ. ಆಂಧ್ರದ ಚೆಮ್ಮಕೂರು ಗ್ರಾಮದ ಕೂಲಿ ಕಾರ್ಮಿಕರಾದ ವೆಂಕಟಮ್ಮ(55), ಸೀನು(27) ಮತ್ತು ಮುನಿಯಪ್ಪ(56) ಮೃತರು. ಚಿಂತಾಮಣಿಯ ಹನೂರುನಿಂದ ಆಂಧ್ರದ ಮದನಪಲ್ಲಿಯ ಚೆಮ್ಮಕೂರುಗೆ ಬೊಲೆರೊ ತೆರಳುತ್ತಿತ್ತು. ವಾಹನದಲ್ಲಿ 17 ಪ್ರಯಾಣಿಕರಿದ್ದು ಭಾನುವಾರ ಸಂಜೆ 6 ಗಂಟೆಯಲ್ಲಿ ಮಾರ್ಗಮಧ್ಯೆ ಬ್ರೇಕ್ ಫೇಲ್ ಆಗಿ ಪಲ್ಟಿ ಹೊಡೆದು ರೈಲ್ವೆ ಹಳಿ ಮೇಲೆ ಬಿದ್ದು ಅಪಘಾತ ನಡೆದಿದೆ. ಹುಣಸೆ ಮರದಲ್ಲಿ ಕಾಯಿ ಉದುರಿಸುವ ಕೆಲಸಕ್ಕೆ ಕಾರ್ಮಿಕರು ತೆರಳಿದ್ದರು.

ನಮೂನೆ ಸಂಖ್ಯೆ INC-26

[ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30 ಕ್ಕೆ ಅನುಗುಣವಾಗಿ]

ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಿಸುವ ಕುರಿತು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು.

ಕೇಂದ್ರ ಸರ್ಕಾರದ ಮುಂದೆ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ,ಹೈದರಾಬಾದ್

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಉಪ-ಸೆಕ್ಷನ್ (4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30 ರ ಉಪ-ನಿಯಮ (5) ರ ಕ್ಲಾಸ್ (a) ಗೆ ಸಂಬಂಧಿಸಿದ ವಿಷಯದಲ್ಲಿ.

ಮತ್ತು

ಮೆ|| ತ್ವಸ್ಥ ಮ್ಯಾನುಫ್ಯಾಕ್ಚರಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್,
(CIN: U74999KA2016PTC095476) ತನ್ನ ನೋಂದಾಯಿತ ಕಛೇರಿ,
ನಂ. 120, 5ನೇ ಕ್ರಾಸ್ ಸ್ಟ್ರೀಟ್, ಗಾರ್ಡನ್ ವಿಲ್ಲಾಸ್, ನಾಗರಬಾವಿ ರಸ್ತೆ,
ನಾಗರಬಾವಿ, ಬೆಂಗಳೂರು - 560072, ಕರ್ನಾಟಕ, ಭಾರತ. ಇವರ ವಿಷಯದಲ್ಲಿ.

...ಅರ್ಜಿದಾರರು

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ದಿನಾಂಕ 04 ಆಗಸ್ಟ್ 2025 ರಂದು ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯಕ್ಕೆ ಅನುಗುಣವಾಗಿ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "ಕರ್ನಾಟಕ ರಾಜ್ಯ"ದಿಂದ "ತಮಿಳುನಾಡು ರಾಜ್ಯ"ಕ್ಕೆ ಸ್ಥಳಾಂತರಿಸಲು ಅನುವು ಮಾಡಿಕೊಡುವಂತೆ, ಕಂಪನಿಯ ಮನವಿ ಪತ್ರದ ತಿದ್ದುಪಡಿಯ ದೃಢೀಕರಣವನ್ನು ಕೋರಿ ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಕಂಪನಿಯು ಉದ್ದೇಶಿಸಿದೆ.

ಕಂಪನಿಯ ನೋಂದಾಯಿತ ಕಚೇರಿಯ ಉದ್ದೇಶಿತ ಸ್ಥಳಾಂತರದಿಂದ ತಮ್ಮ ಹಿತಾಸಕ್ತಿಗೆ ಧಕ್ಕೆ ಉಂಟಾಗಬಹುದು ಎಂದು ಭಾವಿಸುವ ಯಾವುದೇ ವ್ಯಕ್ತಿಯು, ಈ ನೋಟಿಸ್ ಪ್ರಕಟವಾದ ದಿನಾಂಕದಿಂದ **ಹದಿನಾಲ್ಕು ದಿನಗಳ ಒಳಗಾಗಿ**, ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧಕ್ಕೆ ಕಾರಣಗಳನ್ನು ತಿಳಿಸುವ ಅಫಿಡವಿಟ್‌ನಿಂದ ಬೆಂಬಲಿತವಾದ ತಮ್ಮ ಆಕ್ಷೇಪಣೆಗಳನ್ನು MCA ಪೋರ್ಟಲ್ ನಲ್ಲಿ (www.mca.gov.in) ಇನ್ವೆಸ್ಟರ್ ಕಂಪ್ಲೇಂಟ್ ಫಾರಂ ಸಲ್ಲಿಸುವ ಮೂಲಕ ಅಥವಾ ನೇರವಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಈ ವಿಳಾಸಕ್ಕೆ ತಲುಪಿಸಬಹುದು: ಪ್ರಾದೇಶಿಕ ನಿರ್ದೇಶಕರು, 3ನೇ ಮಹಡಿ, ಕಾರ್ಪೋರೇಟ್ ಭವನ, ಬಂಡ್ಲಾಗುಡ, ನಾಗೋಲ್, ತಟ್ಟಿಯನ್ನಾರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ - 500068, ತೆಲಂಗಾಣ. ಇದರ ಒಂದು ಪ್ರತಿಯನ್ನು ಈ ಕೆಳಗೆ ನಮೂದಿಸಲಾದ ವಿಳಾಸದಲ್ಲಿರುವ ಅರ್ಜಿದಾರ ಕಂಪನಿಯ ನೋಂದಾಯಿತ ಕಚೇರಿಗೂ ಕಳುಹಿಸತಕ್ಕದ್ದು:

ನಂ. 120, 5ನೇ ಕ್ರಾಸ್ ಸ್ಟೀಟ್, ಗಾರ್ಡನ್ ವಿಲ್ಲಾಸ್, ನಾಗರಬಾವಿ ರಸ್ತೆ, ನಾಗರಬಾವಿ, ಬೆಂಗಳೂರು - 560072, ಕರ್ನಾಟಕ, ಭಾರತ.

ಅರ್ಜಿದಾರರ ಪರವಾಗಿ
ಸಹಿ/-
(ವೆಟ್ಟಿಯೂರು ಸುರೇಶ್ ಕುಮಾರ್ ಆದಿತ್ಯ)
ನಿರ್ದೇಶಕರು
ಡಿ.ಐ.ಎನ್ : 07807715

ದಿನಾಂಕ : 09ನೇ ಫೆಬ್ರುವರಿ 2026
ಸ್ಥಳ : ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ನಾನು ಜಿ. ವಸಂತ ಕುಮಾರ, ಬಿನ್ ಎಂ. ಗಣೇಶ್ ವಯಸ್ಸು 58 ವರ್ಷ, ನಿವಾಸಿ #38, 4ನೇ ಮಹಡಿ, 1ನೇ ಕ್ರಾಸ್, ಎನ್.ಎಸ್. ಐಯ್ಯಂಗಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು 560020, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ನಾನು 23/07/2001 ರಂದು Mega City Bangalore Developer and Builder Limited ಕಂಪನಿಯವರಿಂದ ಖರೀದಿಸಿದ ಕೆಳಕಂಡ ಆಸ್ತಿಗೆ ಸಂಬಂಧಿಸಿದ ಮೂಲ ಕ್ರಯ ಪತ್ರ (Sale Deed) ನನ್ನ ಕಛೇರಿ ಆದ VASANTH VIDEO VISION PVT. LTD., #46, ಅಕ್ಷಯ ಚೇಂಬರ್, 2ನೇ ಮಹಡಿ, 4ನೇ ಕ್ರಾಸ್, 5ನೇ ಮೇನ್ ರೋಡ್, ಗಾಂಧಿನಗರ (ಮೆಜೆಸ್ಟಿಕ್), ಬೆಂಗಳೂರು - 560009 ಇಲ್ಲಿ ಇದ್ದ ದಾಖಲೆಗಳಲ್ಲಿ ಇಟ್ಟಿದ್ದು, ಅದು ಈಗ ಕಳೆದು ಹೋಗಿರುತ್ತದೆ / ಕಾಣೆಯಾಗಿರುತ್ತದೆ.

ಆಸ್ತಿ ವಿವರ : Converted residential bearing Site No.82, 'C' Block, Khata No.111/214, Survey No. 15/2, 15/3 & 89, ಅಳತೆ : 40.5 ಅಡಿ X 30 ಅಡಿ (1215 ಚ.ಅಡಿ), ಸ್ಥಳ : ಶೇಷಗಿರಿಹಳ್ಳಿ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಕ್ಕುಬಂದಿ:
ಪೂರ್ವ : 40 ಅಡಿ ರಸ್ತೆ, **ಪಶ್ಚಿಮ** : ಸೈಟ್ ನಂ.79.
ಉತ್ತರ : ಸೈಟ್ ನಂ.83, **ದಕ್ಷಿಣ** : ಸೈಟ್ ನಂ.81A.

ಈ ಕ್ರಯ ಪತ್ರವನ್ನು ಯಾರಾದರೂ ದುರುಪಯೋಗಪಡಿಸಿಕೊಂಡರೆ, ಅದರ ಸಂಪೂರ್ಣ ಜವಾಬ್ದಾರಿ ಸಂಬಂಧಪಟ್ಟ ವ್ಯಕ್ತಿಗಳದೇ ಆಗಿರುತ್ತದೆ.

ಈ ಕುರಿತು ನಾನು ಉಪ್ಪಾರಪೇಟೆ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ದೂರು ದಾಖಲಿಸಿದ್ದೇನೆ.

ಯಾರಿಗಾದರೂ ಈ ದಾಖಲೆ ಕುರಿತು ಮಾಹಿತಿ ದೊರೆತಲ್ಲಿ ದಯವಿಟ್ಟು ಕೆಳಗಿನ ವಿಳಾಸ / ಮೊಬೈಲ್‌ಗೆ ಸಂಪರ್ಕಿಸಬೇಕು.

ಸ್ಥಳ : ಬೆಂಗಳೂರು **ದಿನಾಂಕ** : 08/02/2026
ಸಂಪರ್ಕ: ಜಿ. ವಸಂತ ಕುಮಾರ ಬಿನ್ ಎಂ. ಗಣೇಶ
ಮೊಬೈಲ್ : 9341211621

ರಾಜ್ಯದಲ್ಲಿ 19,998 ಕಳ್ಳತನ | ಬೆಂಗಳೂರು ಫಸ್ಟ್

ರಾಜ್ಯದಲ್ಲಿ ಅಪರಾಧ ಪ್ರಕರಣ ಹೆಚ್ಚಳ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದ್ದು, 2025ನೇ ಸಾಲಿನ ಅಪರಾಧಗಳ ಪಟ್ಟಿ ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸುವಂತಿದೆ. ಕಳೆದ ವರ್ಷ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಕಳ್ಳತನ ಮೊದಲ ಸ್ಥಾನದಲ್ಲಿದ್ದರೆ, ಹೈಟೆಕ್ ಯುಗದ ಪಿಡುಗಾಗಿರುವ ಸೈಬರ್ ಕ್ರೈಂ ಎರಡನೇ ಸ್ಥಾನ ಆಕ್ರಮಿಸಿಕೊಂಡಿದೆ. ವಿಶೇಷವಾಗಿ ಮಕ್ಕಳ ಮೇಲಿನ ದೌರ್ಜನ್ಯ (ಪೋಕ್ಸೊ) ಪ್ರಕರಣಗಳಲ್ಲಿ ಗಣನೀಯ ಏರಿಕೆಯಾ ಗಿರುವುದು ಕಳವಳಕಾರಿ ಸಂಗತಿ ಯಾಗಿದೆ. ಉಳಿದಂತೆ ಜೂಜಾಟ, ಮಾರಣಾಂತಿಕ ಹಲ್ಲೆ ಹಾಗೂ ಮಹಿ ಳೆಯರ ಮೇಲಿನ ದೌರ್ಜನ್ಯ ಪ್ರಕರಣ ಗಳು ನಂತರದ ಸ್ಥಾನಗಳಲ್ಲಿವೆ.

ಕಳೆದೊಂದು ವರ್ಷದ ಅವಧಿಯಲ್ಲಿ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಬರೋಬ್ಬರಿ 19,998 ಕಳ್ಳತನದ ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಸಿಲಿಕಾನ್ ಸಿಟಿ ಬೆಂಗಳೂರು ನಗರವೊಂದರಲ್ಲೇ 8,203 ಪ್ರಕರಣಗಳು ದಾಖಲಾಗುವ ಮೂಲಕ ಅಪರಾಧ ಪಟ್ಟಿಯಲ್ಲಿ ರಾಜಧಾನಿ ಅಗ್ರಸ್ಥಾನದಲ್ಲಿದೆ. ಇದಕ್ಕೆ ವ್ಯತಿರಿಕ್ತ ಎಂಬಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇವಲ 27 ಪ್ರಕರಣಗಳು ದಾಖಲಾಗಿದ್ದು, ರಾಜ್ಯದಲ್ಲೇ ಅತಿ ಕಡಿಮೆ ಕಳ್ಳತನ ನಡೆದ ಜಿಲ್ಲೆಯಾಗಿ ಗುರುತಿಸಿಕೊಂಡಿದೆ. ಇನ್ನು ವಿಶೇಷವೆಂಬಂತೆ ಇದೇ ಮೊದಲ ಬಾರಿಗೆ ರೈಲ್ವೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದೇ ಒಂದು ಕಳ್ಳತನ ಪ್ರಕರಣವೂ ದಾಖಲಾಗಿಲ್ಲ ಎಂಬುದು ಗಮನಾರ್ಹ.

ಸೈಬರ್ ವಂಚನೆಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಎಷ್ಟೇ ಜಾಗೃತಿ ಮೂಡಿಸಿದರೂ ಜನ ಎಚ್ಚೆತ್ತುಕೊಂಡಿಲ್ಲ ಎಂಬುದಕ್ಕೆ ಅಂಕಿಅಂಶಗಳೇ ಸಾಕ್ಷಿ. 2024ರಲ್ಲಿ 22,478 ಇದ್ದ ಸೈಬರ್ ಪ್ರಕರಣಗಳು 2025ರಲ್ಲಿ 14,885ಕ್ಕೆ ಇಳಿಕೆಯಾ ಗಿದ್ದರೂ, ವಂಚನೆಯ ಸ್ವರೂಪ ಗಂಭೀರವಾಗಿದೆ. ಒಟ್ಟು ಪ್ರಕರಣಗಳ ಪೈಕಿ ಬೆಂಗಳೂರು ನಗರದಲ್ಲೇ ಸಿಂಹಪಾಲು ಅಂದರೆ 10,668 ಪ್ರಕರಣಗಳು ದಾಖಲಾಗಿವೆ. ಐಟಿ-ಬಿಟಿ ಉದ್ಯೋಗಿಗಳು ಸೇರಿದಂತೆ ಉನ್ನತ ಹುದ್ದೆಯಲ್ಲಿರುವವರೇ ಶೇ.68 ರಷ್ಟು ಪ್ರಕರಣಗಳಲ್ಲಿ ವಂಚಕರ ಬಲೆಗೆ ಬಿದ್ದಿರುವುದು ದುರಂತ.

ಕೊಲೆ ಮತ್ತು ಮಹಿಳಾ ದೌರ್ಜನ್ಯ ಪ್ರಕರಣಗಳ ಏರಿಕೆ

ಗಂಭೀರ ಸ್ವರೂಪದ ಅಪರಾಧಗಳೂ ರಾಜ್ಯದಲ್ಲಿ ಎಗ್ಗಿಲ್ಲದೆ ನಡೆದಿವೆ. 2025ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 1,210 ಕೊಲೆ ಪ್ರಕರಣಗಳು, 3,258 ಕೊಲೆ ಯತ್ನ ಪ್ರಕರಣಗಳು ನಡೆದಿವೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 656 ಅತ್ಯಾಚಾರ ಪ್ರಕರಣಗಳು, 5,840 ಲೈಂಗಿಕ ಶೋಷಣೆ ಪ್ರಕರಣಗಳು ಹಾಗೂ ಬರೋಬ್ಬರಿ 16,713 ಮಾನಸಿಕ ಕಿರುಕುಳ ಪ್ರಕರಣಗಳು ವರದಿಯಾಗಿವೆ. ಪತಿಯಿಂದ ಪತ್ನಿಗೆ ದೈಹಿಕ ಕಿರುಕುಳ ನೀಡಿದ 2,830 ಪ್ರಕರಣಗಳು ಹಾಗೂ 116 ವರದಕ್ಷಿಣೆ ಸಾವು ಪ್ರಕರಣಗಳು ಠಾಣೆಯ ಮೆಟ್ಟಿಲೇರಿವೆ. ದರೋಡೆಗೆ ಸಂಬಂಧಿಸಿದಂತೆ 143 ಡಕಾಯಿತಿ ಹಾಗೂ 625 ಸುಲಿಗೆ ಪ್ರಕರಣಗಳು ದಾಖಲಾದರೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ 2,411 ದೂರುಗಳು ದಾಖಲಾಗಿವೆ. ಮಾರಣಾಂತಿಕ ಹಲ್ಲೆಯ ಒಟ್ಟು 11,408 ಪ್ರಕರಣಗಳು ವರದಿಯಾಗಿವೆ.

ಗಂಭೀರವಲ್ಲದ ಪ್ರಕರಣಗಳೂ ಸೇರ್ಪಡೆ

ಮಾರಣಾಂತಿಕವಲ್ಲದ ಪ್ರಕರಣಗಳ ಸಂಖ್ಯೆ 31,751ರಷ್ಟಿದೆ. ಇವುಗಳಲ್ಲಿ ಸಣ್ಣಪುಟ್ಟ ಜಗಳ, ನಿಂದನೆ, ಖಾಸಗಿ ದೂರುಗಳು, ಶೂನ್ಯ ಎಫ್‌ಐಆರ್‌ಗಳು ಮತ್ತು ಸಾಮಾನ್ಯ ಅಪಘಾತಗಳು ಸೇರಿವೆ. ಈ ಸಂಖ್ಯೆ ದೊಡ್ಡದಾಗಿದ್ದರೂ, ಇವುಗಳಿಂದ ಕಾನೂನು ಸುವ್ಯವಸ್ಥೆಯ ಬಗ್ಗೆ ಹೆಚ್ಚಿನ ಆತಂಕ ಪಡುವ ಅಗತ್ಯವಿಲ್ಲ ಎಂದು ಪೊಲೀಸ್ ಇಲಾಖೆಯ ವರದಿಗಳು ತಿಳಿಸಿವೆ.

ಸಮಾಚಾರ ಸಣ್ಣದಲ್ಲ

ವರದರಾಜು ಪ್ರಶಸ್ತಿ ಪ್ರಕಟ

ಬೆಂಗಳೂರು: ಡಾ. ರಾಜಕುಮಾರ್ ಅವರ ಸಹೋದರರಾದ ದಿಂ. ಎಸ್.ಪಿ. ವರದರಾಜು ಅವರ ಸ್ಮರಣಾರ್ಥವಾಗಿ ಪ್ರತಿವರ್ಷ ನೀಡಲಾಗುವ ಪ್ರತಿಷ್ಠಿತ ವರದರಾಜು ಪ್ರಶಸ್ತಿಯ 20ನೇ ವರ್ಷದ ಪುರಸ್ಕೃತರನ್ನು ಪ್ರಕಟಿಸಲಾಗಿದೆ. ಈ ವರ್ಷದ ರಂಗಭೂಮಿ ಪ್ರಶಸ್ತಿಗೆ ಹಿರಿಯ ರಂಗಕಲಾವಿದ ಪುಷ್ಪಮಾಲಾ ಎ. ಅಣ್ಣಿಗೇರಿ ಹಾಗೂ ಚಲನ ಚಿತ್ರ ಪ್ರಶಸ್ತಿಗೆ ಹಿರಿಯ ಚಿತ್ರ ರಂಗದ ಸಾಧಕ ಗುರುರಾಜ್ ಆಯ್ಕೆಯಾಗಿದ್ದಾರೆ ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 20ನೇ ವರ್ಷದ ವರದರಾಜು ಪ್ರಶಸ್ತಿ ಪ್ರಧಾನ ಸಮಾರಂಭವು ಫೆ. 14ರಂದು ಸಂಜೆ 5 ಗಂಟೆಗೆ, ಬೆಂಗಳೂರಿನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆಯಲಿದೆ. ಈ ವೇಳೆ ಚಲನಚಿತ್ರ ಕಲಾವಿದೆ ಅಂಬಿಕಾ ಮತ್ತು ಗೀತಾ, ಹಿರಿಯ ನಟ ರಾಮಕೃಷ್ಣ , ಗಾಯಕಿ ಮಂಜುಳಾ ಗುರುರಾಜ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಜನ್ಮದಿನದ ಅಂಗವಾಗಿ ಚಿತ್ರಕಲಾ ಸ್ಪರ್ಧೆ

ಉಡುಪಿ: ಯಕ್ಷಗಾನ ಕಲಾರಂಗದ ಅಧ್ಯಕ್ಷ ಗಂಗಾಧರ ರಾಯರ ಪುತ್ರಿಯ ಜನ್ಮದ ಅಂಗವಾಗಿ ಉಡುಪಿಯ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಭಾನುವಾರ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಒಂದನೇ ತರಗತಿಯಿಂದ ಒಂಬತ್ತನೇ ತರಗತಿವರೆಗಿನ ಸುಮಾರು 320 ವಿದ್ಯಾರ್ಥಿಗಳು ವಿವಿಧ ಶಾಲೆಗಳಿಂದ ಭಾಗವಹಿಸಿ, ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದರು. ಮಕ್ಕಳು ಬಣ್ಣಗಳಿಂದ ತಮ್ಮ ಕಲ್ಪನೆಗಳನ್ನು ಜೀವಂತವಾಗಿ ಮೂಡಿಸಿ, ಈ ಹುಟ್ಟುಹಬ್ಬದ ಸಂಭ್ರಮವನ್ನು ವಿಶೇಷವಾಗಿಸಿದರು. ನಾಲ್ಕು ಲಕ್ಷ ರು. ಖರ್ಚುಮಾಡಿ ಈ ಯೋಜನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವೇಳೆ ಗಂಗಾಧರ ರಾಯರ ಅವರ ಪತ್ನಿ ಸರಸ್ವತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಗಂಗಾಧರ ರಾಯರ ಪುತ್ರಿ ಪಾವನಿ ಸಹ ಕಲಾವಿದರಾಗಿದ್ದು, ರಾಷ್ಟ್ರೀಯ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಆದ್ದರಿಂದ ಪಾವನಿ ಅವರ ಜನ್ಮದಿನವನ್ನು ವಿಭಿನ್ನವಾಗಿ ಆಚರಿಸುವ ಉದ್ದೇಶದಿಂದ ಕಳೆದ ವರ್ಷದಿಂದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ಈ ಬಾರಿಯ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಬಹುಮಾನ ವಿತರಿಸಿದರು.

ಅರ್ಜಿ ಸಲ್ಲಿಕೆ ಗಡುವು ವಿಸ್ತರಣೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಹಾಗೂ ಮೆಟ್ರಿಕ್ ನಂತರದ ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ ಮಾಡಲಾಗಿದೆ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಎಕ್ಸ್‌ನಲ್ಲಿ ಮಾಹಿತಿ ನೀಡಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಫೆ.28. ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಈ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ಹೇಮಂತ್ ಕವನ ಸಂಕಲನಕ್ಕೆ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ನೀಡುವ 2024ನೇ ಸಾಲಿನ ದಿಂ. ಕೆ.ವಿ. ರತ್ನಮ್ಮ ದತ್ತಿ ಪ್ರಶಸ್ತಿಗೆ ಹೇಮಂತ್ ಲಿಂಗಪ್ಪ ಅವರು ಬರೆದಿರುವ 'ಮತ್ತೆ ಮತ್ತೆ ಮಳೆ' ಕವನ ಸಂಕಲನ ಆಯ್ಕೆಯಾಗಿದೆ. ಸಾಹಿತ್ಯ ಪರಿಷತ್ತಿನ ವಿವಿಧ ದತ್ತಿ ಪ್ರಶಸ್ತಿಗಳಿಗೆ ಕೃತಿಗಳನ್ನು ಆಯ್ಕೆ ಮಾಡಲು ರಚಿಸಲಾದ ಹಿರಿಯ ವಿದ್ವಾಂಸ ಡಾ.ಕೆ.ಮರುಳಸಿದ್ದಪ್ಪ ಅವರ ಅಧ್ಯಕ್ಷತೆಯ ಸಮಿತಿ ದಿಂ. ಕೆ.ವಿ.ರತ್ನಮ್ಮ ದತ್ತಿ ಪ್ರಶಸ್ತಿಗೆ ಹೇಮಂತ್ ಕೆ.ಲಿಂಗಪ್ಪ ಅವರ ಕವನ ಸಂಕಲನವನ್ನು ಆಯ್ಕೆ ಮಾಡಿದೆ. ಹೇಮಂತ್ ಲಿಂಗಪ್ಪ ಅವರು ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಸಹಾಯಕ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕವನಗಳ ರಚನೆ ಅವರ ಪ್ರವೃತ್ತಿಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

1,200 ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ನೆರವು

ಬೆಂಗಳೂರು: ಪ್ರತಿಭಾವಂತ ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಉಡಾನ್ ಯೋಜನೆಯಡಿ, 12 ವರ್ಷಗಳಲ್ಲಿ 1,200 ಎಂಬಿಬಿಎಸ್ ಮತ್ತು 600ಕ್ಕೂ ಅಧಿಕ ನರ್ಸಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಒದಗಿಸಲಾಗಿದೆ ಎಂದು ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಬಡ ರೈತರು, ಕಾರ್ಮಿಕರ ಮಕ್ಕಳಿಗೆ ಉಡಾನ್ ಯೋಜನೆಯಡಿ ನೆರವು ನೀಡಲಾಗುತ್ತಿದೆ. 1,500ಕ್ಕೂ ಹೆಚ್ಚು ನೀಟ್ ಆಕಾಂಕ್ಷಿಗಳಿಗೆ ಕೋಚಿಂಗ್ ಪಡೆಯಲು ನೆರವು ನೀಡಲಾಗಿದೆ ಎಂದು ಹೇಳಿದರು. 2024-25ರ ಶೈಕ್ಷಣಿಕ ವರ್ಷದಲ್ಲಿ ಉಡಾನ್ ನೆರವಿನಿಂದ 36 ವಿದ್ಯಾರ್ಥಿಗಳು ಏಮ್ಸ್‌ನಲ್ಲಿ ಪ್ರವೇಶ ಪಡೆದರೆ, ನಾಲ್ಕು ವಿದ್ಯಾರ್ಥಿಗಳು ಲೇಡಿ ಹಾರ್ಡಿಂಜ್ ವೈದ್ಯಕೀಯ ಕಾಲೇಜಿಗೆ ಸೇರ್ಪಡೆಗೊಂಡಿದ್ದಾರೆ. ಏಮ್ಸ್ ನಾಗ್ಪುರ, ಬೆಂಗಳೂರು ವೈದ್ಯಕೀಯ ಕಾಲೇಜು ಸೇರಿ ದೇಶದಾದ್ಯಂತ 30ಕ್ಕೂ ಹೆಚ್ಚು ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ ಎಂದರು.

ಮೆಟ್ರೋ ನಿಗಮಕ್ಕೆ ಕೇಂದ್ರ ಸರಕಾರದಿಂದ ಇ-ಮೇಲ್ ಮೂಲಕ ಅಧಿಕೃತ ಸೂಚನೆ | ಇಡೀ ಪ್ರಹಸನಕ್ಕೆ ಇತಿಶ್ರೀ ಹಾಡಿದ ನಿಗಮ

ಕೊನೆಗೂ ದರ ಏರಿಕೆ ನಿರ್ಧಾರ ಕೈಬಿಟ್ಟ ಮೆಟ್ರೋ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಡಳಿತ-ಪ್ರತಿಪಕ್ಷಗಳ ನಡುವಿನ ವಾಕ್ಸಮರಕ್ಕೆ ಕಾರಣವಾಗಿದ್ದ ಮೆಟ್ರೋ ದರ ಏರಿಕೆಯ ತೀರ್ಮಾನದಿಂದ ಕೊನೆಗೂ ಬಿಎಂಆರ್‌ಸಿಎಲ್ ಕೊನೆಗೂ ತಾತ್ಕಾಲಿಕವಾಗಿ ಹಿಂದೆ ಸರಿದಿದೆ.

ದರ ಏರಿಕೆ ವಿರೋಧಿಸಿ ರಾಜ್ಯ ಸರಕಾರದ ವಿರುದ್ಧ ತಿರುಗಿಬಿದ್ದಿದ್ದ ಬಿಜೆಪಿ ನಾಯಕರು ಕೇಂದ್ರ ಸರಕಾರಕ್ಕೆ ಮೊರೆ ಹೋಗಿದ್ದರು. ಸಂಸದ ತೇಜಸ್ವಿ ಸೂರ್ಯ ಅವರು ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರೊಂದಿಗೆ ಚರ್ಚಿಸಿ, ದರ ಏರಿಸದಂತೆ ಮನವಿ ಮಾಡಿದ್ದರು. ಇದರ ಹೊರತಾಗಿಯೂ, ಸೋಮವಾರದಿಂದ ದರ ಏರಿಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್ ಹೇಳಿಕೆ ತೀವ್ರ ಗೊಂದಲಕ್ಕೆ ಕಾರಣವಾಗಿತ್ತು. ಆದರೆ ಅಂತಿಮವಾಗಿ ಸದ್ಯಕ್ಕೆ ದರ ಏರಿಕೆಯಿಲ್ಲ ಎಂದು ಅಧಿಕೃತ ಹೇಳಿಕೆಯನ್ನು ನಮ್ಮ ಮೆಟ್ರೋ ನೀಡುವ ಮೂಲಕ ಇಡೀ ಪ್ರಹಸನಕ್ಕೆ ಇತಿಶ್ರೀ ಹಾಡಿದೆ.

ಆರಂಭದಲ್ಲಿ ಕೇಂದ್ರ ಸರಕಾರದಿಂದ ಯಾವುದೇ ಅಧಿಕೃತ ಸೂಚನೆ ಬಂದಿಲ್ಲವಾದ್ದರಿಂದ ದರ ಏರಿಸುವುದಾಗಿ ನಮ್ಮ ಮೆಟ್ರೋ ಹೇಳಿತ್ತು. ಆದರೆ ಭಾನುವಾರ ಸಂಜೆಯ ವೇಳೆಗೆ, ಮೆಟ್ರೋ ನಿಗಮಕ್ಕೆ ಕೇಂದ್ರ ಸರಕಾರದಿಂದ ಇ-ಮೇಲ್ ಮೂಲಕ ದರ ಏರಿಕೆ ಮಾಡದಂತೆ ಅಧಿಕೃತ ಸೂಚನೆಯ ಬಳಿಕ ಬೆಲೆ ಏರಿಕೆ ಪ್ರಸ್ತಾಪವನ್ನು ಕೈಬಿಟ್ಟಿದ್ದು, ಸೋಮವಾರದಿಂದ ಮೆಟ್ರೋ ದರದಲ್ಲಿ ಏರಿಕೆಯಾಗುವುದಿಲ್ಲ ಎಂದು ಪ್ರಕಟಣೆಯನ್ನು ಹೊರಡಿಸಿದೆ.

ದರ ಏರಿಕೆ ತಾತ್ಕಾಲಿಕ ಸ್ಥಗಿತ: ದರತ ಏರಿಕೆ ಕುರಿತಂತೆ ದಿನಾಂಕ 5ನೇ ಫೆಬ್ರವರಿ 2026ರಂದು ಪ್ರಕಟಿಸಿದ್ದ ಮಾಧ್ಯಮ ಪ್ರಕಟಣೆಯಲ್ಲಿ ದಿನಾಂಕ 9ನೇ ಫೆಬ್ರವರಿ 2026ರಿಂದ ವಾರ್ಷಿಕ ಸ್ವಯಂಚಾಲಿತ ದರ ಜಾರಿಗೆ ಬರಲಿದೆ ಎಂದು ತಿಳಿಸಲಾಗಿತ್ತು. ಆದರೆ ಈ ನಿರ್ಧಾರವನ್ನು ಮುಂದಿನ ಆದೇಶಗಳ ತನಕ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಮೆಟ್ರೋ ಮಾಹಿತಿ ನೀಡಿದೆ. ಈ ಹಿಂದೆ ಶೇ.5ರಷ್ಟು ಮೆಟ್ರೋ ದರವನ್ನು ಹೆಚ್ಚಿಸುವ ನಿರ್ಧಾರವನ್ನು ಮೆಟ್ರೋ ಕೈಗೊಂಡಿತ್ತು. ಇದಕ್ಕೆ ಸಂಸದರು, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಾದಿಯಾಗಿ ಎಲ್ಲರಿಂದಲೂ ಭಾರೀ ವಿರೋಧ ಕಂಡು ಬಂದಿತ್ತು. ಕೇಂದ್ರ ಸರಕಾರಕ್ಕೆ ದರ ಏರಿಕೆಗೆ ತಡೆ ಒಡ್ಡುವಂತೆ ಮನವಿ ಮಾಡಲಾಗಿತ್ತು. ಇದಕ್ಕೆ ಕೇಂದ್ರ ಸರಕಾರವು ಪರಿಶೀಲನೆ ನಡೆಸಿ, ನ್ಯೂನತೆಗಳನ್ನು ಗಮನದಲ್ಲಿಟ್ಟುಕೊಂಡು, ದರ ಏರಿಕೆಯ ಬಗ್ಗೆ ಚಿಂತಿಸುವಂತೆ ಹೇಳಿತ್ತು. ಕೇಂದ್ರ ಸರಕಾರದಿಂದ ಮೆಟ್ರೋದ ವ್ಯವಸ್ಥಾಪಕ ನಿರ್ದೇಶಕ ರವಿ ಶಂಕರ್ ಅವರಿಗೆ ನೇರವಾಗಿ ಅಧಿಕೃತ ಸೂಚನೆಯು ಆಗಮಿಸಿದ ಹಿನ್ನೆಲೆ ಮುಂದಿನ ಆದೇಶದವರೆಗೂ ಬೆಲೆ ಏರಿಕೆಯ ಬಗ್ಗೆ ಚಿಂತನೆಯಿಲ್ಲ ಎಂದು ಮೆಟ್ರೋ ನಿಗಮವು ಅಧಿಕೃತವಾಗಿ ಮಾಹಿತಿ ನೀಡಿದೆ.

ಕಪ್ಪು ಟೀ ಶರ್ಟ್ ಧರಿಸಿ ಮೆಟ್ರೋ ನಿಲ್ದಾಣಕ್ಕೆ ಬಂದ ಸಂಸದ, ಶಾಸಕ

ಮೆಟ್ರೋ ಟಿಕೆಟ್ ದರ ಏರಿಕೆಯನ್ನು ವಿರೋಧಿಸಿ ಭಾನುವಾರ ಬೆಂಗಳೂರಿನ ಆರ್‌ವಿ ರೋಡ್ ಮೆಟ್ರೋ ನಿಲ್ದಾಣಕ್ಕೆ ಸಂಸದ ತೇಜಸ್ವಿ ಸೂರ್ಯ ಹಾಗೂ ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ ಭೇಟಿ ನೀಡಿದ್ದು, ಇಬ್ಬರೂ ಕಪ್ಪು ಬಣ್ಣದ ಟೀ ಶರ್ಟ್ ಧರಿಸಿ ರಾಜ್ಯ ಸರಕಾರದ ವಿರುದ್ಧ ವಿನೂತನವಾಗಿ ಪ್ರತಿಭಟನೆ ನಡೆಸಿದ್ದರು. ಸಂಸದರು ಧರಿಸಿದ್ದ ಟೀ ಶರ್ಟ್ ಮೇಲೆ 'Mr. CM cut the dram'(ಮುಖ್ಯಮಂತ್ರಿಗಳೇ ನಾಟಕ ನಿಲ್ಲಿಸಿ) ಎಂಬ ಬರಹ ಹಾಗೂ farehikebeda ಎಂಬ ಹ್ಯಾಶ್ ಟ್ಯಾಗ್ ಗಮನ ಸೆಳೆಯಿತು.

ರಾಜ್ಯ ಸರಕಾರದ 'ದಿವಾಳಿ'ತನದ ಮುದ್ರೆಯ ಟೀ ಶರ್ಟ್: ಸಂಸದರು ಧರಿಸಿದ್ದ ಟೀ ಶರ್ಟ್ ಕೇವಲ ಘೋಷಣೆಗಳು ಮಾತ್ರವಲ್ಲದೆ ಫೇರ್ ಫಿಕ್ಸೇಶನ್ ಕಮಿಟಿ ಮುಂದೆ ರಾಜ್ಯ ಸರಕಾರದ ಅಧಿಕಾರಿಗಳು ನೀಡಿರುವ ಹೇಳಿಕೆಗಳನ್ನು ಟೀ ಶರ್ಟ್ ಮೇಲೆ ಮುದ್ರಿಸಲಾಗಿತ್ತು. ರಾಜ್ಯ ಸರಕಾರ ಆರ್ಥಿಕವಾಗಿ ದಿವಾಳಿಯಾಗಿದೆ, ನಮ್ಮ ಬಳಿ ಹಣವಿಲ್ಲ, ಆದ್ದರಿಂದ ದರ ಏರಿಕೆ ಮಾಡಿ ಎಂದು ಅಧಿಕಾರಿಗಳ ಮೂಲಕ ಸಮಿತಿಗೆ ಹೇಳಿಸಲಾಗಿದೆ.

ಉಪಮುಖ್ಯಮಂತ್ರಿಗಳು ಖಾಲಿ ಟ್ರಂಕ್ ಅಂತಾರಲ್ಲ, ಈಗ ಗೊತ್ತಾಗುತ್ತಿದೆ ಖಾಲಿ ಟ್ರಂಕ್ ಯಾರು ಅಂತ ಎಂದು ತೇಜಸ್ವಿ ಸೂರ್ಯ ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಮೆಟ್ರೋ ದರ ಏರಿಕೆ ಹಿಂದೆ ರಾಜ್ಯ ಸರಕಾರದ ಕೈವಾಡ

ಬೆಂಗಳೂರು: ಮೆಟ್ರೋ ದರ ಏರಿಕೆ ಹಿಂದೆ ರಾಜ್ಯ ಸರಕಾರದ ಕೈವಾಡವಿದೆ ಎಂದು ಸಂಸದ ಪಿ.ಸಿ.ಮೋಹನ್ ಆರೋಪಿಸಿದ್ದಾರೆ.

ನಮ್ಮ ಮೆಟ್ರೋ ಪ್ರಯಾಣ ದರಗಳಲ್ಲಿ ಆಗಿರುವ ತೀವ್ರ ಏರಿಕೆ ಅನಿವಾರ್ಯವಲ್ಲ, ಆದರೆ ರಾಜ್ಯ ಸರಕಾರದ ಒತ್ತಡದಿಂದಾಗಿ ದರ ಏರಿಕೆ ನಿರ್ಧರಿಸಲಾಗಿತ್ತು ಎಂದು ದರ ನಿಗದಿ ಸಮಿತಿ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ತಿಳಿಸಿದ್ದಾರೆ.

ಎಫ್‌ಎಫ್‌ಸಿ ವರದಿ ಸತ್ಯವನ್ನು ಬಹಿರಂಗಪಡಿಸಿದ್ದು, ರಾಜ್ಯದ ಮೇಲಿನ ಹಣಕಾಸು ಭಾರ ಕಡಿಮೆ ಮಾಡುವ ಉದ್ದೇಶದಿಂದ ಕರ್ನಾಟಕ ಸರಕಾರದ ನಗರಾಭಿವೃದ್ಧಿ ಹಾಗೂ ಹಣಕಾಸು ಇಲಾಖೆಗಳು ಮೆಟ್ರೋ ದರ ಹೆಚ್ಚಳಕ್ಕೆ ಒತ್ತಾಯಿಸಿದ್ದವು ಎಂದು ವರದಿಯಲ್ಲಿ ತಿಳಿಸಲಾಗಿದೆ. ಅಷ್ಟೇ ಅಲ್ಲದೆ, ಪ್ರತಿವರ್ಷ ಸ್ವಯಂಚಾಲಿತವಾಗಿ ದರ ಪರಿಷ್ಕರಣೆ ಮಾಡುವ ಪ್ರಸ್ತಾವವನ್ನೂ ಸರಕಾರ ಮುಂದಿಟ್ಟಿತ್ತು ಎಂದು ತಿಳಿಸಿದ್ದಾರೆ.

ದರ ಏರಿಕೆ ಸಂಬಂಧ ಕೇಂದ್ರ ಸರಕಾರದ ಮೇಲೆ ಹಾಕುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ರಾಜ್ಯ ಸರಕಾರ ಅಧಿಕೃತವಾಗಿ ಮನವಿ ಸಲ್ಲಿಸಿದಾಗ ಮಾತ್ರ ಕೇಂದ್ರ ಸರಕಾರ ದರ ನಿಗದಿ ಸಮಿತಿ ರಚಿಸುತ್ತದೆ ಎಂಬುದನ್ನು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಲೋಕಸಭೆಯಲ್ಲಿ ನೀಡಿದ ಉತ್ತರದಲ್ಲಿ ಸ್ಪಷ್ಟಪಡಿಸಿದೆ ಎಂದರು.

ದರ ಏರಿಕೆ ಸ್ಥಗಿತ

ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ತೇಜಸ್ವಿ ಸೂರ್ಯ, ಪ್ರಯಾಣ ದರ ಏರಿಸುವ ನಿರ್ಧಾರದ ವಿರುದ್ಧ ತಕ್ಷಣ ಮಧ್ಯ ಪ್ರವೇಶಿಸುವಂತೆ ಸಚಿವರನ್ನು ಕೇಳಿಕೊಂಡಿದ್ದೆ. ಒಂದು ವಾರದಿಂದ ಈ ಬಗ್ಗೆ ಸಚಿವರೊಂದಿಗೆ ಚರ್ಚಿಸಿದ್ದೆ. ಮನೋಹರ ಲಾಲ್ ಖಟ್ಟರ್ ಅವರು ಸೂಚನೆ ನೀಡಿದ್ದಾರೆ. ಸೋಮವಾರ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಭೆ ನಡೆಸಲಾಗುವುದು ಎಂದಿದ್ದಾರೆ. ಸದ್ಯ ಅರ್ಧ ಯುದ್ಧ ಮುಗಿದಿದೆ. ರಾಜ್ಯ ಸರಕಾರ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು ಎಂದರು.

ದೆಹಲಿಗೆ ಓಡಿದ್ದು ಏಕೆ?

ತೇಜಸ್ವಿ ಸೂರ್ಯ ಅವರ ಮಾತಿಗೆ ಕಿಡಿಕಾರಿರುವ ಕಾಂಗ್ರೆಸ್, ನಮ್ಮ ಮೆಟ್ರೊ ದರ ಏರಿಕೆಯಲ್ಲಿ ಕೇಂದ್ರದ ಪಾತ್ರವಿಲ್ಲ ಎಂದು ತೇಜಸ್ವಿ ಸೂರ್ಯ ಹೇಳಿದ್ದರು. ಆದರೆ ಈಗ, ದೆಹಲಿಗೆ ಓಡಿಹೋಗಿ ದರ ಏರಿಕೆಗೆ ತಾತ್ಕಾಲಿಕವಾಗಿ ತಡೆ ನೀಡಿ ಎಂದು ಕೇಳುತ್ತಿದ್ದಾರೆ. ನಿಮಗೆ ದರ ನಿಗದಿ ಮಾಡುವ, ಪರಿಷ್ಕರಿಸುವ ಅಧಿಕಾರ ಇಲ್ಲವೆಂದ ಮೇಲೆ, ದರ ಏರಿಕೆಗೆ ತಡೆ ನೀಡಲು ಹೇಗೆ ಅಧಿಕಾರವಿದೆ ಎಂದು ಪ್ರಶ್ನಿಸಿದೆ.

ರಾಜ್ಯ ಜೈವಿಕ ಇಂಧನ ನೀತಿಯಿಂದ ಉದ್ಯೋಗ ಸೃಷ್ಟಿ

ಬೆಂಗಳೂರಿಗೆ ಆಗಮಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಸ್ವಾಗತಿಸಿದ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಜೈವಿಕ ಇಂಧನ ಕ್ಷೇತ್ರದಲ್ಲಿರುವ ಅವಕಾಶಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು.

ಬೆಂಗಳೂರು: ರಾಜ್ಯ ಸರಕಾರ ರೂಪಿಸಿರುವ ಜೈವಿಕ ಇಂಧನ ನೀತಿಯಿಂದ ಕರ್ನಾಟಕದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯ ಜತೆಗೆ ಉದ್ಯೋಗ ಅವಕಾಶವೂ ಹೆಚ್ಚಾಗಲಿದೆ ಎಂದು ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಕೇಂದ್ರ ಕೃಷಿ ಸಚಿವ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರಿಗೆ ವಿವರಿಸಿದರು.

ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಸಚಿವರೊಂದಿಗೆ ಚರ್ಚೆ ನಡೆಸಿದ ಅವರು, ಕರ್ನಾಟಕದಲ್ಲಿ ಇಂಧನ ಸ್ವಾವಲಂಬನೆ ಸಾಧಿಸುವುದು, ರೈತರ ಆದಾಯ ಹೆಚ್ಚಿಸುವುದು, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಸುವುದು ಮತ್ತು ಜೈವಿಕ ಇಂಧನ ಉತ್ಪಾದನೆಯನ್ನು ಹೆಚ್ಚಿಸಲು ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶದಿಂದ ರೂಪಿಸಲಾಗುತ್ತಿರುವ ನೂತನ ಜೈವಿಕ ಇಂಧನ ನೀತಿ ಕುರಿತು ವಿವರಿಸಲಾಗಿದೆ ಎಂದರು.

ಕೇಂದ್ರ ಸರಕಾರದ 2018ರ ಜೈವಿಕ ಇಂಧನ ನೀತಿ ಹಾಗೂ ರಿಟೇಲ್ ಮಾರಾಟ ಮಳಿಗೆಗಳಿಗೆ ಸಂಬಂಧಿಸಿದ ಆದೇಶಗಳು ರಾಜ್ಯದ ನೀತಿಗೆ ಪೂರಕವಾಗಿವೆ. ಎರಡೂ ಸರಕಾರಗಳ ನೀತಿಗಳನ್ನು ಸಮನ್ವಯಗೊಳಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವಿದೆ.

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026-27ನೇ ಸಾಲಿನ ಆಯವ್ಯಯದಲ್ಲಿ ನೂತನ ಜೈವಿಕ ಇಂಧನ ನೀತಿ ಅನುಷ್ಠಾನಕ್ಕೆ ಆದ್ಯತೆ ನೀಡಲು ಉದ್ದೇಶಿಸಿರುವುದನ್ನು ಸಚಿವರ ಗಮನಕ್ಕೆ ತರಲಾಯಿತು. ಜೈವಿಕ ಇಂಧನ ಸಂಪನ್ಮೂಲಗಳ ಅಭಿವೃದ್ಧಿ, ಮೂಲಸೌಕರ್ಯ ಸೃಜನೆ ಹಾಗೂ ಮಾನವ ಸಂಪನ್ಮೂಲ ವೃದ್ಧಿಗೆ ಹೆಚ್ಚುವರಿ ಕೇಂದ್ರ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಈ ಕುರಿತು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಾರ್ಯ ಯೋಜನೆಗಳನ್ನು ಸಂಯೋಜಿತವಾಗಿ ಅನುಷ್ಠಾನಗೊಳಿಸುವಂತೆ ಸಲಹೆ ನೀಡಿದರು. ಸಭೆಯಲ್ಲಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಎಲ್. ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯ

ಜಾನಪದ ಕಲೆಯು ಬದುಕನ್ನು ಪ್ರತಿಬಿಂಬಿಸುವ ಕನ್ನಡಿ

ವಿಶ್ವವಾಣಿ ಸುದ್ದಿಮನೆ ರಾಮನಗರ

ಜನಪದ ಅಂದರೆ ಜನಪರ ಎಂದು ನಂಬಿರುವವನು ನಾನು. ಜಾನಪದ ಕಲೆಗಳು ಕೇವಲ ಮನೋರಂಜನೆಯ ಮಾಧ್ಯಮವಲ್ಲ; ಅವು ನಮ್ಮ ಮಣ್ಣಿನ ಗುಣ, ಇತಿಹಾಸ ಮತ್ತು ಬದುಕಿನ ಕ್ರಮವನ್ನು ಪ್ರತಿಬಿಂಬಿಸುವ ಕನ್ನಡಿ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಕರ್ನಾಟಕ ಜಾನಪದ ಪರಿಷತ್ ವತಿಯಿಂದ ಜಾನಪದ ಲೋಕದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ಜನಪದ ಲೋಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಪೂರ್ವಜರ ಆಚಾರ-ವಿಚಾರ, ನಂಬಿಕೆ ಮತ್ತು ಜೀವನದ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವನ್ನು ಜಾನಪದ ಕಲೆಗಳು ಮಾಡುತ್ತವೆ. ಯಕ್ಷಗಾನ, ದೊಡ್ಡಾಟ ಅಥವಾ ಬಯಲಾಟಗಳು ಪುರಾಣ ಪುಣ್ಯಕಥೆಗಳನ್ನು ಜನಸಾಮಾನ್ಯರಿಗೆ ತಲುಪಿಸುತ್ತವೆ. ಸಾಮಾಜಿಕ ಐಕ್ಯತೆಯಲ್ಲೂ, ಶ್ರಮಿಕ ಜನಸಮುದಾಯಗಳನ್ನು ಜಾತಿ-ಮತದ ಭೇದವಿಲ್ಲದೆ ಒಂದುಗೂಡಿಸುತ್ತವೆ. ಊರಿನ ಹಬ್ಬಗಳು, ಜಾತ್ರೆಗಳಲ್ಲಿ ನಡೆಯುವ ಡೊಳ್ಳು ಕುಣಿತ, ವೀರಗಾಸೆ ಅಥವಾ ಕೋಲಾಟಗಳು ಸಾಮೂಹಿಕ ಶಕ್ತಿಯನ್ನು ಮತ್ತು ಸೌಹಾರ್ದತೆಯನ್ನು ಎತ್ತಿ ಹಿಡಿಯುತ್ತವೆ ಎಂದು ತಿಳಿಸಿದರು. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ದಣಿವು ನೀಗಿಸಿಕೊಳ್ಳಲು ರೈತರು ಹಾಡುವ ಬೀಸುವ ಪದಗಳು, ನೆಟ್ಟಿಯ ಹಾಡುಗಳು ಕೇವಲ ಗೀತೆಗಳಲ್ಲ, ಅವು ಶ್ರಮಜೀವಿಗಳ ಉಸಿರು. ಇವು ಮನುಷ್ಯನ ಮನಸ್ಸಿಗೆ ಮುದ ನೀಡಿ ಬದುಕುವ ಉತ್ಸಾಹ ತುಂಬುತ್ತವೆ. ಉತ್ತರ ಕರ್ನಾಟಕದ್ದೇ ಆದ ವಿಶಿಷ್ಟ ಶೈಲಿಯ ಲಾವಣಿ, ಗೀಗೀ ಪದ, ದೊಡ್ಡಾಟಗಳು ರೋಮಾಂಚನಗೊಳಿಸುತ್ತವೆ. ಹಳೇ ಮೈಸೂರು ಭಾಗದಲ್ಲಿನ ಪೂಜಾ ಕುಣಿತ, ಗೊರವನ ಕುಣಿತ, ಕಂಸಾಳೆ ಎಲ್ಲಾ ನೋಡಿದರೆ ಈ ವೈವಿಧ್ಯತೆಯು ಕರ್ನಾಟಕದ ಸಾಂಸ್ಕೃತಿಕ ನಕ್ಷೆಯನ್ನು ಶ್ರೀಮಂತಗೊಳಿಸಿರುವುದು ಗೊತ್ತಾಗುತ್ತದೆ. ಭಾಷೆಯ ಶ್ರೀಮಂತಿಕೆ ಜಾನಪದ ಸಾಹಿತ್ಯವು ಲಿಖಿತ ರೂಪದಲ್ಲಿಲ್ಲದಿದ್ದರೂ, ಮೌಖಿಕ ಪರಂಪರೆಯ ಮೂಲಕ ಕನ್ನಡ ಭಾಷೆಯ ಸೊಗಡನ್ನು ಉಳಿಸಿಕೊಂಡು ಬಂದಿದೆ ಎಂದು ವಿವರಿಸಿದರು.

ವಿದ್ಯಾರ್ಥಿ ಜನಪದ ಲೋಕೋತ್ಸವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉದ್ಘಾಟಿಸಿದರು. ಜಾನಪದ ಪರಿಷತ್ ಅಧ್ಯಕ್ಷ ಹಿ.ಚಿ.ಬೋರಲಿಂಗಯ್ಯ, ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರ ಸ್ವಾಮೀಜಿ, ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಕೆ.ರಾಜು ಇದ್ದರು.

> **ಜನಪದದಲ್ಲಿ ಜನ ವಿರೋಧಿಯಾದದ್ದು, ಸಮಾಜ ವಿರೋಧಿಯಾದದ್ದು ಏನೂ ಇಲ್ಲ ಆದ್ದರಿಂದಲೇ ಜನಪದ ಎಂದರೆ ಜನಪರ ಎನ್ನುತ್ತೇನೆ. ನಮ್ಮ ಜಾನಪದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಮುಂದಿನ ತಲೆ ಮಾರುಗಳಿಗೆ ದಾಟಿಸುವ ಮೂಲಕ ಈ ನೆಲದ ಸಂಸ್ಕೃತಿಯನ್ನು ಗಟ್ಟಿಗೊಳಿಸುವ ಕೆಲಸ ವಿದ್ಯಾರ್ಥಿಗಳಿಂದಲೇ ಆಗಬೇಕಿದೆ. ಈ ನಿಟ್ಟಿನಲ್ಲಿ ಈ ಲೋಕೋತ್ಸವ ಮಹತ್ವದ್ದು.**
>
> - **ಕೆ.ವಿ.ಪ್ರಭಾಕರ್** ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ

ಕ್ಯಾನ್ಸರ್ ಪೀಡಿತ ಮಕ್ಕಳ ಉಪಶಾಮಕ ಆರೈಕೆ ಸವಾಲು: ಬ್ರೀಮನ್

ಬೆಂಗಳೂರು: ಉಪಶಾಮಕ ಆರೈಕೆಗೆ ಹೆಚ್ಚಿನ ಬೇಡಿಕೆಯಿದ್ದು, ಅರಿವು ಮತ್ತು ಜಾಗೃತಿ ಮೂಡಿಸಬೇಕಿದೆ. ಕ್ಯಾನ್ಸರ್ ಪೀಡಿತ ಮಕ್ಕಳ ಉಪಶಾಮಕ ಆರೈಕೆ ಸವಾಲಿನದ್ದು ಎಂದು ಮಕ್ಕಳ ಉಪಶಮನ ಆರೈಕೆಯಲ್ಲಿ ಪರಿಣತ ಕೆನಡಿಯನ್ ನರ್ಸ್ ಪ್ರಾಕ್ಟೀಷನರ್ ಕ್ಯಾಮರಾ ವಾನ್ ಬ್ರೀಮನ್ ಅವರು ತಿಳಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವತಿಯಿಂದ ಇನ್ಫೋಸಿಸ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಕ್ಯಾನ್ಸರ್ ಹಾಗೂ ಮಕ್ಕಳ ಉಪಶಮನ ಆರೈಕೆ' ಕುರಿತು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ದಾದಿಯರ ಉತ್ತಮ ಶುಶ್ರೂಷೆ ಹಾಗೂ ಆರೈಕೆ ರೋಗಿಗಳು ಶೀಘ್ರ ಚೇತರಿಸಿಕೊಳ್ಳಲು ಸಹಕಾರಿಯಾಗುತ್ತದೆ. ರೋಗಿಗಳೊಂದಿಗೆ ಹೆಚ್ಚು ಸಮಯ ಕಳೆಯುವ ದಾದಿಯರು ಕಾಯಿಲೆ ಗಳು ಗುಣವಾಗಲು ಹೆಚ್ಚು ಶ್ರಮ ಹಾಕುತ್ತಾರೆ ಎಂದು ತಿಳಿಸಿದರು.

ಕ್ಯಾನ್ಸರ್‌ಪೀಡಿತ ಮಕ್ಕಳ ಚಿಕಿತ್ಸೆ ಸವಾಲಿನದ್ದು. ಪ್ರತಿಯೊಂದು ವೈದ್ಯಕೀಯ ಹಂತದಲ್ಲೂ ತುಂಬಾ ಜವಾಬ್ದಾರಿಯಿಂದ ಚಿಕಿತ್ಸೆ ನೀಡಬೇಕಾಗುತ್ತದೆ. ಕ್ಯಾನ್ಸರ್‌ನಂತಹ ಗಂಭೀರ, ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ನೋವು, ರೋಗ ಲಕ್ಷಣಗಳು ಮತ್ತು ಒತ್ತಡದಿಂದ ಪರಿಹಾರ ನೀಡಿ, ಜೀವನದ ಗುಣಮಟ್ಟವನ್ನು ಸುಧಾರಿ ಸುವ ವಿಶೇಷ ವೈದ್ಯಕೀಯ ಸೇವೆ ಉಪಶಾಮಕ ಚಿಕಿತ್ಸೆಯಾಗಿದೆ. ಯಾವುದೇ ವಯಸ್ಸಿನವರಿಗೆ, ಚಿಕಿತ್ಸೆಯ ಯಾವುದೇ ಹಂತ ದಲ್ಲಿ ಅನ್ವಯಿಸುತ್ತದೆ ಮತ್ತು ರೋಗಿಯೊಂದಿಗೆ ಅವರ ಕುಟುಂಬಕ್ಕೂ ದೈಹಿಕ, ಭಾವನಾತ್ಮಕ ಬೆಂಬಲ ವನ್ನು ನೀಡುತ್ತದೆ ಎಂದರು. ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ವೈದ್ಯೆ ಅನುರಾಧ ಮಾತನಾಡಿ, ಉಪಶಾಮಕ ಆರೈಕೆಯಲ್ಲಿ ಶುಶ್ರೂಷಕರ ಪಾತ್ರ ಬಹಳ ಮುಖ್ಯ.

ರೋಗಿಯ ಸಂಪೂರ್ಣ ಚಿಕಿತ್ಸೆ ಹಾಗೂ ಆರೈಕೆ ನೀಡುವಲ್ಲಿ ಮುಖ್ಯಪಾತ್ರ ವಹಿಸುತ್ತಾರೆ. ರೋಗಿಗಳಿಗೆ ಉತ್ತಮ ವೈದ್ಯಕೀಯ ಸೇವೆ ನೀಡುವುದು ಆಸ್ಪತ್ರೆಗಳ ಕರ್ತವ್ಯ ಎಂದು ತಿಳಿಸಿದರು. ಕಾರ್ಯಾಗಾರದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿ ಗಳು ಭಾಗವಹಿಸಿದ್ದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವತಿಯಿಂದ ಇನ್ಫೋಸಿಸ್ ಸಭಾಂಗಗಣದಲ್ಲಿ ಆಯೋಜಿಸಿದ್ದ ಕ್ಯಾನ್ಸರ್ ಹಾಗೂ ಮಕ್ಕಳ ಉಪಶಮನಾತ್ಮಕ ಆರೈಕೆ ಕುರಿತು ಕಾರ್ಯಾಗಾರದಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದ ಔಷಧ ಮತ್ತು ವೈದ್ಯಕೀಯ ಚಿಕಿತ್ಸಾ ವಿಭಾಗದ ಕ್ಯಾಮರಾ ವಾನ್ ಬ್ರೀಮನ್, ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಅವರು ಭಾಗವಹಿಸಿದ್ದರು.

> **ಸಂಸ್ಥೆಯಲ್ಲಿರುವ ಉಪಶಾಮಕ ಆರೈಕೆ ವಿಭಾಗ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುತ್ತಿದೆ. ಈ ವಿಭಾಗವು ಕ್ಯಾನ್ಸರ್ ಕೇಂದ್ರಗಳಿಗೆ ಆಧಾರ ಸ್ಥಂಭವಿದ್ದಂತೆ. ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳಿಗೆ ನೋವು ಹಾಗೂ ಮಾನಸಿಕ ಒತ್ತಡ ನಿವಾರಣೆಗೆ ಉಪಶಾಮಕ ಆರೈಕೆ ವಿಭಾಗ ನೆರವಾಗಿದೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಅಂತಿಮ ಘಟ್ಟಕ್ಕೆ ತಲುಪಿರುವ ರೋಗಿಗಳ ಆರೈಕೆಗೆ ಪ್ರತ್ಯೇಕವಾದ ಘಟಕ ನಿರ್ಮಾಣ ಮಾಡಲಾಗುತ್ತದೆ. ಇದಕ್ಕೆ ರಾಜ್ಯ ಸರಕಾರ ಎಲ್ಲ ಸಹಕಾರ ನೀಡಿದೆ.**
>
> -**ಡಾ.ಟಿ.ನವೀನ್**, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಯುವ ಪ್ರತಿಭೆಗಳಿಗೆ ವೇದಿಕೆಯು ಅಗತ್ಯ

ತ್ರಿಧಾ ಮ್ಯೂಸಿಕ್ ಅಕಾಡೆಮಿಯ ಎರಡನೇ ಘಟಕವನ್ನು ಉದ್ಘಾಟಿಸಲಾಯಿತು. ಈ ವೇಳೆ ಸರಿಗಮಪ ಸೀಸನ್ 20ರ ವಿಜೇತ ದರ್ಶನ ನಾರಾಯಣ, ತ್ರಿಧಾ ಮ್ಯೂಸಿಕ್ ಅಕಾಡೆಮಿಯ ಸಂಸ್ಥಾಪಕಿ ರಕ್ಷಿತಾ ಭಾಸ್ಕರ್, ಹಿನ್ನಲೆ ಗಾಯಕ ಅಖಿಲ್ ಪಜಿಮಣ್ಣು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ತ್ರಿಧಾ ಮ್ಯೂಸಿಕ್ ಅಕಾಡೆಮಿಯ ಎರಡನೇ ಘಟಕದ ಉದ್ಘಾಟನಾ ಸಮಾರಂಭವನ್ನು ನಗರದ ವಿಜಯನಗರದಲ್ಲಿ ಆಯೋಜಿಸಲಾಗಿತ್ತು. ಈ ವೇಳೆ ಸರಿಗಮಪ ಸೀಸನ್ 20ರ ವಿಜೇತ ದರ್ಶನ ನಾರಾಯಣ ಮಾತನಾಡಿ, ಸಂಗೀತ ಶಿಕ್ಷಣದ ಮಹತ್ವವನ್ನು ಸಂಗೀತ ಪ್ರೇಮಿಗಳು ತಿಳಿಯಬೇಕು. ಯುವ ಪ್ರತಿಭೆಗಳಿಗೆ ಇಂತಹ ವೇದಿಕೆಗಳು ಅಗತ್ಯ ಎಂದರು. ತ್ರಿಧಾ ಮ್ಯೂಸಿಕ್ ಅಕಾಡೆಮಿಯ ಸಂಸ್ಥಾಪಕಿ ರಕ್ಷಿತಾ ಭಾಸ್ಕರ್ ಮಾತನಾಡಿ, ಸಂಗೀತ ಕ್ಷೇತ್ರದಲ್ಲಿ ಇನ್ನಷ್ಟು ವಿದ್ಯಾರ್ಥಿಗಳನ್ನು ಬೆಳೆಸುವುದು ನನ್ನ ಗುರಿ. ಸಂಸ್ಥೆಯು ಮುಂದಿನ ದಿನಗಳಲ್ಲಿ ಸಂಗೀತ ಆಸಕ್ತಿ ವಿದ್ಯಾರ್ಥಿಗಳಿಗೆ ಹಲವಾರು ಯೋಜನೆಗಳನ್ನು ಜಾರಿಗೆ ಮಾಡಿ ಸಹಾಯ ಮಾಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಹಿನ್ನಲೆ ಗಾಯಕ ಅಖಿಲ್ ಪಜಿಮಣ್ಣು, ಅರುಂಧತಿ ಹೆಗಡೆ, ಐಶ್ವರ್ಯ ಮಣಿಕರ್ಣಿಕೆ, ಕಿರುತೆರೆ ನಟ ಅಥರ್ವ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಿಎಂಆರ್ ವಿವಿ ಘಟಿಕೋತ್ಸವ



ಸಿಎಂಆರ್ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಸಚಿವ ಡಾ. ಎಂ.ಸಿ.ಸುಧಾಕರ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ದರು.

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಮೌಲ್ಯಯುತ ಮತ್ತು ಕೌಶಲ್ಯಾಧಾರಿತ ಶಿಕ್ಷಣ ನೀಡುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು. ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ಸಭಾಂಗಣದಲ್ಲಿ ಜರುಗಿದ ಸಿಎಂಆರ್ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದಲ್ಲಿ 29 ಖಾಸಗಿ ವಿಶ್ವವಿದ್ಯಾಲಯಗಳಿದ್ದು, ಸಿಎಂಆರ್ ವಿಶ್ವವಿದ್ಯಾಲಯ ಕೂಡ ಒಂದಾಗಿದ್ದು, ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಪಠ್ಯಕ್ರಮದ ಮೂಲಕ ಕೌಶಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿದ್ದು ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸುತ್ತಿದೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಕೂಕನಪಳ್ಳಿ: ಸರಾಯಿ ಸೇವಿಸಿದ ಇಬ್ಬರ ಸಾವು

ಕೊಪ್ಪಳ: ತಾಲೂಕಿನ ಕೂಕನಪಳ್ಳಿ ಗ್ರಾಮದಲ್ಲಿ ಪಾರ್ಟಿ ಮಾಡಿದ ಐವರು ಯುವಕರು, ಮದ್ಯ ತಯಾರಿಕೆಗೆ ಬಳಕೆ ಮಾಡುವ ಸ್ಪಿರೀಟ್ ಕುಡಿದಿದ್ದಾರೆ. ಈ ಪೈಕಿ ಇಬ್ಬರು ಮೃತಪಟ್ಟಿದ್ದಾರೆ. ಮತ್ತೊಬ್ಬನ ಸ್ಥಿತಿ ಚಿಂತಾಜನಕವಾಗಿದೆ. ಕೂಕನಪಳ್ಳಿ ಗ್ರಾಮದ ಅಮರಯ್ಯ ಹಿರೇಮಠ(35) ಹಾಗೂ ರಮೇಶ ಹಿರೇಮಠ (25) ಮೃತಪಟ್ಟಿದ್ದು, ಶರಣಪ್ಪ ಹಂಚಿನಾಳ ಸ್ಥಿತಿ ಚಿಂತಾಜನಕವಾಗಿದೆ. ಮೃತ ಅಮರಯ್ಯ ಜೆಸ್ಕಾಂ ಹೊರ ಗುತ್ತಿಗೆ ನೌಕರನಾಗಿ ಕೆಲಸ ಮಾಡತಿದ್ದ. ರಮೇಶ ಹೊಸಹಳ್ಳಿ ಮದುವೆ ವಯಸ್ಸಿಗೆ ಬಂದಿದ್ದು, ತಂದೆ – ತಾಯಿಗೆ ಒಬ್ಬನೇ ಮಗ. ಮಕ್ಕಳನ್ನು ಕಳೆದುಕೊಂಡ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ. ಘಟನೆಗೆ ಸಂಬಂಧಿಸಿದಂತೆ ಮೃತರ ಜತೆಗೆ ರಾತ್ರಿ ಊಟ ಮಾಡಿದ್ದ ಮತ್ತು ಎಲ್ಲರಿಗೂ ಸ್ಪಿರೀಟ್ ಕುಡಿಸಿದ್ದ ಮಾರುತಿ ಬಂಡಿ ಹಾಗೂ ಶರಣಪ್ಪ ಗುರಿಕಾರರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಘಟನೆ ವಿವರ: ವಾಹನಗಳ ವಾಟರ್ ವಾಶ್ ಮಾಡುವ ಐವರು ಸ್ನೇಹಿತರು ಕಳೆದ ಫೆ. 4 ರಂದು ಪಾರ್ಟಿ ಮಾಡಿದ್ದಾರೆ. ಅಮರಯ್ಯ ಹಿರೇಮಠ ಹಾಗೂ ಶರಣಪ್ಪ ಹಂಚಿನಾಳ ಸ್ಪಿರೀಟ್ ಕುಡಿದಿದ್ದಾರೆ. ಆದರೆ, ಮಾರುತಿ ಬಂಡಿ, ಶರಣಪ್ಪ ಗುರಿಕಾರ ಹಾಗೂ ರಮೇಶ ಸ್ಪಿರೀಟ್ ಕುಡಿದಿಲ್ಲ. ಮರು ದಿನವೇ ಸ್ಪಿರೀಟ್ ಕುಡಿದಿದ್ದ ಇಬ್ಬರೂ ಅಸ್ವಸ್ಥಗೊಂಡಿದ್ದು, ಹುಬ್ಬಳ್ಳಿಯ ಕಿಮ್ಸ್‌ಗೆ ಗಡ ದಾಖಲಾಗಿದ್ದಾರೆ.

ಅಪಘಾತ: ಕುಟುಂಬದ ಮೂವರು ಮೃತ್ಯು

ಬೀದರ್: ರಸ್ತೆ ಪಕ್ಕದ ಬ್ರಿಡ್ಜ್‌ಗೆ ಬೈಕ್ ಡಿಕ್ಕಿಯಾಗಿ ಒಂದೇ ಕುಟುಂಬದ ಮೂವರು ದಾರುಣ ಸಾವಿಗೀಡಾಗಿರುವ ಘಟನೆ ಬೀದರ್‌ನಲ್ಲಿ ನಡೆದಿದೆ. ಹುಮನಾಬಾದ್ ತಾಲೂಕಿನ ಹಳ್ಳಿಖೇಡ–ಬಿ ಬಳಿಯ ನಾಗಣ್ಣ ಕ್ರಾಸ್ ಹತ್ತಿರ ಅಪಘಾತವಾಗಿದೆ. ಪತಿ ವೆಂಕಟ್ ಕರಟ್ಮಲ್ (40), ಪತ್ನಿ ಶಿಲ್ಪಾ (35), ಮಗಳು ರಕ್ಷಿತಾ (12) ಮೃತ ದುರ್ದೈವಿಗಳು. ಇವರು ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದವರು. ಮಗ ದಿಗಂಬರ್ (15) ಗಂಭೀರ ಗಾಯಗೊಂಡಿದ್ದು, ಆಸ್ಪತ್ರೆಗೆ ರವಾನಿಸಲಾಗಿದೆ. ಕುಟುಂಬ ಸಮೇತ ಬೀದರ್‌ಗೆ ಹೋಗಿ ವಾಪಸ್ ರಾಜೇಶ್ವರ ಗ್ರಾಮಕ್ಕೆ ತೆರಳುವ ವೇಳೆ ದುರ್ಘಟನೆ ಸಂಭವಿಸಿದೆ. ಪತಿ–ಪತ್ನಿ ಹಾಗೂ ಇಬ್ಬರು ಮಕ್ಕಳು ಸೇರಿ ನಾಲ್ವರು ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದರು. ಬೀದರ್‌ನಲ್ಲಿರುವ ಸೋದರ ಅಳಿಯನ ಮಗಳನ್ನು ಮಾತನಾಡಿಸೋಕೆ ಬಂದಿದ್ದರು. ವಾಪಸ್ ಆಗುವಾಗ ಸೇತುವೆಗೆ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೂವರು ಸಾವನ್ನಪ್ಪಿದ್ದಾರೆ. ಹಳ್ಳಿಖೇಡ–ಬಿ ಪಟ್ಟಣದ ಶವಾಗಾರದಲ್ಲಿ ದಂಪತಿ ಮಗಳ ಮೃತದೇಹ ಇಡಲಾಗಿದೆ. ಬ್ರಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಸರಣಿ ಅಪಘಾತದಲ್ಲಿ ಇಬ್ಬರು ದುರ್ಮರಣ

ತುಮಕೂರು: ತಾಲೂಕಿನ ಬಾಣಾವರ ಗೇಟ್ ಬಳಿ ಮೂರು ಕಾರುಗಳ ಮಧ್ಯೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಐದು ಜನ ಗಾಯಗೊಂಡಿದ್ದಾರೆ. ನಗರದ ಯಾದವ ನಗರದ ಸುರೇಶ್ (55), ಮುರಳಿ (60) ಮೃತರು . ಸೈಬರ್ ಠಾಣೆಯ ಇನ್‌ಸ್ಪೆಕ್ಟರ್ ರಾಮಕೃಷ್ಣಪ್ಪ, ಜೆಡಿಎಸ್ ವಕ್ತಾರ ಜಯಣ್ಣ, ಮಂಜುನಾಥ್ ಸೇರಿದಂತೆ 5 ಜನ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಆದಿಚುಂಚನಗಿರಿ ಮಠಕ್ಕೆ ಹೋಗಿ ವಾಪಸ್ ತುಮಕೂರು ಕಡೆಯಿಂದ ಕುಣಿಗಲ್ ಕಡೆಗೆ ತೆರಳುತ್ತಿದ್ದ ಕ್ವಾಲಿಸ್ ಮತ್ತು ಮುಂದೆ ಬರುತ್ತಿದ್ದ ಎಸ್ಟೀಮ್ ಹಾಗೂ ಬೋಲೆರೋ ಕಾರಿನ ನಡುವೆ ಸರಣಿ ಅಪಘಾತ ಸಂಭವಿಸಿದ್ದು ಗಾಯಾಳುಗಳನ್ನು ತುಮಕೂರು ಜಿಲ್ಲಾಸ್ಪತ್ರೆ ರವಾನೆ ಮಾಡಲಾಗಿದೆ. ಘಟನಾ ಸ್ಥಳಕ್ಕೆ ಹೆಬ್ಬೂರು ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ. ಇನ್ನು ಈ ಅಪಘಾತದಲ್ಲಿ ತುಮಕೂರು ಸಬ್ ಇನ್‌ಸ್ಪೆಕ್ಟರ್ ರಾಮಕೃಷ್ಣ ಗೆ ಗಂಭೀರವಾಗಿ ಗಾಯವಾಗಿದ್ದು ಇವರನ್ನು ಬೆಂಗಳೂರಿಗೆ ರವಾನೆ ಮಾಡಲಾಗಿದೆ.

ನಿರಪರಾಧಿ ಎನಿಸಿಕೊಂಡ ಮರುದಿನವೇ ಹೇದೆ ಸಾವು

← ಮೊದಲಪುಟದಿಂದ

2004ರಲ್ಲಿ ಸೆಷನ್ಸ್ ನ್ಯಾಯಾಲಯವು ಪ್ರಜಾಪತಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು 3,000 ರು. ದಂಡವನ್ನು ವಿಧಿಸಿತ್ತು.ಪ್ರಜಾಪತಿ ಗುಜರಾತ್ ಹೈಕೋರ್ಟ್‌ನಲ್ಲಿ ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿದರು. ನಂತರ, ಅವರ ಮೇಲ್ಮನವಿ 22 ವರ್ಷಗಳ ಕಾಲ ಬಾಕಿ ಇತ್ತು. ಈ ವರ್ಷ ಫೆಬ್ರವರಿ 4 ರಂದು ಅವರು ನಿರಪರಾಧಿ ಎಂದು ತೀರ್ಪು ಬಂದಿದೆ. ಸಾಕ್ಷಿಗಳ ಹೇಳಿಕೆಗಳಲ್ಲಿ ಗಂಭೀರ ವಿರೋಧಾಭಾಸಗಳಿವೆ. ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ನ್ಯಾಯಾಲಯ ಹೇಳಿದೆ. ಪ್ರಜಾಪತಿ ಪರ ಹೋರಾಡಿದ್ದ ವಕೀಲ ನಿತಿನ್ ಗಾಂಧಿ, ಇಡೀ ಪ್ರಕರಣವು ಅನುಮಾನದಿಂದ ಕೂಡಿದೆ ಎಂದು ವಾದಿಸಿದ್ದರು. ತೀರ್ಪು ಬಂದ ಮರುದಿನ ಮುಂದಿನ ವಿಧಿವಿಧಾನಗಳು, ಕೆಲಸದಿಂದ ವಜಾಗೊಂಡಿದ್ದನ್ನು ಮತ್ತೆ ಪಡೆಯುವುದು ಹೇಗೆ ಎಂಬೆಲ್ಲ ಲೆಕ್ಕಾಚಾರಗಳನ್ನು ಮಾಡಬೇಕಿತ್ತು. ಅದು ಯಾವುದರಲ್ಲೂ ಪ್ರಜಾಪತಿ ಆಸಕ್ತಿ ತೋರಿಸಿಲ್ಲ. ತಮ್ಮ ಸೋದರಳಿಯನ ಮನೆಯಲ್ಲಿ ಮಲಗಿದ್ದವರು ಹಾಗೆಯೇ ಮೃತಪಟ್ಟಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಚಿಕ್ಕಬಳ್ಳಾಪುರದಲ್ಲಿ ಬೆಂಬಲಿಗರಿಂದ ನಾನಾ ಸೇವಾ ಕೈಂಕರ್ಯ, ಅನ್ನದಾನ ಸೇವೆ

ಶಾಸಕ ಪ್ರದೀಪ್ ಈಶ್ವರ್ 40ನೇ ಜನ್ಮದಿನ

ಚಿಕ್ಕಬಳ್ಳಾಪುರ: ಶಾಸಕ ಪ್ರದೀಪ್ ಈಶ್ವರ್ ಅಯ್ಯರ್ ಅವರ 40ನೇ ಜನ್ಮ ದಿನಾಚರಣೆ ಅಂಗವಾಗಿ ತಾಲೂಕಿನಾದ್ಯಂತ ನಾನಾ ಸೇವಾ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಭಾನುವಾರ ಬೆಳಗ್ಗೆ ಯೋಗಿನಾರಾಯಣ ಯತೀಂದ್ರರ ದೇವಾಲಯದಲ್ಲಿ ವಿಶೇಷ ಪೂಜೆ ಮತ್ತು ಶಾಸಕ ಪ್ರದೀಪ್ ಹೆಸರಿನಲ್ಲಿ ಅಭಿಷೇಕ ಮಾಡಿಸಲಾಯಿತು. ಪೂಜೆಯ ನಂತರ ನೂರಾರು ಅಭಿಮಾನಿಗಳಿಗೆ ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು.

ಪೂಜೆಯ ನಂತರ ದೇವಾಲಯದ ಆವರಣದಲ್ಲಿ ಶಾಸಕ ಪ್ರದೀಪ್ ಈಶ್ವರ್ ಬ್ಯಾನರ್ ಎದುರು ಕೇಕ್ ಕತ್ತರಿಸಿ ಶುಭ ಕೋರಲಾಯಿತು. ಇದೇ ವೇಳೆ ಶಾಸಕರಿಗೆ ಒಳಿತಾಗಲಿ ಎಂದು ಎರಡು ಸಾವಿರ ತೆಂಗಿನ ಕಾಯಿಗಳ ಇಡುಗಾಯಿ ಹೊಡೆಯಲಾಯಿತು.

ಪ್ರದೀಪ್ ಈಶ್ವರ್ ಅವರ 40ನೇ ಹುಟ್ಟಿದ ದಿನದ ಅಂಗವಾಗಿ 40 ಕೆ.ಜಿ.ಕೇಕ್ ತಯಾರಿಸಿ ಅದರ ಮೇಲೆ ಬಾಸ್ ಎಂದು ಬರಿಸಿದ್ದು ವಿಶೇಷವಾಗಿತ್ತು. ಬಾಸ್ ಎಂದರೆ ಏನು ಎಂದು ಕೇಳಿದವರಿಗೆ ಬ್ಯಾಚುಲರ್ ಆಫ್ ಸೋಶಿಯಲ್ ಸರ್ವಿಸ್ ಹೀರೋ ಎಂದು ಅಭಿಮಾನದಿಂದ ಹೇಳುತ್ತಾ ಪ್ರದೀಪ್ ಈಶ್ವರ್ ಕಿ ಜೈ ಎಂದು ಘೋಷಣೆಗಳನ್ನು ಮೊಳಗಿಸಲಾಯಿತು. ಚಿಕ್ಕಬಳ್ಳಾಪುರ ನಗರದ ಖಾಸಗಿ ಬಸ್ ನಿಲ್ದಾಣ 2500ಮಂದಿಗೆ ಮತ್ತು ಅಭಿಷೇಕ್ ಹೋಟೆಲ್ ವೃತ್ತದಲ್ಲಿ 2500ಕ್ಕೂ ಹೆಚ್ಚು ಮಂದಿಗೆ ಅನ್ನದಾನ ಮಾಡುವ ಮೂಲಕ ಶಾಸಕರಿಗೆ ಆಯುರಾರೋಗ್ಯದ ಜತೆಗೆ ಹೆಚ್ಚಿನ ಅಧಿಕಾರ ಪ್ರಾಪ್ತಿ ಆಗಲೆಂದು ಅಭಿಮಾನಿಗಳು ಪ್ರಾರ್ಥಿಸಿದರು.

ಶಾಸಕ ಪ್ರದೀಪ ಈಶ್ವರ್ ಜನ್ಮದಿನದ ಹಿನ್ನೆಲೆ ಚಿಕ್ಕಬಳ್ಳಾಪುರದಲ್ಲಿ ಬೆಂಬಲಿಗರು ಅನ್ನದಾನ ಸೇವೆ ಮಾಡಿದರು.

ಬೆಂಬಲಿಗರಿಂದ ಅನ್ನದಾನ ಸೇವೆ

ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ವಿನಯ್ ಬಂಗಾರಿ ಮತ್ತು ಸಹಚರರು 2500 ಮಂದಿಗೆ ಚಿಕನ್ ಬಿರಿಯಾನಿ ಹಂಚುವ ಮೂಲಕ ಶಾಸಕರ ಮೇಲಿನ ಪ್ರೀತಿಯನ್ನು ಪ್ರಕಟಪಡಿಸಿದರು. ಈ ವೇಳೆ ಮಾತನಾಡಿದ ವಿನಯ್ ಬಂಗಾರಿ, ರಾಜ್ಯದ 224 ಶಾಸಕರ ಪೈಕಿ ನಮ್ಮ ನಾಯಕ ಪ್ರದೀಪ್ ಈಶ್ವರ್ ವಿಶಿಷ್ಟವಾಗಿ ನಿಲ್ಲುತ್ತಾರೆ. ಕಳೆದ ಎರಡುವರೆ ವರ್ಷದಲ್ಲಿ 10 ಆಂಬುಲೆನ್ಸ್ ಗಳನ್ನು ಉಚಿತವಾಗಿ ಕ್ಷೇತ್ರದ ಜನರ ಆರೋಗ್ಯ ಸುಧಾರಣೆಗಾಗಿ ಬಿಟ್ಟಿರುವ ಏಕೈಕ ಶಾಸಕ ಪ್ರದೀಪ್ ಈಶ್ವರ್ ಅಯ್ಯರ್ ಆಗಿದ್ದಾರೆ. ದೀಪಾವಳಿ ಯುಗಾದಿ ಹಬ್ಬಕ್ಕೆ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಹೊಸ ಬಟ್ಟೆ , ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದ್ದಾರೆ ಎಂದು ಸ್ಮರಿಸಿದರು.

ಕರುನಾಡ ಪ್ರವಾಸಿ ಸಂಸ್ಕೃತಿಗೆ ಧಕ್ಕೆ

← ಮೊದಲಪುಟದಿಂದ

ಏಕೆಂದರೆ, ಉತ್ತರ ಭಾರತದಿಂದ ವಾರಗಟ್ಟಲೇ ರಾಜ್ಯಕ್ಕೆ ಆಗಮಿಸುವವರು, ಕೇವಲ ಬಂಡೀಪುರಕ್ಕೆ ಬರುವುದಿಲ್ಲ. ಬದಲಿಗೆ ಬಂಡೀಪುರಕ್ಕೆ ಬಂದು ಇಲ್ಲಿನ ಸಫಾರಿ ವೀಕ್ಷಿಸಿ ಬಳಿಕ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡುತ್ತಾರೆ. ಆದರೀಗ ಕರ್ನಾಟಕದಲ್ಲಿ ಸಫಾರಿ ಇಲ್ಲ ಎಂದರೆ ಅವರು ನೆರೆ ರಾಜ್ಯಗಳಿಗೆ ಭೇಟಿ ನೀಡುವ ಸಾಧ್ಯತೆಯಿರುತ್ತದೆ ಎನ್ನುವ ಆತಂಕವನ್ನು ಪ್ರವಾಸೋದ್ಯಮ ಕ್ಷೇತ್ರದ ತಜ್ಞರು ವ್ಯಕ್ತಪಡಿಸಿದ್ದಾರೆ.

ಪ್ರತಿವರ್ಷ ಐದಾರು ಸಾವಿರ ವಿದೇಶಿಗರು: ಬಂಡೀಪುರ ಹಾಗೂ ಕಬಿನಿಗೆ ಪ್ರತಿವರ್ಷ ವಿಶ್ವದ ವಿವಿಧ ಭಾಗದಿಂದ ಐದಾರು ಸಾವಿರ ಪ್ರವಾಸಿಗರು ಆಗಮಿಸುತ್ತಾರೆ. ಇದರಲ್ಲಿ ಅನೇಕರು ರೆಸಾರ್ಟ್‌ಗಳಲ್ಲಿ ಉಳಿದುಕೊಂಡು ವಾರಗಟ್ಟಲೇ ಸಫಾರಿಗೆ ಹೋಗುತ್ತಾರೆ. ಆದರೀಗ ಬಂಡೀಪುರ, ನಾಗರಹೊಳೆ ಸಫಾರಿ ನಿರ್ಬಂಧಿಸಿರುವುದರಿಂದ ಈಗಾಗಲೇ ಬುಕ್ ಮಾಡಿರುವವರು, ರೆಸಾರ್ಟ್‌ಗಳಿಗೆ ಬಂದು ಬೇಸರದೊಂದಿಗೆ ತೆರಳುತ್ತಿದ್ದರೆ, ಹೊಸದಾಗಿ ಯಾರೂ ಬುಕಿಂಗ್‌ಗಳನ್ನು ಮಾಡಿಕೊಳ್ಳುತ್ತಿಲ್ಲ. ಇದು ಹೀಗೆ ಮುಂದುವರಿದರೆ, ಇಷ್ಟು ದಿನ ಕರ್ನಾಟಕ ಪ್ರವಾಸೋದ್ಯಮದ ವಿಷಯದಲ್ಲಿ ವಿದೇಶಿಗರಲ್ಲಿದ್ದ 'ಕಲ್ಚರ್' ಮರೆಯಾಗುತ್ತದೆ. ಒಮ್ಮೆ ಈ ಕಲ್ಚರ್ ಮರೆಯಾದರೆ ವಿದೇಶಿಗರನ್ನು ಪುನಃ ಸೆಳೆಯುವುದು ಭಾರಿ ಕಷ್ಟದ ಕೆಲಸ. ಬಂಡೀಪುರ, ಕಬಿನಿಗೆ ಆಗಮಿಸುವ ವಿದೇಶಿಗರಿಂದಲೇ ಕರ್ನಾಟಕದಲ್ಲಿ ವಾರ್ಷಿಕ 125 ಕೋಟಿ ರು. ಸರಾಸರಿ ವಹಿವಾಟು ಆಗುತ್ತಿತ್ತು. ಆದರೆ ಇದೀಗ ಕರ್ನಾಟಕದಲ್ಲಿ ಈ ಸಫಾರಿ ಇಲ್ಲವೆಂದು ನೆರೆ ಕೇರಳದ ವಯನಾಡು, ತಮಿಳುನಾಡಿನ ಮಧುಮಲೈಗೆ ಅನೇಕ ವಿದೇಶಿಗರು ಮುಖ ಮಾಡಿದ್ದಾರೆ. ಇದು ಭವಿಷ್ಯ ಕರ್ನಾಟಕ ಪ್ರವಾಸೋದ್ಯಮದ ದೃಷ್ಟಿಯಿಂದ ಭಾರಿ ಹೊಡೆತ ಎನ್ನುವ ಮಾತುಗಳು ಕೇಳಿಬರುತ್ತಿದೆ.

125 ಕೋಟಿ ರು. ನಷ್ಟ

ಈ ನಷ್ಟದಿಂದ ಸರಕಾರಕ್ಕೆ ಬರುವ ತೆರಿಗೆ ಹಣವೂ ಖೋತವಾಗಲಿದೆ. ಇದಿಷ್ಟೇ ಅಲ್ಲದೇ, ಸಾಮಾನ್ಯವಾಗಿ ವಿದೇಶಿಗರಿಗೆ ಆಗುವ ಸಣ್ಣ–ಪುಟ್ಟ ಸಮಸ್ಯೆಯನ್ನೂ ಅಲ್ಲಿನ ಸರಕಾರಗಳು ಗಂಭೀರವಾಗಿ ಪರಿಗಣಿಸುತ್ತದೆ. ಭಾರತದಲ್ಲಿ ವಿದೇಶಿ ಪ್ರವಾಸಿಗರಿಗೆ ಆಗಿರುವ ಸಣ್ಣ–ಪುಟ್ಟ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ 'ಮಾರ್ಗಸೂಚಿ' ಬಿಡುಗಡೆಗೊಳಿಸಿದ ಅನೇಕ ಉದಾಹರಣೆಗಳಿವೆ. ಹೀಗಿರುವಾಗ, ವಿಶ್ವದ ಆಕರ್ಷಕ ಸಫಾರಿಗಳಲ್ಲಿ ಒಂದೆನಿಸಿರುವ ನಾಗರಹೊಳೆ–ಬಂಡೀಪುರ ಸಫಾರಿಯ ನಿರ್ಬಂಧ ಸುದ್ದಿ ವಿದೇಶಿ ನೆಲದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದು ಕರ್ನಾಟಕದ ಪ್ರವಾಸೋದ್ಯಮದ ಮೇಲೆ ತೀವ್ರ ಹೊಡೆತ ಬೀಳುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಬಾಂಗ್ಲಾದ 1.25 ಕೋಟಿ ಹಿಂದೂಗಳು ಒಗ್ಗಟ್ಟಾಗಿ ಹೋರಾಡಲಿ: ಭಾಗವತ್

← ಮೊದಲಪುಟದಿಂದ

ಈಗಲೂ ಬಾಂಗ್ಲಾದಲ್ಲಿ 1.25 ಕೋಟಿ ಮಂದಿ ಹಿಂದೂಗಳಿದ್ದಾರೆ. ಅವರು ಒಗ್ಗಟ್ಟಾದರೆ ರಾಜಕೀಯ ವ್ಯವಸ್ಥೆಯನ್ನು ತಮ್ಮ ಅನುಕೂಲಕ್ಕೆ, ತಮ್ಮದೇ ಭದ್ರತೆಗೆ ಬಳಸಿಕೊಳ್ಳಬಹುದು. ಅದೃಷ್ಟವಶಾತ್ ಈ ಬಾರಿ ಅವರು

ಸವಾಲಿನಿಂದ ಓಡಿಹೋಗದಿರಲು ನಿರ್ಧರಿಸಿದ್ದಾರೆ. ಅಲ್ಲೇ ಉಳಿದು ಹೋರಾಡಲು ನಿರ್ಧರಿಸಿದ್ದಾರೆ. ಈಗ ಅವರು ಹೋರಾಡಬೇಕೆಂದು ನಿರ್ಧರಿಸಿದರೆ, ಒಗ್ಗಟ್ಟಾಗಲೇ ಬೇಕು. ಎಷ್ಟು ಬೇಗ ಅವರು ಒಗ್ಗಟ್ಟಾಗುತ್ತಾರೋ, ಅಷ್ಟು ಒಳ್ಳೆಯದು ಎಂದು ಭಾಗವತ್ ಹೇಳಿದರು. ಭಾರತವನ್ನು ಇನ್ನು ಮುಂದೆ ದುರ್ಬಲಗೊಳಿಸಲು ಸಾಧ್ಯವಿಲ್ಲ. ಭಾರತವನ್ನು ಮುರಿಯಲು ಪ್ರಯತ್ನಿಸುವವರು ಮುರಿಯಲ್ಪಡುತ್ತಾರೆ. ಆರ್‌ಎಸ್‌ಎಸ್ ಕಾರ್ಪೊರೇಟ್ ಅಥವಾ ಸಾಂಸ್ಥಿಕ ಹಣವನ್ನು ಅವಲಂಬಿಸಿಲ್ಲ. ಜನರು ಆರ್‌ಎಸ್‌ಎಸ್‌ಗೆ ಹಣ ಎಲ್ಲಿಂದ ಬರುತ್ತದೆ ಎಂಬ ಕುತೂಹಲ ಹೊಂದಿದ್ದಾರೆ. ನಾವು ನಮ್ಮ ಕಾರ್ಯಕರ್ತರಿಂದ ಹಣವನ್ನು ಸಂಗ್ರಹಿಸುತ್ತೇವೆ. ನಾವು ಪ್ರಯಾಣಿಸುವಾಗ, ಆಹಾರವನ್ನು ಖರೀದಿಸುವ ಬದಲು ತಿಂಡಿ ಕೇಳುತ್ತೇವೆ. ನಾವು ಕಾರ್ಯಕರ್ತರ ಮನೆಗಳಲ್ಲಿಯೇ ಇರುತ್ತೇವೆ. ಹೋಟೆಲ್‌ಗಳಲ್ಲಿ ಅಲ್ಲ ಎಂದರು.

ಚಾಲ್ತಿಯಲ್ಲಿರುವ ಅವಧಿ ಮುಗಿದ ಸಾವಿರಾರು ವಾಹನಗಳು | ಬಜೆಟ್‌ನಲ್ಲಿ ಸೈಬರ್ ಅಪರಾಧ, ಡ್ರಗ್ಸ್ ತಡೆಗೆ ಒತ್ತು: ಪರಮೇಶ್ವರ್

ಪೊಲೀಸರಿಗೆ ಬಜೆಟ್‌ನಲ್ಲಿ ಹೊಸ ವಾಹನ ಭಾಗ್ಯ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಾಖಲೆಯ 17ನೇ ಬಜೆಟ್‌ನಲ್ಲಿ ಗೃಹ ಇಲಾಖೆಗೆ 'ವಾಹನ ಭಾಗ್ಯ' ಸಿಗುವ ಸಾಧ್ಯತೆ ದಟ್ಟವಾಗಿದೆ. ಇಲಾಖೆಗೆ ವಾಹನ ಭಾಗ್ಯವಾದರೆ, ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಭಾಗ್ಯವೂ ಸಿಗುವ ಸಾಧ್ಯತೆ ದಟ್ಟವಾಗಿದೆ.

ಈಗಾಗಲೇ ಬಜೆಟ್ ಪೂರ್ವಭಾವಿ ಸಭೆಗಳನ್ನು ಆರಂಭಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಇಲಾಖೆಗೆ ಸಂಬಂಧಿಸಿದ ಪ್ರಾಥಮಿಕ ಚರ್ಚೆ ನಡೆಸಿದ್ದಾರೆ. ಈ ವೇಳೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಹಾಗೂ ಹಿರಿಯ ಅಧಿಕಾರಿಗಳು, ಕೇಂದ್ರ ಸರಕಾರದ ನಿಯಮದ ಪ್ರಕಾರ 15 ವರ್ಷವಾಗಿರುವ ವಾಹನಗಳನ್ನು ಬಳಸುವಂತಿಲ್ಲ. ಪೊಲೀಸ್ ಇಲಾಖೆಯಲ್ಲಿರುವ ಸಾವಿರಾರು ವಾಹನಗಳು ಈ ಅವಧಿಯನ್ನು ಪೂರ್ಣಗೊಳಿಸಿವೆ. ಆದ್ದರಿಂದ ನೂತನ ವಾಹನ ಖರೀದಿಗೆ ಬಜೆಟ್‌ನಲ್ಲಿ ಅನುದಾನ ಕಲ್ಪಿಸಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಇದರೊಂದಿಗೆ ಪೊಲೀಸ್ ಸಿಬ್ಬಂದಿಗಳಿಗೆ ಇರುವ ವಸತಿ ಪ್ರದೇಶದ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ 2026–27ನೇ ಸಾಲಿನ

ಬಜೆಟ್‌ನಲ್ಲಿ ಗೃಹ ಇಲಾಖೆ ಹಲವು ನಿರೀಕ್ಷೆ ಹೊಂದಿದೆ. ಇಲಾಖೆಯಲ್ಲಿರುವ ಖಾಲಿಯಿರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಬೇಕು ಎಂದು ಮನವಿ ಮಾಡಿದ್ದೇವೆ. ಇದೇ ರೀತಿ ಪೊಲೀಸರ ಸಂಚಾರ, ಗಸ್ತಿಗೆ ಅಗತ್ಯವಿರುವ ವಾಹನಗಳನ್ನು ಕೇಳಿದ್ದೇವೆ. ಈಗಿರುವ ವಾಹನಗಳು 15 ವರ್ಷ ಮೀರಿದ್ದು, ಕೇಂದ್ರ ಸರಕಾರದ ನಿಯಮಾನುಸಾರ ಈ ವಾಹನಗಳನ್ನು ಬಳಸಲು ಸಾಧ್ಯವಿಲ್ಲ. ಆದ್ದರಿಂದ ಹಳೆ ವಾಹನಗಳನ್ನು ತೆಗೆದುಹಾಕಿ ಹೊಸ ವಾಹನ ಖರೀದಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಪೊಲೀಸರ ಮನೆಗಳ ಸ್ಥಿತಿ ನೋಡಿ ಪೊಲೀಸ್ ಗೃಹ ಯೋಜನೆ ಮಾಡಿದ್ದೇವೆ. ಮುಖ್ಯಮಂತ್ರಿಗಳು ಇದಕ್ಕೆ ಬೆಂಬಲಿಸಿದ್ದಾರೆ, ಪೊಲೀಸರಿಗೆ ಇನ್ನೂ ವಸತಿ ಸೌಲಭ್ಯಗಳನ್ನು ವಿಸ್ತರಿಸಲು ಕೋರಲಾಗಿದೆ. ಬೇರೆ ಯೋಜನೆಗೂ ಹಣ ಕೇಳಿದ್ದೇವೆ ಎಂದು ತಿಳಿಸಿದರು.

ಸೈಬರ್ ಅಪರಾಧ ನಿಯಂತ್ರಣಕ್ಕೆ ಅನುದಾನ

ತಪ್ಪು, ದ್ವೇಷದ ಸಂದೇಶಗಳ ನಿಯಂತ್ರಣ, ನಿಗಾಕ್ಕೆ 67 ಕೋಟಿ ರು.ನಲ್ಲಿ ಎಐ ಸಾಫ್ಟ್‌ವೇರ್ ಖರೀದಿ ಮಾಡಲು ಈಗಾಗಲೇ ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಈ ಸಾಫ್ಟ್‌ವೇರ್ ಅಗತ್ಯ. ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಸಾಮಾಜಿಕ ಜಾಲತಾಣ ಅವಲಂಬನೆ ಹೆಚ್ಚಳವಾಗಿದೆ. ತಪ್ಪು, ದ್ವೇಷದ ಸಂದೇಶಗಳಿಂದ ಸಾವುಗಳಾಗುತ್ತಿವೆ. ಹಾಗೆಯೇ ಭಯೋತ್ಪಾದಕ ಚಟುವಟಿಕೆಗಳಿಗೂ ಪ್ರಚೋದನೆ ಆಗುತ್ತಿದೆ. ಇದನ್ನೆಲ್ಲ ನಿಯಂತ್ರಣ ಮಾಡುವ ಅಗತ್ಯ ಇದೆ. ನಾವು ಏನೂ ಮಾಡುತ್ತಿಲ್ಲ ಅಂತ ಜನ ಹೇಳುತ್ತಾರಲ್ವಾ?. ಅದಕ್ಕಾಗಿ ಅಗತ್ಯ ತಯಾರಿ, ಸಾಫ್ಟ್‌ವೇರ್‌ಗಳು ಬೇಕು. ಬೇರೆ ಬೇರೆ ರಾಜ್ಯಗಳಲ್ಲಿ 200 – 300 ಕೋಟಿ ರು. ಖರ್ಚು ಮಾಡುತ್ತಿದ್ದಾರೆ. ಮೊಹಾಂತಿಯವರು ಇದಕ್ಕಾಗಿಯೇ ಒಂದು ಸಾವಿರ ಕೋಟಿ ಪ್ರಪೋಸಲ್ ಕೊಟ್ಟಿದ್ದಾರೆ. ನಿಯಂತ್ರಣ ಮಾಡಲೇಬೇಕು ಅಂದರೆ ಹಣ ಖರ್ಚಾಗುತ್ತದೆ ಎಂದರು.

> ಗೃಹಲಕ್ಷ್ಮಿ ಯೋಜನೆಗೆ ಲೈಫ್ ಸರ್ಟಿಫಿಕೇಟ್ ಕೊಡುವ ವಿಚಾರದ ಬಗ್ಗೆ ನನಗೆ ಮಾಹಿತಿಯಿಲ್ಲ. ಸಚಿವ ಸಂಪುಟದಲ್ಲಿಯೂ ಈ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ತೀರ್ಮಾನಿಸಲಿದ್ದಾರೆ. ಇನ್ನು 54 ನಿಗಮಮಂಡಳಿ ಅಧ್ಯಕ್ಷರಿಗೆ ಸಂಪುಟ ದರ್ಜೆ ಸ್ಥಾನ ಮಾಡಿರುವುದು ಹೊಸದೇನಲ್ಲ. ಈ ಹಿಂದೆ ಇದ್ದಂತಹ ನಿಗಮ ಮಂಡಳಿ ಅಧ್ಯಕ್ಷ ಸ್ಥಾನಮಾನ ಮುಂದುವರಿಸಲಾಗಿದೆ.
> – ಡಾ.ಜಿ. ಪರಮೇಶ್ವರ, ಗೃಹ ಸಚಿವ

ಚಾಮುಂಡೇಶ್ವರಿ ಕ್ಷೇತ್ರದಿಂದ ಅರ್ಹ ಅಭ್ಯರ್ಥಿಗೆ ಟಿಕೆಟ್

ಜಿಟಿಡಿಗೆ ಗೇಟ್‌ಪಾಸ್ ಸೂಚನೆ ನೀಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ

ಮೈಸೂರು: ಮುಂದಿನ ಚುನಾವಣೆಯಲ್ಲಿ ಚಾಮುಂಡೇ



ಶ್ವರಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಅಭ್ಯರ್ಥಿಯನ್ನೇ ಅಲ್ಲಿ ಕಣಕ್ಕಿಳಿಸುತ್ತೇವೆ. ನನ್ನ ಮುಂದೆ ಮತ್ತೆ ಮತ್ತೆ ಜಿ.ಟಿ.ದೇವೇಗೌಡರ ವಿಷಯ ಪ್ರಸ್ತಾಪಿಸುವುದು ಬೇಡ ಎಂದು ಹೇಳುವ ಮೂಲಕ ಪಕ್ಷಕ್ಕೆ ಜಿ.ಟಿ.ದೇವೇಗೌಡ ಅಗತ್ಯವಿಲ್ಲ ಎಂಬ ಸಂದೇಶವನ್ನು ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಕುಮಾರಸ್ವಾಮಿ ರವಾನಿಸಿದರು.

ನನ್ನ ಮುಂದೆ ಪದೇಪದೆ ಜಿ.ಟಿ.ದೇವೇಗೌಡ ಅವರ ಹೆಸರನ್ನು ಹೇಳಬೇಡಿ. ಅವರಿಗೆ ನಿಯತ್ತು, ನಿಷ್ಠೆ ಇರಬೇಕಿತ್ತು. ಆದರೆ, ಅವರು ಪಕ್ಷದಲ್ಲಿದ್ದುಕೊಂಡು ಕಾಂಗ್ರೆಸ್ ನಾಯಕರನ್ನು ಹೊಗಳುತ್ತಾರೆ. ಅವರ ವಿಚಾರ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ನಮ್ಮ ಜತೆಗೆ ಇದ್ದಾರೆ. ಜಿ.ಟಿ.ದೇವೇಗೌಡರು ನಮ್ಮೊಂದಿಗೆ ಇಲ್ಲ. ಅವರು ಪಕ್ಷದಿಂದ ದೂರ ಉಳಿದಿದ್ದಾರೆ. ಕಾರ್ಯಕರ್ತರು ಪಕ್ಷವನ್ನು ನಂಬಿದ್ದಾರೆ ಎಂದು ಹೇಳಿದರು.

ಜಿ.ಟಿ.ದೇವೇಗೌಡರು ಆಕಾಶಕ್ಕೆ ಎತ್ತುತ್ತಾರೆ. ಹಾಗೆಯೇ ಮೇಲಿಂದ ಕೆಳಗೆ ಯಾವಾಗ ಇಳಿಸುತ್ತಾರೋ ಗೊತ್ತಿಲ್ಲ. ನಮ್ಮ ಪಕ್ಷದಲ್ಲಿ ಇದ್ದುಕೊಂಡು ಕಾಂಗ್ರೆಸ್ ಮುಖ್ಯಮಂತ್ರಿಯನ್ನು ಹೊಗಳುತ್ತಾರೆ. ಮತ್ತೊಬ್ಬರನ್ನು ಹೊಗಳುವ ಇವರು ಜಾ.ದಳದಲ್ಲಿ ಇದ್ದೇನೆ ಅಂದರೆ ಏನರ್ಥ ಎಂದು ಕುಟುಕಿದರು.

ಮೈಸೂರು ಜಿಲ್ಲೆಯಲ್ಲಿ ಬಿಜೆಪಿ–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ಹನ್ನೊಂದು ಸ್ಥಾನಗಳಲ್ಲಿ ಹನ್ನೊಂದು ಸ್ಥಾನವನ್ನು ಗೆದ್ದೇ ಗೆಲ್ಲುತ್ತೇವೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷದಿಂದ ಸ್ಪರ್ಧಿಸಲು ಹಲವಾರು ನಾಯಕರು ಇದ್ದಾರೆ. ದೊಡ್ಡ ಮಟ್ಟದಲ್ಲಿ ತಯಾರಿ ಮಾಡಿಕೊಂಡಿರುವವರು ಇದ್ದಾರೆ. ಅಲ್ಲಿಗೆ ದೊಡ್ಡ ಮಟ್ಟದ ಅಭ್ಯರ್ಥಿಯನ್ನೇ ಹಾಕುತ್ತೇವೆ ಎಂದು ಘೋಷಿಸಿದರು.

> ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ರಾಜೀನಾಮೆ ಕೇಳಲಾಯಿತು. ಮುಖ್ಯಮಂತ್ರಿ ರಾಜೀನಾಮೆ ಕೇಳಿದರೆ ಇವರು ನಮ್ಮ ರಾಜೀನಾಮೆ ಕೊಡಬೇಕು ಅಂತಾರೆ. ನಾನೇನು ತಪ್ಪು ಮಾಡಿದ್ದೇನೆ ಎಂದು ರಾಜೀನಾಮೆ ಕೊಡಬೇಕು. ಏನು ತಪ್ಪು ಮಾಡಿಲ್ಲದವರಿಗೆ ಒಂದು ಸರ್ಟಿಫಿಕೇಟ್, ತಪ್ಪು ಮಾಡಿದವರಿಗೆ ಮತ್ತೊಂದು ಸರ್ಟಿಫಿಕೇಟ್ ಕೊಡುತ್ತಾ?
> –ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಚೀನಾದಿಂದ ರಹಸ್ಯ ಅಣ್ವಸ್ತ್ರ ಪರೀಕ್ಷೆ: ಅಮೆರಿಕ ಆರೋಪ

← ಮೊದಲಪುಟದಿಂದ

ಸಾಮಾನ್ಯವಾಗಿ ಭೂಮಿಯ ಅಡಿಯಲ್ಲಿ ಅಣು ಪರೀಕ್ಷೆ ನಡೆಸುವಾಗ ಕಂಪನ ಸಂಭವಿಸುತ್ತದೆ. ಆದರೆ ಚೀನಾ ಭೂಮಿಯಾಳ ದಲ್ಲಿ ಕಂಪನದ ಅನುಭವವವನ್ನು ತಗ್ಗಿಸಲು ಮತ್ತು ಜಗತ್ತಿನಿಂದ ಪರೀಕ್ಷೆ ಮರೆಮಾಚಲು ಡಿಕೌಪ್ಲಿಂಗ್ ತಂತ್ರಜ್ಞಾನವನ್ನು ಬಳಸಿ ಪರೀಕ್ಷೆ ನಡೆಸಿದೆ. 2020ರ ಜೂನ್ 15ರ ತಡರಾತ್ರಿ ಭಾರತ ಮತ್ತು ಚೀನಿ ಸೈನಿಕರ ಮಧ್ಯೆ ಗಾಲ್ವಾನ್‌ನಲ್ಲಿ ಸಂಘರ್ಷ ನಡೆದಿತ್ತು. ಈ ಸಂಘರ್ಷದಲ್ಲಿ 20 ಭಾರತೀಯ ಸೈನಿಕರು ಮೃತಪಟ್ಟರೆ 30ಕ್ಕೂ ಹೆಚ್ಚು ಚೀನಿ ಸೈನಿಕರು ಮೃತಪಟ್ಟಿರುವ ಬಗ್ಗೆ ವರದಿಯಾಗಿತ್ತು. ಈ ಸಂಘರ್ಷ ನಡೆದ ಒಂದು ವಾರದ ಬಳಿಕ ಅಂದರೆ ಜೂನ್ 22 ರಂದು ಚೀನಾ ಪರಮಾಣು ಸ್ಫೋಟ ಪರೀಕ್ಷೆ ನಡೆಸಿ ಎಂದು ಅಮೆರಿಕ ಆರೋಪಿಸಿದೆ.

ಆರೋಪಿಗೆ ಕಾನೂನು ಪ್ರಕಾರ ಕ್ರಮ ಆಗುತ್ತದೆ: ನಾಗಲಕ್ಷ್ಮೀ ಚೌಧರಿ

ಮಹಿಳಾ ಸಿಪಿಐ ಮೇಲೆ ಹಲ್ಲೆಗೈದವರ ಸೆರೆ

ದಾವಣಗೆರೆ: ಮಹಿಳಾ ಸಿಪಿಐ ಮೇಲೆ ಹಲ್ಲೆ ನಡೆಸಿದವರನ್ನು ಬಂಧಿಸಿ,

ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ತನಿಖೆ ನಡೆಯುತ್ತಿದೆ. ಕಾನೂನು ಪ್ರಕಾರ ಕ್ರಮ ಆಗುತ್ತದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ತಿಳಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರೇ ಹಲ್ಲೆ ಮಾಡಿದ್ದಾರೆಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹಾಗಂತ ಅಲ್ಲ, ಎಲ್ಲರೂ ಮಾಡುತ್ತಾರೆ. ಕಾನೂನು ಪ್ರಕಾರ ಕ್ರಮ ಆಗುತ್ತದೆ. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಕಾನೂನಿನ ಮುಂದೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ದೊಡ್ಡವರು, ಚಿಕ್ಕವರು ಅಂತ ಬರಲ್ಲ, ಸಿಪಿಐ ಮೇಲೆ ಕೈ ಮಾಡಿದವರು ಕಸ್ಟಡಿಯಲ್ಲಿದ್ದಾರೆ. ತನಿಖೆ ನಡೆದು ಆರೋಪಿಗಳಿಗೆ ಶಿಕ್ಷೆಯಾಗುತ್ತದೆ ಎಂದರು. ಘಟನೆ ಸಂಬಂಧ ಆಯೋಗದಿಂದ ವರದಿ ಕೇಳಿದ್ದು ತಡ ಆಯ್ತು ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅದು ಸುಳ್ಳು. ನಾನು ಓಡಾಡುತ್ತಿರೋದು ಜನರಿಗೋಸ್ಕರ. ಇಂತಹ ಸಿಎಂ ಪಡೆದಿರುವ ನಾವೇ ಧನ್ಯರು. ಎರಡು ವರ್ಷದಲ್ಲಿ ಸಿಎಂ ನನಗೆ ಒಂದು ಪ್ರಶ್ನೆಯನ್ನೂ ಮಾಡಿಲ್ಲ. ಸಿಎಂ ನನಗೆ ಫ್ರೀ ಹ್ಯಾಂಡ್ ನೀಡಿದ್ದಾರೆ. ನಾನು ತಪ್ಪು ಮಾಡಿದ್ರು ಬಿಡಬಾರದು ಎಂದು ಹೇಳಿದ್ದಾರೆ. ಆಯೋಗದ ಅಧ್ಯಕ್ಷೆಯಾಗಿ ಪ್ರತಿಯೊಂದನ್ನು ಅಟೆಂಡ್ ಮಾಡಿ ಕೆಲಸ ಮಾಡಿದ್ದೇನೆ ಎಂದರು. ಧರ್ಮಸ್ಥಳ ಪ್ರಕರಣದ ಬಗ್ಗೆ ಆಯೋಗದಿಂದ ದೂರು ನೀಡಿದ್ದ ಬಗ್ಗೆ ಮಾತನಾಡಿ, ಕೋರ್ಟ್‌ನ ತೀರ್ಮಾನ ಇದೆ. ಮುಗಿದ ಬಳಿಕ ವರದಿಯನ್ನು ನನಗೆ ಕಳುಹಿಸಿಕೊಡ್ತಾರೆ. ಬಳಿಕ ತನಿಖೆ ಪ್ರಾರಂಭ ಆಗುತ್ತದೆ ಎಂದು ತಿಳಿಸಿದರು.

ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ, ನೇರ ಸಾಲ ಯೋಜನೆಗೆ ಚಾಲನೆ | ಸಮುದಾಯದ ಸಂಘಟನೆ ಅಗತ್ಯವಿದೆ

ಬ್ರಾಹ್ಮಣ ಸಮಾಜದ ಪ್ರಗತಿಗೆ ಸರಕಾರ ಬೆಂಬಲ: ದಿನೇಶ ಗುಂಡೂರಾವ್

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಸರಕಾರದ ಹಲವು ಸೌಲಭ್ಯಗಳು ಹಿಂದಿನಿಂದಲೂ ಸಮರ್ಪಕವಾಗಿ ತಲುಪದೆ ಹಿಂದುಳಿದ ಸ್ಥಿತಿಯಲ್ಲಿದ್ದ ಬ್ರಾಹ್ಮಣ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವನ್ನು ಕಾಂಗ್ರೆಸ್ ಸರಕಾರ ಗಂಭೀರವಾಗಿ ಮಾಡುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ನಗರದ ಜಯತೀರ್ಥ ಕಲ್ಯಾಣ ಮಂಟಪದಲ್ಲಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಭಾನುವಾರ ಹಮ್ಮಿಕೊಂಡಿದ್ದ ಕಲಬುರಗಿ ಹಾಗೂ ಬೆಳಗಾವಿ ವಿಭಾಗದ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ, ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ ಹಾಗೂ ವಿಪ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಚಿಸಿ ಸೂಕ್ತ ಅನುದಾನ ನೀಡುವ ಮೂಲಕ ಸಮುದಾಯವನ್ನು ಸಂಘಟಿಸಿ ಸಮಸ್ಯೆಗಳಿಗೆ ಧ್ವನಿಯಾಗುವ ಕೆಲಸ ಮಾಡಲಾಗು ತ್ತಿದೆ. ಸಮಸ್ಯೆರಹಿತ ಸಮಾಜ ಯಾವುದೂ ಇಲ್ಲ. ಬ್ರಾಹ್ಮಣ ಸಮಾಜಕ್ಕೂ ರಾಜಕೀಯದಲ್ಲಿ ಆದ್ಯತೆ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿದ್ದಾರೆ. ಮಂಡಳಿಗೆ ಸದ್ಯದ ಅನು ದಾನ ಸಾಲದು. ಹೆಚ್ಚಿನ ಅನುದಾನ ನೀಡುವಂತೆ ಸಿಎಂ ಅವರಲ್ಲಿ ಮನವಿ ಮಾಡಲಾಗುವುದು ಎಂದರು.

ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಆಡಳಿತ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳವರೆಗೆ ಬ್ರಾಹ್ಮಣರ ಕೊಡುಗೆ ಅವಿಸ್ಮರಣೀಯವಾಗಿದೆ. ತಿಲಕ್, ಗೋಖಲೆ, ಮಾಳವೀಯ, ಸ್ವಾಮಿ ರಮಾನಂದ ತೀರ್ಥರು ಸೇರಿದಂತೆ ಅನೇಕರು ದೇಶಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಸಮುದಾಯಕ್ಕೆ ಹೆಚ್ಚಿನ ಅನುದಾನ ನೀಡುವುದರ ಜತೆಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ, ಶಶೀಲ್ ನಮೋಶಿ, ಕುಡಾ ಅಧ್ಯಕ್ಷ ಮಜರ್ ಆಲಂ ಖಾನ್, ಮಹಾನಗರ ಪಾಲಿಕೆ ಪ್ರತಿಪಕ್ಷ ನಾಯಕಿ ಶೋಭಾ ದೇಸಾಯಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಲೀಲಾವತಿ ನಿರೂಪಣೆ ಮಾಡಿದರು. ಈ ಸಂದರ್ಭದಲ್ಲಿ ಕಲಬುರಗಿ ಹಾಗೂ ಬೆಳಗಾವಿ ವಿಭಾಗದ 61 ಸಾಧಕ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೆ ರಾಜ್ಯದ 400 ಜನರಿಗೆ ನೇರ ಸಾಲ ನೀಡುವ ಕಾರ್ಯಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಕಲಬುರಗಿ ನಗರದಲ್ಲಿ ಆಯೋಜಿಸಿದ್ದ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ, ವಿಪ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸಚಿವ ದಿನೇಶ್ ಗುಂಡೂರಾವ್ ಅವರು ಉದ್ಘಾಟಿಸಿದರು.

ಸಾಧಕರಿಗೆ ವಿಪ್ರಶ್ರೀ ಪುರಸ್ಕಾರ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪಂ. ಗೋಪಾಲಾಚಾರ್ಯ ಅಕಮಂಚಿ (ಧಾರ್ಮಿಕ), ಗುರುರಾಜ ದೇಶಪಾಂಡೆ (ನ್ಯಾಯಾಂಗ), ಡಾ.ಶಶಾಂಕ ರಾಮದುರ್ಗ (ವೈದ್ಯಕೀಯ), ಧನಂಜಯ ಕುಲಕರ್ಣಿ ಬೋಳನಿ (ಕೃಷಿ), ಕಿಶನರಾವ್ ಕುಲಕರ್ಣಿ (ಸಮಾಜ ಸೇವೆ), ರಂಗನಾಥ ದೇಸಾಯಿ (ಉದ್ಯಮ) ಅವರಿಗೆ ವಿಪ್ರಶ್ರೀ ಪುರಸ್ಕಾರ ನೀಡಿ ಗೌರವಿಸಲಾಯಿತು. ಜತೆಗೆ ಇನ್ನೂ ಹಲವು ಸಾಧಕರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

> ಸಾರ್ವಜನಿಕವಾಗಿ ನಾನು ಬ್ರಾಹ್ಮಣ ಎಂದು ಧೈರ್ಯದಿಂದ ಹೇಳುವ ಶಕ್ತಿ ತಂದೆಯವ ರಾದ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಅವರಲ್ಲಿತ್ತು. ಇಂದು ಬ್ರಾಹ್ಮಣ ಸಮಾಜಕ್ಕೆ ಒಗ್ಗಟ್ಟು ಅಗತ್ಯ. ನಾನು ಸದಾ ಬೆಂಬಲವಾಗಿರುತ್ತೇನೆ.
> –ದಿನೇಶ ಗುಂಡೂರಾವ್, ಆರೋಗ್ಯ ಸಚಿವ

> ಸರ್ವೇಜನಃ ಸುಖಿನೋ ಭವಂತು ಎಂಬ ಮಂತ್ರದೊಂದಿಗೆ ಸಮಾಜದ ಸಮಗ್ರ ಅಭಿವೃದ್ಧಿಗೆ ಮಂಡಳಿ ಶ್ರಮಿಸುತ್ತಿದೆ. ಚಾಣಕ್ಯ ತರಬೇತಿ ಕೇಂದ್ರದಡಿ 100 ವಿದ್ಯಾರ್ಥಿಗಳಿಗೆ ಐಎಎಸ್‌ಕೆಎಎಸ್ ಕೋಚಿಂಗ್ ನೀಡಲಾಗಿದೆ.
> –ಅಸಗೋಡು ಜಯಸಿಂಹ, ಅಧ್ಯಕ್ಷ ಬ್ರಾಹ್ಮಣ ಅಭಿವೃದ್ಧಿ ಮಂಡಳಿ

ಬ್ರಾಹ್ಮಣ ಸಮಾಜಕ್ಕೆ ನಿವೇಶನ ಭರವಸೆ

ಕಲಬುರಗಿಯಲ್ಲಿ ಬ್ರಾಹ್ಮಣ ಸಮಾಜದ ಕಾರ್ಯಚಟುವಟಿಕೆಗಾಗಿ 15,000 ಚದರ ಅಡಿ ನಿವೇಶನ ಹಾಗೂ ಕಟ್ಟಡ ನಿರ್ಮಾಣಕ್ಕೆ ಎರಡು ಕೋಟಿ ರು. ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದ್ದಾರೆ. ಶೇ.10 ಹಣ ಭರ್ತಿ ಮಾಡಿದರೆ ಜಾಗ ಮಂಜೂರು ಮಾಡುವುದಾಗಿ ಕುಡಾ ಅಧ್ಯಕ್ಷ ಮಜರ್ ಆಲಂ ಖಾನ್ ತಿಳಿಸಿದ್ದಾರೆ. ಇದರಿಂದ ಸಮಾಜದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶಾಶ್ವತ ಸೌಲಭ್ಯ ದೊರೆಯಲಿದೆ ಎಂದು ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಕೌಟುಂಬಿಕ ಕಿರುಕುಳಕ್ಕೆ ಬೇಸತ್ತು ಸೊಸೆ ಆತ್ಮಹತ್ಯೆ



ಬೀದರ್: ಗಂಡನ ಮನೆಯವರ ಮಾನಸಿಕ ಕಿರುಕುಳದಿಂದಾಗಿ ಮನೆಯಲ್ಲೇ ನೇಣು ಬಿಗಿದುಕೊಂಡು ಗೃಹಿಣಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೀದರ್ ಜಿಲ್ಲೆಯ ಬಸವಕಲ್ಯಾಣ ನಗರದ ಓಂ ನಗರದಲ್ಲಿ ನಡೆದಿದೆ. ಅಂಜನಾಬಾಯಿ ಪಾಟೀಲ್ (22) ಆತ್ಮ ಹತ್ಯೆ ಮಾಡಿಕೊಂಡ ಗೃಹಿಣಿಯಾಗಿದ್ದು ಮನೆಯಲ್ಲಿ ಯಾರು ಇಲ್ಲದ ವೇಳೆ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾರೆ. ಮೃತಳ ಗಂಡ ಶೇಖರ್, ಅತ್ತೆ ಅರುಣಾಬಾಯಿ, ಮಾವ ಚಂದ್ರಕಾಂತ ಅವರ ಕಿರುಕುಳದಿಂದ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತಂದೆ ವಿಜಯ್ ಕುಮಾರ್ ಬಸವ ಕಲ್ಯಾಣ ಠಾಣೆಯಲ್ಲಿ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ. ದೂರಿನಲ್ಲಿ ಅತ್ತೆ ಅರುಣಾಬಾಯಿ ತನ್ನ ಮಗಳಿಗೆ ವೇಶ್ಯಾವಾಟಿಕೆ ಮಾಡುವಂತೆ ಮಾನಸಿಕ ಕಿರುಕುಳ ನೀಡುತ್ತಿದ್ದಳು ಎಂದು ವಿಜಯ್ ಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ. 3 ವರ್ಷಗಳ ಹಿಂದೆ ಅಂಜನಾಬಾಯಿ ಮತ್ತು ಶೇಖರ್ ಮಧ್ಯೆ ವಿವಾಹ ನಡೆದಿತ್ತು. ಪತಿ ಪಾನಿಪುರಿ ವ್ಯಾಪಾರ ಮಾಡುತ್ತಿದ್ದನು ಎನ್ನಲಾಗಿದೆ.

ಎಸ್‌ಟಿ ಮೀಸಲಾತಿಗೆ ಕೇಂದ್ರದ ಒಪ್ಪಿಗೆಗೆ ಯತ್ನ

ಹರಿಹರ: ವಾಲ್ಮೀಕಿ ಸಮಾಜದ ಕಲ್ಯಾಣಕ್ಕಾಗಿ ರಾಜ್ಯ ಸರಕಾರ ಹೆಚ್ಚಿಸಿರುವ ಮೀಸಲಾತಿಗೆ ಕೇಂದ್ರ ಸರಕಾರ ಒಪ್ಪಿಗೆ ನೀಡುವುದು ಬಾಕಿ ಇದ್ದು, ಆದಷ್ಟು ಬೇಗ ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡಿ, 9 ಶೆಡ್ಯೂಲ್‌ಗೆ ಸೇರಿಸಲು ಕೇಂದ್ರ ಸರಕಾರದ ಒಪ್ಪಿಗೆ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ವಾಲ್ಮೀಕಿ ಜನಾಂಗದವರಿಗೆ ಭರವಸೆ ನೀಡಿದರು. ತಾಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಅವರು, ಕಳೆದ ಹಲವಾರು ವರ್ಷಗಳಿಂದ ವಾಲ್ಮೀಕಿ, ಬೇಡ, ಬೇಡ ಜಂಗಮು, ತಳವಾರ, ಪರಿವಾರ ಜನಾಂಗದವರ ಬೇಡಿಕೆಯಾಗಿದ್ದ ಮೀಸಲಾತಿ ಪ್ರಮಾಣ ಹೆಚ್ಚಳಕ್ಕಾಗಿ, ಶ್ರೀ ಮಠದ ಡಾ. ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಮರಣಾಂತ ಸತ್ಯಾಗ್ರಹ ನಡೆಸಿದ್ದರ ಫಲವಾಗಿ ಮೀಸಲಾತಿಯಲ್ಲಿ ಶೇ.7 ರಷ್ಟು ಹೆಚ್ಚಳವಾಗಿದೆ. ಹೆಚ್ಚಳವಾಗಿರುವ ಮೀಸಲಾತಿಯ ಫಲ ಸಮಾಜದ ಸರ್ವರಿಗೂ ಸಿಗಬೇಕೆಂದರೆ ಕೇಂದ್ರ ಸರಕಾರದ 9 ಶೆಡ್ಯೂಲ್ ಅನ್ನು ಸೇರ್ಪಡೆಯಾಗಬೇಕು ಎಂದು ಅವರು ಹೇಳಿದರು.

ಚಿಂದಿ ಆಯುವ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನ

ಕಲಬುರಗಿ: ನಗರದ ಸಬ್ ಅರ್ಬನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾನವೀಯತೆ ಮರೆತ ಘಟನೆಯೊಂದು ನಡೆದಿದ್ದು, ಚಿಂದಿ ಆಯುವ ಮಹಿಳೆ ಮೇಲೆ ಅನ್ಯಕೋಮಿನ ಯುವಕರ ತಂಡವೊಂದು ಅತ್ಯಾಚಾರಕ್ಕೆ ಯತ್ನಿಸಿರುವ ಆರೋಪ ಕೇಳಿಬಂದಿದೆ. ನಗರದ ಹೊರವಲಯದಲ್ಲಿ ಎಂದಿನಂತೆ ಚಿಂದಿ ಆಯುತ್ತಿದ್ದ ಮಹಿಳೆಯನ್ನು ಕಂಡ ಯುವಕರ ಗುಂಪು, ಆಕೆಯನ್ನು ಏಕಾಏಕಿ ಕಾರಿನಲ್ಲಿ ಹೊತ್ತೊಯ್ಯಲು ಯತ್ನಿಸಿದೆ. ಮಹಿಳೆಯ ಕೈ ಹಿಡಿದು ಬಲವಂತವಾಗಿ ಎಳೆದಾಡಿದ ಕಿರಾತಕರು, ಅತ್ಯಾಚಾರ ಎಸಗಲು ಸಂಚು ರೂಪಿಸಿದ್ದರು ಎನ್ನಲಾಗಿದೆ. ಪ್ರಾಣ ಭಯದಿಂದ ಮಹಿಳೆ ಜೋರಾಗಿ ಕಿರುಚಾಡತೊಡಗಿದ್ದಾರೆ. ಇದರಿಂದ ಗಾಬರಿಗೊಂಡ ಯುವಕರ ಗ್ಯಾಂಗ್, ಮಹಿಳೆಯ ಮೇಲೆ ಮನಬಂದಂತೆ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದೆ. ಯುವಕರ ಹಲ್ಲೆಯಿಂದಾಗಿ ಮಹಿಳೆಯು ಗಂಭೀರವಾಗಿ ಗಾಯಗೊಂಡಿದ್ದು, ಕೂಡಲೇ ಅವರನ್ನು ನಗರದ ಟ್ರಾಮಾ ಕೇರ್ ಸೆಂಟರ್‌ಗೆ ದಾಖಲಿಸಲಾಗಿದೆ. ಸಬ್ ಅರ್ಬನ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಗಳ ಬಂಧನಕ್ಕಾಗಿ ಬಲೆ ಬೀಸಿದ್ದಾರೆ.

ದಿನ ವಿಶೇಷ

9 ಫೆಬ್ರವರಿ 2026 ಸೋಮವಾರ

» ಸೂರ್ಯೋದಯ	:	06-46
» ಸೂರ್ಯಾಸ್ತ	:	06-24
» ತಿಥಿ	:	ಸಪ್ತಮಿ
» ನಕ್ಷತ್ರ	:	ಸ್ವಾತಿ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಶಿಶಿರ
» ಮಾಸ	:	ಮಾಘ
» ಪಕ್ಷ	:	ಕೃಷ್ಣಪಕ್ಷ

ವಿಶ್ವವಾಣಿ ಕ್ಲಬ್ ಹೌಸ್
09.02.2026
ಸಂಜೆ: 06.55 ರಿಂದ 08.05 ರವರೆಗೆ



ಸೋಮವಾರದ ಸಂಚಿಕೆ
ಶ್ರೀಮತಿ ಅಮೂಲ್ಯ ಎಸ್ ಪ್ರಮೋದ್
ವಿಷಯ
'ಅಂಶ' ಕೃತಿ ಪರಿಚಯ

ಬೆಸ್ಕಾಂ ವ್ಯಾಪ್ತಿಯಲ್ಲಿ ಸೋಲಾರ್ ವಿದ್ಯುತ್‌ನಿಂದ ಪಂಪ್‌ಸೆಟ್ ಕಾರ್ಯನಿರ್ವಹಣೆ | 2.70 ಲಕ್ಷ ಕೃಷಿ ಪಂಪ್‌ಸೆಟ್ ಬಳಕೆ

ಕೃಷಿ ಪಂಪ್‌ಸೆಟ್‌ಗೆ ಬೆಳಕಾದ ಕುಸುಮ್

ಅಪರ್ಣಾ ಎ.ಎಸ್ ಬೆಂಗಳೂರು

ಕೃಷಿ ಪಂಪ್‌ಸೆಟ್‌ಗಳಿಗೆ ಮುಂಜಾನೆ ಅವಧಿಯಲ್ಲಿ ನಿರಂತರ ವಿದ್ಯುತ್ ನೀಡಬೇಕೆಂಬ ರಾಜ್ಯದ ರೈತರ ಬಹುದಿನದ ಬೇಡಿಕೆ, ಕುಸುಮ್ ಸಿ ಯೋಜನೆಯಿಂದ ಸಾಕಾರವಾಗುತ್ತಿದೆ.

ಚುನಾವಣೆಗೂ ಮೊದಲು ಕಾಂಗ್ರೆಸ್ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಏಳು ಗಂಟೆ ವಿದ್ಯುತ್ ನೀಡುವ ಘೋಷಣೆಯನ್ನು ಮಾಡಿತ್ತು. ಈ ಘೋಷಣೆ ಪೂರೈಸಲು ಹಾಗೂ ಅಗತ್ಯವಿರುವಷ್ಟು ವಿದ್ಯುತ್ ಒದಗಿಸಲು ಕುಸುಮ್-ಸಿ ಯೋಜನೆ ಸಹಕಾರಿಯಾಗಿದ್ದು, ಬೆಸ್ಕಾಂ ವ್ಯಾಪ್ತಿ ಒಂದರಲ್ಲಿಯೇ 2.70 ಲಕ್ಷಕ್ಕೂ ಹೆಚ್ಚು ಪಂಪ್‌ಸೆಟ್‌ಗಳಿಗೆ ಹಗಲಿನ ಸಮಯದಲ್ಲಿ ನಿರಂತರ 7 ಗಂಟೆ ವಿದ್ಯುತ್ ನೀಡಲು ಸಾಧ್ಯವಾಗಿದೆ.

ಕಾಂಗ್ರೆಸ್ ಪಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ಬೆಳಗಿನ ಅವಧಿಯಲ್ಲಿಯೇ ನಿರಂತರ ಏಳು ಗಂಟೆ ವಿದ್ಯುತ್ ನೀಡುವ ಭರವಸೆಯನ್ನು ನೀಡಿತ್ತು. ಆದರೆ ಇದಕ್ಕೆ ಭಾರಿ ಪ್ರಮಾಣದ ವಿದ್ಯುತ್ ಅಗತ್ಯವಿತ್ತು. ಈ ಪ್ರಮಾಣದ ವಿದ್ಯುತ್ ಉತ್ಪಾದನೆಗೆ ಕುಸುಮ್ ಸಿ ಯೋಜನೆಯ ಸೌರ ವಿದ್ಯುತ್ ಅಳವಡಿಕೆ ಕಾಮಗಾರಿ ಸಹಕಾರಿಯಾಗಿದ್ದು, ಬೆಸ್ಕಾಂ ವ್ಯಾಪ್ತಿಯಲ್ಲಿ ಬರುವ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ 157 ಕುಸುಮ್ ಸಿ ಯೋಜನೆಗಳಿಂದ ಒಟ್ಟು 1159.05 ಮೆ.ವ್ಯಾ. ಸೌರ ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

ಕುಸುಮ್ ಯೋಜನೆಯಲ್ಲಿ ಕೃಷಿ ಪಂಪ್‌ಸೆಟ್‌ಗಳ ಸೋಲರೈಸೇಷನ್ ಕಾರ್ಯವು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಬೇಸಿಗೆಯಲ್ಲಿ 2,70,000ಕ್ಕೂ ಅಧಿಕ ಪಂಪ್‌ಸೆಟ್‌ಗಳು ಸೌರ ವಿದ್ಯುತ್‌ನಿಂದ ಕಾರ್ಯನಿರ್ವಹಣೆ ಮಾಡಲಿದೆ. ಗ್ರಾಮೀಣ ಭಾಗದಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಫೀಡರ್ ವ್ಯಾಪ್ತಿಯಲ್ಲಿ ಸರಕಾರಿ ಅಥವಾ ಖಾಸಗಿ ಜಮೀನಿನಲ್ಲಿ ಸೋಲಾರ್ ಪ್ಯಾನಲ್‌ಗಳ ಅಳವಡಿಸಿ, ವಿದ್ಯುತ್ ಉತ್ಪಾದಿಸಿ ಸಮೀಪದ ಫೀಡರ್‌ಗಳಿಗೆ ಸಂಪರ್ಕ ಒದಗಿಸಲಾಗುವುದು. ಆ ಬಳಿಕ ಅಲ್ಲಿಂದ ಸುತ್ತಮುತ್ತಲಿನ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್‌ನ ಪೂರೈಕೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ ನಿರಂತರ 7 ಗಂಟೆ ವಿದ್ಯುತ್ ಪೂರೈಸುವ ಭರವಸೆ ನೀಡಿದ್ದೆವು. ಇದನ್ನು ಕಾರ್ಯರೂಪಕ್ಕೆ ತರಲು ಕುಸುಮ್- ಸಿ ಯೋಜನೆ ಸಹಕಾರಿಯಾಗಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಯೋಜನೆ ಅನುಷ್ಠಾನ ಆರಂಭವಾಗಿದ್ದು, ಇದರಿಂದ ರೈತರಿಗೆ ಹಗಲು ವೇಳೆ ಗುಣಮಟ್ಟದ ವಿದ್ಯುತ್ ಲಭ್ಯವಾಗುವುದರೊಂದಿಗೆ ಲೋಡ್ ಹೆಚ್ಚಳ, ವಿತರಣೆ ಅಥವಾ ಸರಬರಾಜಿನಲ್ಲಿ ವ್ಯತ್ಯಯವಾಗಿ ಎದುರಾಗುವ ಸಮಸ್ಯೆಗಳು ತಪ್ಪುತ್ತವೆ.

-ಕೆ.ಜೆ.ಜಾರ್ಜ್, ಇಂಧನ ಸಚಿವ

ಮಾರ್ಚ್ 31 ಗಡುವು: ಕುಸುಮ್-ಸಿ ಯೋಜನೆ ಅನುಷ್ಠಾಗೊಳಿಸುವ ಗುತ್ತಿಗೆದಾರರಿಗೆ ಕಾಮಗಾರಿ ಮುಗಿಸಲು ಮಾರ್ಚ್ 31ರ ಗಡುವು ನೀಡಲಾಗಿದ್ದು, ಮಾರ್ಚ್ ಅಂತ್ಯಕ್ಕೆ ಈ ಎಲ್ಲಾ ಯೋಜನೆಗಳು ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಸುಮಾರು 2,70,000ಕ್ಕೂ ಅಧಿಕ ಪಂಪ್ ಸೆಟ್‌ಗಳಿಗೆ ಹಗಲು ವೇಳೆ 7 ಗಂಟೆ ನಿರಂತರ ವಿದ್ಯುತ್ ಲಭ್ಯವಾಗಲಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದ ಹೊಸಕೋಟೆಯ ಸೂಲಿಬೆಲೆ ವೋಲ್ವೊ ಕುಂದಾಣ ಉಪ ಕೇಂದ್ರಗಳ ವ್ಯಾಪ್ತಿ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ದೇವನಹಳ್ಳಿಯ ವಿವಿಧ ಉಪಕೇಂದ್ರಗಳ ವ್ಯಾಪ್ತಿಯ ಕೆರೆ ಅಂಗಳಗಳಲ್ಲಿಯೂ ಯೋಜನೆ ಜಾರಿಗೊಳಿಸಲಾಗುತ್ತಿದೆ.

ಒಂದು ಮೆ.ವ್ಯಾಗೆ 4 ಎಕರೆ ಅಗತ್ಯ

ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಸುಮಾರು ನಾಲ್ಕು ಎಕರೆ ಜಾಗ ಬೇಕಾಗುತ್ತಿದ್ದು, ಈ ಜಾಗವನ್ನು 25 ವರ್ಷಕ್ಕೆ ಗುತ್ತಿಗೆ ಪಡೆಯಬಹುದಾಗಿದೆ. ಒಂದು ಎಕರೆಗೆ ವರ್ಷಕ್ಕೆ 25 ಸಾವಿರ ರು. ಬಾಡಿಗೆ ನಿಗದಿಪಡಿಸಲಾಗಿದ್ದು, ಈ ದರವನ್ನು ನೀಡಿ ಖಾಸಗಿಯವರು ರೈತರಿಂದ ಜಮೀನು ಪಡೆಯಬಹುದಾಗಿದೆ. ಒಂದು ವೇಳೆ ಸರಕಾರಿ ಜಾಗ ಇದ್ದರೆ, ಇನ್ನೂ ನೀಡಲಾಗುತ್ತದೆ. ಸರಕಾರಿ ಭೂಮಿ ಲಭ್ಯವಿಲ್ಲದ ಸ್ಥಳಗಳಲ್ಲಿ ರೈತರೇ ಭೂಮಿಯನ್ನು ಗುತ್ತಿಗೆ ನೀಡುವ ಮೂಲಕ ವಾರ್ಷಿಕ ಆದಾಯಗಳಿಸಬಹುದಾಗಿದೆ . ಕುಸುಮ್ ಸಿ ಯೋಜನೆಯಡಿ ಪ್ರತಿ ಎಕರೆ ಭೂಮಿಗೆ 25 ಸಾವಿರ ರು. ಖಾಸಗಿ ವಿದ್ಯುತ್ ಉತ್ಪಾದಕರು ಪಾವತಿಸಬೇಕು. ಆ ಮೊತ್ತವನ್ನು ಜಿಲ್ಲಾಧಿಕಾರಿಗಳ ಬಳಿ ಇಟ್ಟು ಉಪಕೇಂದ್ರ ಇರುವ ಗ್ರಾಮದ ಸರಕಾರಿ ಶಾಲೆ, ಅಂಗನವಾಡಿಗಳ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಖಾಸಗಿ ಭೂಮಿಯಾಗಿದ್ದರೆ, ನವೀಕರಿಸಬಹುದಾದ ಇಂಧನ ಸೇವಾ ಕಂಪನಿಯ ಡೆವಲಪರ್‌ಗಳು ಗುತ್ತಿಗೆಗೆ ತೆಗೆದುಕೊಂಡು, ಭೂಮಾಲೀಕರಿಗೆ ಎಕರೆಗೆ ಕನಿಷ್ಠ 25,000 ರು. ಪರಿಹಾರ ನೀಡುತ್ತಾರೆ.

ಅರಣ್ಯ ಇಲಾಖೆ ಅನುಮತಿ ಕೊಟ್ಟ ಬೆನ್ನಲ್ಲೆ ಕಾಮಗಾರಿ: ಸಿಎಂ

ಕೇಂದ್ರದ ನಿರ್ಲಕ್ಷ್ಯದಿಂದ ನಿಂತ ಕಳಸಾ ಬಂಡೂರಿ, ಮಹದಾಯಿ

ಹುಬ್ಬಳ್ಳಿ: ಕಳಸಾ ಬಂಡೂರಿ ಹಾಗೂ ಮಹದಾಯಿ ಯೋಜನೆ ಕಾಮಗಾರಿ ಕೇಂದ್ರ ಸರಕಾರದ ನಿಷ್ಕಾಳಜಿಯಿಂದ ನಿಂತು ಹೋಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರದ ವಿರುದ್ಧ ಹರಿಹಾಯ್ದರು.

ತಾಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ಬೆಣ್ಣಿಹಳ್ಳ ಪ್ರವಾಹ ನಿಯಂತ್ರಣ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಕಳಸಾ ಬಂಡೂರಿ ಹಾಗೂ ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರದ ಅರಣ್ಯ ಇಲಾಖೆಯಿಂದ ಅನುಮತಿ ದೊರೆಯಬೇಕು. ಆದರೆ, ಗೋವಾ ಹಾಗೂ ಮಹಾರಾಷ್ಟ್ರದಲ್ಲಿ ತಮ್ಮದೇ ಸರಕಾರ ಇದ್ದರೂ ಆ ಅನುಮತಿ ನೀಡಲು ಸಾಧ್ಯವಾಗುತ್ತಿಲ್ಲ. ಆದರೆ, ಸುಳ್ಳು ಆರೋಪಗಳನ್ನು ರಾಜ್ಯ ಸರಕಾರದ ಮೇಲೆ ಬಿಜೆಪಿಯವರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಯಡಿಯೂರಪ್ಪನವರು ಚುನಾವಣಾ ಪೂರ್ವದಲ್ಲಿ ಈ ಯೋಜನೆಯನ್ನು ಜಾರಿಗೆ ತರುತ್ತೇವೆ. ಪತ್ರದಲ್ಲಿ ಬರೆದುಕೊಡುತ್ತೇವೆ ಎಂದು ಘೋಷಣೆ ಮಾಡಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ಈಗಲೇ ಕೇಂದ್ರದಿಂದ ಅನುಮತಿ ದೊರೆತರೆ ನಾಳೆಯಿಂದಲೇ ಕಾಮಗಾರಿ ಪ್ರಾರಂಭಿಸಲು ರಾಜ್ಯ ಸರಕಾರ ಬದ್ಧವಾಗಿದೆ. ಮಳೆಯ ಸಂದರ್ಭದಲ್ಲಿ ರೈತರಿಗೆ ಸಾಕಷ್ಟು ಹಾನಿ ಉಂಟು ಮಾಡುತ್ತಿದ್ದ ಬೆಣ್ಣಿಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ 1610 ಕೋಟಿ ರು.ಖರ್ಚು ಆಗುತ್ತದೆ ಎಂದು ಅಂದಾಜಿಸಿ, ಮೊದಲ ಹಂತವಾಗಿ 200 ಕೋಟಿ ರು.ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭಿಸಲಾಗಿದೆ. ಅಲ್ಲದೇ ನವಲಗುಂದ ಕ್ಷೇತ್ರದಲ್ಲಿ 150 ಕೋಟಿ ರು.ಅನುದಾನದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಶಾಸಕ ಎನ್.ಎಚ್. ಕೋನರಡ್ಡಿ ಅಧ್ಯಕ್ಷತೆ ವಹಿಸಿದ್ದರು. ಸಚಿವರಾದ ಎಚ್.ಕೆ. ಪಾಟೀಲ, ಸತೀಶ ಜಾರಕಿಹೊಳಿ, ಸಂತೋಷ ಲಾಡ್ ಸೇರಿದಂತೆ ಶಾಸಕರು ಮುಂತಾವದರು ಪಾಲ್ಗೊಂಡಿದ್ದರು.

ಗೆಜೆಟ್ ನೋಟಿಫಿಕೇಶನ್ ಕೂಡಲೇ ಮಾಡಲಿ

ಕೃಷ್ಣ ಮೇಲ್ದಂಡೆ ಯೋಜನೆ 3ನೇ ಹಂತದ ಕಾಮಗಾರಿಗೆ ಕೇಂದ್ರ ಸರಕಾರ ಗೆಜೆಟ್ ನೋಟಿಫಿಕೇಶನ್ ಮಾಡಿಲ್ಲ. ಮೇಕೆದಾಟು ಯೋಜನೆ ಸಂಬಂಧ ತಮಿಳುನಾಡು ಸರಕಾರದ ಅರ್ಜಿ ಸುಪ್ರೀಂಕೋರ್ಟ್‌ನಲ್ಲಿ ವಜಾಗೊಂಡಿದೆ. 65 ಟಿಎಂಸಿ ನೀರು ಬಳಕೆ ಮಾಡುವ ಕಾರ್ಯ ನಿಂತು ಹೋಗಿದೆ. ಅಪ್ಪರ್ ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವುದಾಗಿ 5 ಸಾವಿರ ಕೋಟಿ ಹಣ ಬಜೆಟ್‌ನಲ್ಲಿ ಘೋಷಣೆಯಾಗಿದ್ದರೂ ಅದು ಹಾಗೇ ಉಳಿದಿದೆ. ಇನ್ನೂ ಹಲವಾರು ಯೋಜನೆಗಳು ಕೇಂದ್ರದ ಅನುಮತಿ ಇಲ್ಲದೇ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಸುಳ್ಳು ಆರೋಪ ಮಾಡುವುದರಲ್ಲಿ ಬಿಜೆಪಿಯವರು ನಿಸ್ಸಿಮರು. ಸರಕಾರದ ಬಳಿ ದುಡ್ಡು ಇಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ ಎಂದು ಪದೇ ಪದೇ ಸುಳ್ಳು ಆರೋಪ ಮಾಡುತ್ತಾರೆ. ಆದರೆ, ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಸಾಕಷ್ಟು ಹಣವನ್ನು ಅಭಿವೃದ್ಧಿ ಕಾರ್ಯಕ್ಕೆ ಬಳಸಲಾಗುತ್ತಿದೆ. ಅವರ ಮಾತುಗಳನ್ನು ನಂಬಬೇಡಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಯಚೂರು ಜಿಲ್ಲೆಯ ಲಿಂಗಸೂಗೂರಿಗೆ ಸಿಎಂ ಸಿದ್ದರಾಮಯ್ಯ ಹೆಲಿಕಾಪ್ಟರ್‌ನಲ್ಲಿ ಆಗಮನ.

ಹೆಲಿಕಾಪ್ಟರ್ ಲ್ಯಾಂಡಿಂಗ್ ಗೊಂದಲ: ಸಿಎಂ ಪೇಚಿಗೆ

ಲಿಂಗಸೂಗೂರು: ಮಾಜಿ ಸಚಿವ ಅಮರೇಗೌಡ ಬಯ್ಯಾಪುರ ಅವರ ಮೊಮ್ಮಗನ ಮದುವೆ ಸಮಾರಂಭಕ್ಕೆ ರಾಯಚೂರು ಜಿಲ್ಲೆ ಲಿಂಗಸೂಗೂರು ನಗರಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರು ಹೆಲಿಕಾಪ್ಟರ್ ಲ್ಯಾಡಿಂಗ್ ಸಮಸ್ಯೆಯಿಂದ ಪೇಚಿಗೆ ಸಿಲುಕಿದ ಘಟನೆ ಜರುಗಿತು.

ಮದುವೆ ಮಂಟಪದ 500 ಮೀಟರ್ ದೂರದಲ್ಲಿ ಮುಖ್ಯಮಂತ್ರಿ ಹೆಲಿಕಾಪ್ಟರ್ ಲ್ಯಾಡಿಂಗ್‌ಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡು ಮುಖ್ಯಮಂತ್ರಿಗಳ ಆಗಮನಕ್ಕೆ ಕಾಯುತ್ತಿದ್ದರು. ಎಲಿಕಾಪ್ಟರ್ ಲ್ಯಾಂಡ್ ಆದಾಗ ಅದರಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಇದ್ದದನ್ನು ನೋಡಿ ಜಿಲ್ಲಾಧಿಕಾರಿ, ಎಸ್‌ಪಿ ಸೇರಿದಂತೆ ಎಲ್ಲ ಅಧಿಕಾರಿಗಳು ಗೊಂದಲವಾಗಿ ಮುಖ್ಯಮಂತ್ರಿಗಳ ಹೆಲಿಕಾಪ್ಟರ್ ಬೇರೆಡೆ ಲ್ಯಾಂಡ್ ಆಗೋದನ್ನು ತಿಳಿದು ಅವಸರದಲ್ಲಿ ಓಡಿ ಹೋದ ಘಟನೆ ಜರುಗಿತು.

ರಾಯಚೂರು ರಸ್ತೆಯಲ್ಲಿ ಲ್ಯಾಂಡ್ ಆಗಬೇಕಿದ್ದ ಹೆಲಿಕಾಪ್ಟರ್ ಕಲಬುರಗಿ ರಸ್ತೆಯಲ್ಲಿ ಮಾನಪ್ಪ ವಜ್ಜಲ್ ಅವರ ಖಾಸಗಿ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗಿದ್ದು, ಲ್ಯಾಂಡ್ ಆದ ಜಾಗದಲ್ಲಿ ಜನ ಅಧಿಕಾರಿಗಳು ಯಾರು ಇಲ್ಲದ್ದನ್ನು ನೋಡಿ ಸಿಎಂ ಪೇಚಿಗೆ ಸಿಲುಕಿದರು. ಸಚಿವ ಸತೀಶ್ ಜಾರಕಿಹೊಳಿ ಲ್ಯಾಂಡ್ ಆಗಬೇಕಿದ್ದ ಜಾಗದಲ್ಲಿ ಸಿಎಂ ಲ್ಯಾಂಡ್ ಆಯಿತು. ಸಚಿವರಿಗಾಗಿ ವ್ಯವಸ್ಥೆ ಮಾಡಿದ್ದ ವಾಹನದಲ್ಲಿ ಮದುವೆ ಮಂಟಪಕ್ಕೆ ಬರುವಾಗ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದು, ಅವರ ಕೋಪಕ್ಕೆ ಕಾರಣವಾಯಿತು. ಪುನಃ ರಾಯಚೂರು ರಸ್ತೆಯ ಹೆಲಿಪಾಡ್‌ಗೆ ಬಂದು ಹೆಲಿಕಾಪ್ಟರ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹುಬ್ಬಳಿಗೆ ಪ್ರಯಾಣಿಸಿದರು.

5 ಸಾವಿರ ವರ್ಷದ ಮಾನವ ಅಸ್ಥಿಪಂಜರ ಪತ್ತೆ

ಬಳ್ಳಾರಿ: ಜಿಲ್ಲೆಯ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಬಳಿ ನಡೆಯುತ್ತಿರುವ ಉತ್ಖನನ ಕಾರ್ಯದಲ್ಲಿ, ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ ಎರಡು ಮಾನವ ಅಸ್ಥಿಪಂಜರಗಳು ಪತ್ತೆಯಾಗಿದ್ದು, ಅವುಗಳ ನಿಖರ ಕಾಲಮಾನದ ಕಾರ್ಬನ್ ಡೇಟಿಂಗ್ ನಡೆಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಪತ್ತೆಯಾದ ಅಸ್ಥಿಪಂಜರಗಳು ಸುಮಾರು 3,000 ರಿಂದ 5,000 ವರ್ಷಗಳ ಹಿಂದಿನವು ಆಗಿರಬಹುದೆಂದು ಅಂದಾಜಿಸಲಾಗಿದ್ದು, ನಿಖರ ಕಾಲಮಾನದ ನಿರ್ಧಾರಕ್ಕಾಗಿ ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಿದ್ದಾರೆ. ಉತ್ಖನನ ಕಾರ್ಯದ ನಿರ್ದೇಶಕರಾದ ಪರಂಪರೆ ಇಲಾಖೆ ಉಪ ನಿರ್ದೇಶಕ ಆರ್. ಶೇಜೇಶ್ವರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ತೆಕ್ಕಲಕೋಟೆ ಪ್ರದೇಶವನ್ನು ಸಂರಕ್ಷಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ. ಅಮೆರಿಕದ ಹಾನ್‌ವಿಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಹಾಗೂ ಉತ್ಖನನ ತಂಡದ ಸಹ ನಿರ್ದೇಶಕಿ ಪ್ರೊ. ನಮಿತಾ ಎಸ್. ಸುಗಂಧಿ ನೇತೃತ್ವದ ಸಂಶೋಧಕರ ತಂಡವು ತೆಕ್ಕಲಕೋಟೆ ಪಟ್ಟಣದ ಗೌಡ್ರ ಮೂಲೆ ಬೆಟ್ಟದಲ್ಲಿ ಈ ಉತ್ಖನನ ಕಾರ್ಯವನ್ನು ನಡೆಸುತ್ತಿದೆ. ಈ ಉತ್ಖನನದಲ್ಲಿ ಸುಮಾರು 5.5 ಅಡಿ ಉದ್ದದ ಎರಡು ಸಂಪೂರ್ಣ ಮಾನವ ಅಸ್ಥಿಪಂಜರಗಳು ಒಂದರ ಪಕ್ಕದಲ್ಲೊಂದು ಪತ್ತೆಯಾಗಿದ್ದು, ಇವು ಸುಮಾರು 3,000 ರಿಂದ 5,000 ವರ್ಷಗಳಷ್ಟು ಹಳೆಯದೆಂದು ಅಂದಾಜಿಸಲಾಗಿದೆ. ಇವುಗಳ ಸುತ್ತಮುತ್ತ ಮಡಿಕೆ ಚೂರುಗಳು, ಸೂಕ್ಷ್ಮ ಶಿಲಾಯುಗದ ಅವಶೇಷಗಳು ದೊರೆತಿದ್ದು, ಇದು ನವಶಿಲಾಯುಗ ಅಥವಾ ಪ್ರಾಗೈತಿಹಾಸಿಕ ಕಾಲದ ಪ್ರಮುಖ ಮಾನವ ನೆಲೆಯಾಗಿತ್ತು ಎಂಬುದಕ್ಕೆ ಸಾಕ್ಷಿ ದೊರೆತಂತಾಗಿದೆ ಎಂದು ಸಂಶೋಧಕರ ತಂಡ ತಿಳಿಸಿದೆ.



ತೇಜಸ್ವಿ ಸೂರ್ಯ ಗೂಬೆ ಕೂರಿಸುವುದು ಬೇಡ: ದಿನೇಶ್ ಗುಂಡೂರಾವ್

ಮೆಟ್ರೋ ದರ ಪರಿಷ್ಕರಣೆ ಕೇಂದ್ರದ ಹೊಣೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಮೆಟ್ರೋ ಟಿಕೆಟ್ ದರ ಪರಿಷ್ಕರಣೆ ವಿಚಾರದಲ್ಲಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅನಗತ್ಯವಾಗಿ ರಾಜ್ಯ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಸಚಿವ ದಿನೇಶ್ ಗುಂಡೂರಾವ್ ಕಿಡಿಕಾರಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೆಟ್ರೋ ದರ ಏರಿಕೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ರಾಜ್ಯ ರಾಜಕೀಯದ ಇತ್ತೀಚಿನ ಬೆಳವಣಿಗೆಗಳ ಕುರಿತು ಬಿಜೆಪಿಯ ಟೀಕೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಮೆಟ್ರೋ ದರ ಪರಿಷ್ಕರಣೆ ಮಾಡುವ ಸಂಪೂರ್ಣ ಅಧಿಕಾರ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿದೆ. ಈ ಸತ್ಯ ಗೊತ್ತಿದ್ದರೂ ಬಿಜೆಪಿಯವರು ಏನಾದರೂ ನೆಪ ಸಿಗುತ್ತದೆಯೇ ಎಂದು ಕಾಯುತ್ತಿರುತ್ತಾರೆ. ಟಿಕೆಟ್ ವಿಚಾರದಲ್ಲೂ ನಮ್ಮ ಮೇಲೆ ಗೂಬೆ ಕೂರಿಸಲು ನೋಡಿದರು, ಆದರೆ ಈಗ ನಿಜಾಂಶ ಬಯಲಾಗಿದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಅಧಿಕೃತವಾಗಿ ಪತ್ರ ಬರೆದಿದ್ದು, ದರ ಪರಿಷ್ಕರಣಾ ಸಮಿತಿ ರಚಿಸುವಂತೆ ಕೋರಿದ್ದಾರೆ. ಹೀಗಿರುವಾಗ ಬಿಜೆಪಿ ಸಂಸದರು ನಮ್ಮ ಮೇಲೆ ಆರೋಪ ಮಾಡುವ ಬದಲು ಕೇಂದ್ರ ಸರಕಾರದ ಮೇಲೆ ಒತ್ತಡ ತರಲಿ ಎಂದು ಸಚಿವರು ಸವಾಲು ಹಾಕಿದರು.

ಪಕ್ಷದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷಗಳ ಕಾಲ ಪೂರ್ಣಾವಧಿ ಸಿಎಂ ಆಗಿ ಮುಂದುವರಿಯಲಿದ್ದಾರೆ ಎಂಬ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಯ ಕುರಿತು ಪ್ರತಿಕ್ರಿಯಿಸಿ, ಯತೀಂದ್ರ ಅವರು ಯಾವ ಸಂದರ್ಭದಲ್ಲಿ ಆ ಮಾತು ಹೇಳಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧವಾಗಿರುವುದಾಗಿ ಸಿಎಂ ಮತ್ತು ಡಿಸಿಎಂ ಇಬ್ಬರೂ ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದರು.

ರಾಜ್ಯದ ಎಲ್ಲ ಆರೋಗ್ಯ ಕೇಂದ್ರಗಳಲ್ಲಿನ ಔಷಧ ದಾಸ್ತಾನು ಮತ್ತು ಅವಧಿ ಮುಕ್ತಾಯದ ಮಾಹಿತಿ ಪಡೆಯಲು ಈ-ಔಷಧ ಸಾಫ್ಟ್‌ವೇರ್ ಅಳವಡಿಸಲಾಗುತ್ತಿದೆ. ಇದರಿಂದ ಔಷಧಿ ಕೊರತೆ ನೀಗಿಸಿ, ಪಾರದರ್ಶಕವಾಗಿ ಪೂರೈಕೆ ಮಾಡಲು ಸಾಧ್ಯವಾಗಲಿದೆ.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಚುನಾವಣೆ ಬಹಿಷ್ಕರಿಸಲು ಪಂಡಿತಾರಾಧ್ಯ ಶ್ರೀ ಸಲಹೆ | ರಂಜಾನ ದರ್ಗಾ ಸೇರಿ ಅನೇಕ ಗಣ್ಯರು ಭಾಗಿ

ಕಾರ್ಖಾನೆ ವಿರೋಧಿ ಹೋರಾಟಕ್ಕೆ ಶತದಿನ

ಕೊಪ್ಪಳ: ಇಲ್ಲಿನ ಜನ ಒಂದಾಗಿ ಚುನಾವಣೆ ವೇಳೆ ಮತದಾನ ಮಾಡುವುದಿಲ್ಲ ಎಂದು ನಿರ್ಣಯಿಸಿ ಹೋರಾಟ ಮಾಡಬೇಕು. ಆಗ ಮಾತ್ರ ಕಾರ್ಖಾನೆ ವಿರೋಧಿ ಹೋರಾಟ ಯಶಸ್ವಿಯಾಗಲು ಸಾಧ್ಯ ಎಂದು ಸಾಣೇ ಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಸಲಹೆ ನೀಡಿದರು.

ಇಲ್ಲಿನ ನಗರಸಭೆ ಆವರಣದಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಹಾಗೂ ಪರಿಸರ ಹಿತ ರಕ್ಷಣಾ ವೇದಿಕೆಯಿಂದ ನಡೆಯುತ್ತಿರುವ ಕಾರ್ಖಾನೆ ವಿರೋಧಿ ಅನಿರ್ದಿಷ್ಟಾವಧಿ ಹೋರಾಟದ ಹಿನ್ನೆಲೆ ಜಿಲ್ಲಾಸ್ಪತ್ರೆ ಹಳೇ ಕಟ್ಟದ ಮುಂದೆ ನಡೆದ 100ನೇ ದಿನದ ಹೋರಾಟ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಹೋರಾಟ ಯಶಸ್ವಿಯಾಗಲು ಜನ ಸಂಘಟನೆ ಆಗಬೇಕಿದೆ. ಆಗ ಮಾತ್ರ ಕಾರ್ಖಾನೆ ಇಲ್ಲಿದ ಜಾಗ ಖಾಲಿ ಮಾಡಲು ಸಾಧ್ಯ. ಹೋರಾಟ ಗೆಲ್ಲಬೇಕು ಎಂದರೆ ನಮ್ಮ ನಡೆ-ನುಡಿ ಶುದ್ಧವಾಗಿರಬೇಕು. ನಮ್ಮ ವಾಹನಗಳು ಹೆಚ್ಚು ಹೊಗೆ ಉಗುಳಿದರೆ ದಂಡ ಹಾಕುವ ಪರಿಸರ ಇಲಾಖೆ ಇಂಥ ಕಾರ್ಖಾನೆಗಳನ್ನು ನೋಡಿಲ್ಲ ಎಂದರೆ ಏನರ್ಥ ಫೆ.24ರ ಹೋರಾಟಕ್ಕೆ ಎಲ್ಲ ಜನಪ್ರತಿನಿಧಿಗಳು ಬರಲಿ. ನಾವೂ ಬರುತ್ತೇವೆ. ಮುಖ್ಯಮಂತ್ರಿ ಅವರನ್ನು ಭೇಟಿ ಮಾಡೋಣ. ಹೋರಾಟ ನಿಲ್ಲಿಸಬೇಕಾದರೆ ಕಾರ್ಖಾನೆ ನಿಲ್ಲಿಸಬೇಕು ಎಂದು ತಿಳಿಸೋಣ ಎಂದರು.

ಕೊಪ್ಪಳದಲ್ಲಿ ನಡೆಯುತ್ತಿರುವ ಕಾರ್ಖಾನೆ ವಿರೋಧಿ ಅನಿರ್ದಿಷ್ಟಾವಧಿ ಹೋರಾಟ 100 ದಿನ ಪೂರೈಸಿದ ಹಿನ್ನೆಲೆ ಸಾಣೇಹಳ್ಳಿ ಶ್ರೀಗಳ ನೇತೃತ್ವದಲ್ಲಿ ಬೃಹತ್ ಸಭೆ ನಡೆಯಿತು.

ಬೃಹತ್ ಹೋರಾಟದ ನಿರ್ಣಯಗಳು

ಕಾರ್ಖಾನೆ ವಿರೋಧಿ ಅನಿರ್ದಿಷ್ಟ ಹೋರಾಟದ 100ನೇ ದಿನದ ಸಭೆಯಲ್ಲಿ ಅನೇಕ ನಿರ್ಣಯ ಕೈಗೊಳ್ಳಲಾಯಿತು. ಫೆ.24ಕ್ಕೆ ಕೊಪ್ಪಳ- ಭಾಗ್ಯನಗರ ಸ್ವಯಂ ಪ್ರೇರಿತ ಬಂದ್ ಕರೆ. ಬಂದ್‌ಗೆ ಗವಿಸಿದ್ದೇಶ್ವರ ಸ್ವಾಮೀಜಿ ನೇತೃತ್ವಕ್ಕೆ ಮನವಿ ಮಾಡುವುದು. ಗವಿಮಠದಿಂದ ತಾಲೂಕ ಕ್ರೀಡಾಂಗಣದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸುವುದು. ತುಂಗಭದ್ರಾ ವಿಷಗೊಳಿಸುವ ಕಾರ್ಖಾನೆ ಮುಚ್ಚಿಸಬೇಕು. ಅಲ್ಲಿಯವರೆಗೆ ಶುದ್ಧ ಸಂಸ್ಕರಿಸಿದ ನೀರು ಜನ ಜಾನುವಾರುಗಳಿಗೆ ಸರಬುರಾಜು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಬಸಾಪುರ ಕೆರೆ ಕೂಡಲೇ ಮರಳಿ ಜನರಿಗೆ ಬಿಟ್ಟು ಕೊಡಬೇಕು. ಸುಮಾರು ಹತ್ತು ಸಾವಿರಕ್ಕೂ ಅಧಿಕ ಜನರು, ವಿದ್ಯಾರ್ಥಿಗಳು, ಮಹಿಳೆಯರು ಸೇರಿಸುವ ಗುರಿ ಸೇರಿ ಹಲವು ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಕೊಪ್ಪಳ ತಾಲೂಕಿನ ಕಾರ್ಖಾನೆ ಬಾಧಿತ 22 ಗ್ರಾಮಗಳು ಯಾವುದೇ ಆಡಳಿತ ವ್ಯವಸ್ಥೆಯೇ ಇಲ್ಲದ ಪ್ರದೇಶದಂತೆ ಇವೆ. ಕಾಲು ಶತಮಾನದಿಂದ ಡಿಸಿ, ಸಚಿವ, ಸಂಸದ, ಶಾಸಕರು ಯಾರೊಬ್ಬರೂ ಹೋಗಿಲ್ಲ. ಅಷ್ಟು ನಿರ್ಲಕ್ಷ್ಯ ಮಾಡಿದ್ದಾರೆ. ಸಾಣೇಹಳ್ಳಿ ಶ್ರೀಗಳು ನಮ್ಮೊಂದಿಗೆ ಇರುವುದು ನಮಗೆ ದೊಡ್ಡ ಬಲ. ಫೆ.24ರಂದು ಎಲ್ಲ ಬಸವ ಚಿಂತಕ ಸ್ವಾಮೀಜಿಗಳು ಕೊಪ್ಪಳಕ್ಕೆ ಬರಬೇಕು. ಸ್ವತಂತ್ರ ಭಾರತದಲ್ಲಿ ಅಸಹಾಯಕ ನಾಗರಿಕರು ಬದುಕುವುದು ದೊಡ್ಡ ದುರಂತ.

-ರಂಜಾನ್ ದರ್ಗಾ, ಚಿಂತಕ

ಚಿಂತಕ ರಂಜಾನ್ ದರ್ಗಾ, ಮಾಜಿ ನಗರಸಭೆ ಅಧ್ಯಕ್ಷ ಚಂದ್ರಶೇಖರ ಕವಲೂರು, ಸಾಹಿತಿ ಸೂರ್ಯಕಾಂತ ಗುಣಕಿಮಠ, ಧಾರವಾಡ ಸಾಹಿತಿ ಅಸ್ಲಂ ದರ್ಗಾ, ಮಹಿಳಾ ಧುರೀಣೆ ಜ್ಯೋತಿ ಎಂ. ಗೊಂಡಬಾಳ, ಸುಜಾತಾ ಗುರುರಾಜ ಹಲಗೇರಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ವಿ. ಕಣವಿ ಮಾತನಾಡಿದರು.

ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಿ, ಸಭೆಯ ನಿರ್ಣಯಗಳಿಗೆ ಅನುಮೋದನೆ ಪಡೆದರು. ಆರ್.ಸಿ.ಎಫ್. ಕಲಾ ತಂಡದ ಎಂ. ಗಂಗಾಧರ ಹಾಗೂ ತಂಡದವರು ಎಚ್ಚರಿಕೆಯ ಕ್ರಾಂತಿ ಹಾಡು ಹೇಳಿದರು. ಸದಾಶಿವ ಪಾಟೀಲ್ ಪರಿಸರ ಜಾಗೃತಿ ಗೀತೆ ಹಾಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹಟ್ಟಿ ಚಿನ್ನದ ಗಣಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಟ್ಟಿ ಚಿನ್ನದ ಗಣಿಗೆ ಡಿಸಿಎಂ ಡಿಕೆಶಿ ಭೇಟಿ

ಲಿಂಗಸುಗೂರು: ಹಟ್ಟಿ ಚಿನ್ನದಗಣಿಗೆ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ ಭಾನುವಾರ ಭೇಟಿ ನೀಡಿ ವೀಕ್ಷಣೆ ಮಾಡಿದರು. ಎಂಎಲ್‌ಸಿ ಶರಣಗೌಡ ಪಾಟೀಲ್ ಬಯ್ಯಾಪೂರು ಅವರ ಮಗನ ಮದುವೆ ಹಿನ್ನೆಲೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ನಗರಕ್ಕೆ ಆಗಮಿಸಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಮೀಪದ ಹಟ್ಟಿ ಚಿನ್ನದ ಗಣಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಿನ್ನದಗಣಿ ಕಂಪೆನಿಯ 2800 ಅಡಿ ಭೂಮಿಯೊಳಗೆ ತೆರಳಿ ಅಧಿಕಾರಿಗಳೊಂದಿಗೆ ವೀಕ್ಷಣೆ ಮಾಡಿದರು. ಭೂ ಕೆಳಮೈ ವೀಕ್ಷಣೆಯ ನಂತರ ಚಿನ್ನದ ಅದಿರು ಸಂಸ್ಕರಣೆಯ ಲೋಹ ವಿಭಾಗವನ್ನು ಸಹ ವೀಕ್ಷಣೆ ಮಾಡಿದರು. ಈ ವೇಳೆ ಸಂಸದ ಜಿ. ಕುಮಾರ ನಾಯಕ, ನಿಗಮದ ಅಧ್ಯಕ್ಷ ಜೆ.ಟಿ.ಪಾಟೀಲ್, ಮಾಜಿ ಶಾಸಕ ಡಿ.ಎಸ್.ಹೂಲಗೇರಿ, ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ ಬಹದ್ದೂರ್, ಜಿ.ಎಂ.ಶಫುಲ್ಲಾ ಖಾನ್, ವ್ಯವಸ್ಥಾಪಕ (ಮಾಸ) ಯಮನೂರಪ್ಪ ಗೌಡರ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಮಿಕ ಮುಖಂಡರು ಇದ್ದರು.

ಸಂಪಾದಕೀಯ

ಮೈಮರೆವು ಬೇಡ, ಎಚ್ಚರವಿರಲಿ

ಎರಡು ಮಹತ್ವದ ಬೆಳವಣಿಗೆಗಳ ಕುರಿತು ಇಲ್ಲಿ ಉಲ್ಲೇಖಿಸಬೇಕು. ಮೊದಲಿನದು, ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರ ಆಹ್ವಾನದ ಮೇರೆಗೆ ಎರಡು ದಿನಗಳ ಅಧಿಕೃತ ಭೇಟಿಗೆ ಅಲ್ಲಿಗೆ ತೆರಳಿದ್ದಾರೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರು. ಈ ಭೇಟಿಯ ವೇಳೆ ಅವರು ಕೌಲಾಲಂಪುರದಲ್ಲಿ ಮಾತನಾಡುತ್ತಾ, 'ವಿಶ್ವದ ಹಲವೆಡೆ ಸೇನಾ ಸಂಘರ್ಷಗಳು, ಆರ್ಥಿಕ ಹಿನ್ನಡೆ ಕಂಡುಬಂದಿರುವ ಈ ಸಂದರ್ಭದಲ್ಲಿ ಬಹಳಷ್ಟು ದೇಶಗಳಿಗೆ ಭಾರತವು ಪ್ರಗತಿ ಪಥದಲ್ಲಿನ ವಿಶ್ವಾಸಾರ್ಹ ಜತೆಗಾರನಾಗಿ ಕಾಣುತ್ತಿದೆ' ಎಂಬ ಅರ್ಥಪೂರ್ಣ ಮಾತುಗಳನ್ನು ಆಡಿದ್ದಾರೆ. ಇದರಲ್ಲಿ ಅತಿಶಯೋಕ್ತಿಯೇನಿಲ್ಲ. ಐರೋಪ್ಯ ಒಕ್ಕೂಟದ ದೇಶಗಳೊಂದಿಗೆ ಭಾರತವು 'ಮುಕ್ತ ವ್ಯಾಪಾರ ಒಪ್ಪಂದ'ವನ್ನು ಮಾಡಿಕೊಂಡ ನಂತರ, ತೀರಾ ಇತ್ತೀಚೆಗೆ ಅಮೆರಿಕದ ಜತೆಗೂ ವಾಣಿಜ್ಯಕ ಸಂಬಂಧವನ್ನು ಕುದುರಿಸಿಕೊಂಡಿರುವುದು ಇತರ ದೇಶಗಳು ಭಾರತದಲ್ಲಿ ಇಟ್ಟಿರುವ ನಂಬಿಕೆ-ವಿಶ್ವಾಸಗಳಿಗೆ ಸಾಕ್ಷಿ. ಎರಡನೆಯದಾಗಿ, ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಸಂಬಂಧ ಕುದುರಿರುವ ಮೊದಲ ಹಂತದಲ್ಲಿ 'ಅಮೆರಿಕದ ವ್ಯಾಪಾರ ಪ್ರತಿನಿಧಿಗಳು' ಬಿಡುಗಡೆ ಮಾಡಿರುವ ಭಾರತದ ಸಮಗ್ರ ನಕ್ಷೆಯಲ್ಲಿ, 'ಪಾಕ್ ಆಕ್ರಮಿತ ಕಾಶ್ಮೀರ' ಹಾಗೂ 'ಅಕ್ಸಾಯ್ ಚಿನ್' ಪ್ರದೇಶಗಳನ್ನೂ ಭಾರತದ ಭಾಗ ಎಂದೇ ಬಿಂಬಿಸಲಾಗಿದೆ. ಇದು ದಶಕಗಳಿಂದಲೂ ಕೆನೆಗಟ್ಟಿರುವ ಭಾರತದ ಆಶಯಕ್ಕೆ ಅಮೆರಿಕದ ಕಡೆಯಿಂದ ಹೊಮ್ಮಿರುವ ಸಕಾರಾತ್ಮಕ ಸೂಚ್ಯವರ್ತನೆ ಎನ್ನುತ್ತಿದ್ದಾರೆ ಬಲ್ಲವರು. ಹಾಗಂತ ಭಾರತವು ಮೈಮರೆಯುವಂತಿಲ್ಲ. ತನಗೆ ಏನಾದರೂ ಲಾಭವಾಗುವಂತಿದ್ದರೆ ಮಾತ್ರವೇ ಅಮೆರಿಕ ಇಂಥ ಇಂಗಿತಗಳನ್ನು ವ್ಯಕ್ತಪಡಿಸುತ್ತದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಆದ್ದರಿಂದ, ಅಮೆರಿಕದ ಜತೆಗಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳ ಕಡೆಗೆ ಭಾರತವು ಗರಿಷ್ಠ ಗಮನವನ್ನು ನೀಡುವುದರ ಜತೆಜತೆಗೆ ತನ್ನ ಏಕತೆ, ಸಮಗ್ರತೆ, ಸಾರ್ವಭೌಮತೆಗಳ ರಕ್ಷಣೆಯ ವಿಚಾರದಲ್ಲಿ ಎಚ್ಚರವನ್ನೂ ಕಾಯ್ದುಕೊಳ್ಳುವಂತಾಗಲಿ ಎಂಬುದು ದೇಶಪ್ರೇಮಿಗಳ ಆಶಯ.

ಸೊಂಪಾದಕೀಯ

ದಟ್ಟಣೆ ಎಂಬ ಪೆಡಂಭೂತ!

ರಾಜಧಾನಿ ಬೆಂಗಳೂರು ಐಟಿ ಸಿಟಿ, ಸ್ಟಾರ್ಟ್-ಅಪ್ ಹಬ್, ಸಿಲಿಕಾನ್ ವ್ಯಾಲಿ ಎಂದೆಲ್ಲ ಹೆಸರು ಪಡೆದಿದೆ. ಆದರೆ ಇದರ ಜತೆಜತೆಗೆ ಟ್ರಾಫಿಕ್ ಸಮಸ್ಯೆಯನ್ನೂ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಹೊತ್ತು ಕೂತಿದೆ. ಸಂಚಾರ ದಟ್ಟಣೆ ತಗ್ಗಿಸಲು ಮೆಟ್ರೋ, ಬಿಎಂಟಿಸಿ ಬಸ್‌ನಂಥ ಸಮೂಹ ಸಾರಿಗೆಗೆ ಹೆಚ್ಚೆಚ್ಚು ಅವಕಾಶ ನೀಡಲಾಗುತ್ತಿದೆ. ಆದರೂ ರಸ್ತೆಯಲ್ಲಿ ವಾಹನ ಮುತ್ತಿಕೊಂಡರೆ, ಮೆಟ್ರೋ, ಬಿಎಂಟಿಸಿಯಲ್ಲಿ ಜನ ಮುತ್ತಿಕೊಳ್ಳೋದು ಎಲ್ಲರಿಗೂ ಗೊತ್ತಿರೋ ಸತ್ಯ. ಅದಕ್ಕೆ ಸುರಂಗ ಮಾರ್ಗ ಕೊರೆದು, ಸಂಚಾರವನ್ನು ತಗ್ಗಿಸೋ ಪ್ಲಾನ್‌ನಲ್ಲಿ ಸರಕಾರವಿದೆ. ಈ ಯೋಜನೆ ಪೂರ್ಣಗೊಂಡು ಸುರಂಗದಲ್ಲಿ ವಾಹನಗಳು ಹೋಗುವಷ್ಟರಲ್ಲಿ ಸುರಂಗದಲ್ಲಿಯೂ ಸಂಚಾರ ದಟ್ಟಣೆ ಆಗುವಂಥ ಸ್ಥಿತಿ ನಿರ್ಮಾಣವಾದ್ರೂ ಅಚ್ಚರಿಯಿಲ್ಲ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಅದರಲ್ಲಿಯೂ ಬೆಳಗ್ಗೆ ಹಾಗೂ ಸಾಯಂಕಾಲದ ಸಮಯದಲ್ಲಿ ಕೆಲವೊಂದಷ್ಟು ಜಂಕ್ಷನ್‌ನಲ್ಲಿ ತಗಲಾಕಿಕೊಂಡರೆ, ರಾತ್ರಿಯ ಡಿನ್ನರ್ ಅನ್ನು ಅಲ್ಲೇ ಸಿಗೋ ಹೋಟೆಲ್‌ನಲ್ಲಿ ಮಾಡಿಕೊಂಡು ಬರೋದು ಒಳ್ಳೇದು. ಇಂಥ ಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಬುದ್ಧಿವಂತರೊಬ್ಬರು, ಗೂಗಲ್ ಮ್ಯಾಪ್ ಓಪನ್ ಮಾಡಿ ಟ್ರಾಫಿಕ್‌ನ ಹನುಮನ ಬಾಲವನ್ನು ದಾಟಿ ಮನೆಗೆ ಹೋಗಲು ಇನ್ನೆಷ್ಟು ಹೊತ್ತು ಬೇಕಾಗಬಹುದು ಎಂದು ನೋಡಿದರಂತೆ. ಅವರಿಗೆ ಕಾದಿದ್ದ ಷಾಕ್ ಏನೆಂದರೆ, ಹಾಯಾಗಿ ಕಾರಿನಲ್ಲಿ ಹೋದರೆ 15 ಕಿ.ಮೀ. ಸಾಗಲು 46 ನಿಮಿಷ ಬೇಕಿತ್ತು. ಅದೇ 'ನಟರಾಜ್ ಸರ್ವೀಸ್' (ನಡೆದುಕೊಂಡು ಹೋದರೆ) ಮೂಲಕ 43 ನಿಮಿಷಕ್ಕೆ ಮನೆ ತಲುಪಬಹುದಾಗಿತ್ತು. ನಡೆಯುವ ಬದಲು ಓಡಿದರೆ ಇನ್ನೂ 10 ನಿಮಿಷ ಮೊದಲೇ ತಲುಪಬಹುದು ಅನ್ನೋದು ಬೇರೆ ಮಾತು. ಮುಕ್ಕಾಲು ಗಂಟೆ ಕಾರಿನಲ್ಲಿ ಕೂತು ಕೂತು ಬೆನ್ನು ತುರಿಸಿಕೊಳ್ಳೋ ಬದಲು, ಮನೆಯಿಂದ ಕಚೇರಿಗೆ ವಾಕಿಂಗ್ ಮಾಡಿದ್ರೆ, ಹೇಗೆ ಅನ್ನೋದು ಅನೇಕರ ಐಡಿಯಾ ಆಗಿದೆ. ದಿನ ಬೆಳಗ್ಗೆ 10 ಕಿ.ಮೀ. ಟ್ರೆಡ್‌ಮಿಲ್‌ನಲ್ಲಿ ಓಡಿ, ಸಂಜೆ ಐದು ಕಿ.ಮೀ. ಪಾರ್ಕ್‌ನಲ್ಲಿ ರೌಂಡ್ ಹಾಕೋ ಬದ್ಲು, ಅದೇ 15 ಕಿ.ಮೀ. ಅನ್ನು ಮನೆಯಿಂದ ಕಚೇರಿಗೆ, ಕಚೇರಿಯಿಂದ ಮನೆಗೆ ನಡೆದುಕೊಂಡು ಬಂದ್ರೆ, ಹೇಗೆ ಅನ್ನೋ ಪ್ಲಾನ್ ಅನೇಕರದ್ದಂತೆ. ಆದರೂ ಬ್ರ್ಯಾಂಡ್ ಬೆಂಗಳೂರಿನ ಭಾಗವಾಗಿ ಫುಟ್‌ಪಾತ್ ಅನ್ನು ಸ್ವಲ್ಪ ಅಗಲವಾಗಿ ಮಾಡೋದೇ ಬೆಟರ್ ಅಲ್ವಾ?

ಸಂಪಾದಕರ ಸದ್ಯಶೋಧನೆ

ಸುದೀರ್ಘ ವಾರಸುದಾರ!

ಬ್ರಿಟಿಷ್ ರಾಜಕಾರಣದ ಕೇಂದ್ರಬಿಂದು ಮತ್ತು ಪ್ರಧಾನಿಯ ಅಧಿಕೃತ ನಿವಾಸವಾದ '10, ಡೌನಿಂಗ್ ಸ್ಟ್ರೀಟ್'ಗೆ ಪ್ರಧಾನಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ ಕಳೆದ 14-15 ವರ್ಷಗಳಿಂದ ಅಲ್ಲಿ ಅಲುಗಾಡದೇ 'ಅಧಿಕಾರ' ಚಲಾಯಿಸುತ್ತಿರುವುದು ಮಾತ್ರ ಲ್ಯಾರಿ ಎಂಬ ಬೆಕ್ಕು ಅಂದ್ರೆ ಅಚ್ಚರಿಯಾಗಬಹುದು. ಬ್ರಿಟಿಷ್ ರಾಜಕೀಯದ ಏರಿಳಿತಗಳು, ಆರ್ಥಿಕ ಬಿಕ್ಕಟ್ಟುಗಳು ಮತ್ತು ಆರು ಪ್ರಧಾನಿಗಳ ಬದಲಾವಣೆಗೆ ಸಾಕ್ಷಿಯಾಗಿರುವ ಲ್ಯಾರಿ, ಆ ದೇಶದ ಅತ್ಯಂತ ಪ್ರೀತಿಯ ಮತ್ತು ಚಿರಪರಿಚಿತ ಸಾಕುಪ್ರಾಣಿ! ಲ್ಯಾರಿ '10, ಡೌನಿಂಗ್ ಸ್ಟ್ರೀಟ್' ಪ್ರವೇಶಿಸಿದ್ದು 2011ರ ಫೆಬ್ರವರಿ 15ರಂದು. ಅಂದು ಲಂಡನ್‌ನ ಪ್ರಸಿದ್ಧ 'ಬ್ಯಾಟರ್‌ಸೀ ಡಾಗ್ಸ್ ಆ್ಯಂಡ್ ಕ್ಯಾಟ್ಸ್ ಹೋಮ್'ನಿಂದ ಇವನನ್ನು ದತ್ತು ಪಡೆಯಲಾಗಿತ್ತು. ಡೌನಿಂಗ್ ಸ್ಟ್ರೀಟ್‌ನ ಐತಿಹಾಸಿಕ ಕಟ್ಟಡದಲ್ಲಿ ಇಲಿಗಳ ಹಾವಳಿ ಹೆಚ್ಚಾದಾಗ, ಅವುಗಳನ್ನು ಹಿಡಿಯಲು ಒಂದು ಬೆಕ್ಕಿನ ಅಗತ್ಯವಿತ್ತು. ಹಾಗೆ ಲ್ಯಾರಿ 'ಚೀಫ್ ಮೌಸರ್ ಟು ದಿ ಕ್ಯಾಬಿನೆಟ್ ಆಫೀಸ್' ಎಂಬ ಅಧಿಕೃತ ಪದವಿಯೊಂದಿಗೆ ಅಲ್ಲಿಗೆ ಕಾಲಿಟ್ಟ. ವಿಶೇಷವೆಂದರೆ, 1735ರಿಂದ ಪ್ರಧಾನ ಮಂತ್ರಿಗಳ ಅಧಿಕೃತ ನಿವಾಸವಾಗಿರುವ ಈ ಕಟ್ಟಡದ ಇತಿಹಾಸದಲ್ಲಿ 'ಚೀಫ್ ಮೌಸರ್' ಎಂಬ ಅಧಿಕೃತ ಬಿರುದನ್ನು ಪಡೆದ ಮೊದಲ ಬೆಕ್ಕು ಲ್ಯಾರಿ. ಬ್ರಿಟಿಷ್ ರಾಜಕೀಯವು ಕಳೆದ ಒಂದು ದಶಕದಲ್ಲಿ ತೀವ್ರ ಬದಲಾವಣೆಗಳನ್ನು ಕಂಡಿದೆ. ಬ್ರೆಕ್ಸಿಟ್‌ನಿಂದ ಹಿಡಿದು ಆರ್ಥಿಕ ಕುಸಿತದವರೆಗೆ ಅನೇಕ ಘಟನೆಗಳಾಗಿವೆ. ಈ ಅವಧಿಯಲ್ಲಿ ಡೇವಿಡ್ ಕ್ಯಾಮರೂನ್, ಥೆರೆಸಾ ಮೇ, ಬೋರಿಸ್ ಜಾನ್ಸನ್, ಲಿಜ್ ಟ್ರಸ್, ರಿಷಿ ಸುನಕ್, ಕೀರ್ ಸ್ಟಾರ್ಮರ್ ಹೀಗೆ ಆರು ಪ್ರಧಾನ ಮಂತ್ರಿಗಳು ಬಂದರು. ಆದರೆ ಲ್ಯಾರಿ ಮಾತ್ರ ಹಾಗೇ ಇದ್ದಾನೆ. ಡೇವಿಡ್ ಕ್ಯಾಮರೂನ್ ಪ್ರಧಾನಿಯಾದಾಗ ಲ್ಯಾರಿಯನ್ನು ಕರೆತಂದರು. ಇವರ ಅವಧಿಯಲ್ಲಿ ಮೊದಲ ಬಾರಿಗೆ ಲ್ಯಾರಿ ವಿಶ್ವದ ಗಮನ ಸೆಳೆದ. ನಂತರ ಬಂದ ಐದು ಪ್ರಧಾನಿಗಳನ್ನು ಸ್ವಾಗತಿಸಿದ್ದು ಇದೇ ಬೆಕ್ಕು. ಭಾರತೀಯ ಮೂಲದ ಸುನಕ್ ಅವಧಿಯಲ್ಲೂ ಲ್ಯಾರಿ ತನ್ನ ಪ್ರಾಬಲ್ಯ ಮೆರೆದ. ಥೆರೆಸಾ ಮೇ ಕಾಲದಲ್ಲಿ ಲ್ಯಾರಿ ಮಾಧ್ಯಮಗಳ ಫೇವರಿಟ್ ಆಯಿತು. ಬ್ರಿಟಿಷ್ ಜನರಲ್ಲಿ ಒಂದು ತಮಾಷೆಯ ಮಾತಿದೆ- 'ಪ್ರಧಾನಿಗಳು ಕೇವಲ ಬಾಡಿಗೆದಾರರು, ಆದರೆ ಲ್ಯಾರಿ ಈ ಮನೆಯ ಮಾಲೀಕ!' ಲ್ಯಾರಿ ಕೇವಲ ಪ್ರಧಾನಿಗಳ ಜತೆಗಷ್ಟೇ ಅಲ್ಲ, ಜಗತ್ತಿನ ಪ್ರಭಾವಿ ನಾಯಕರ ಭೇಟಿಯ ಸಮಯದಲ್ಲೂ ತನ್ನ ಅಸ್ತಿತ್ವವನ್ನು ತೋರಿಸಿದ್ದಾನೆ. ಅಮೆರಿಕದ ಮಾಜಿ ಅಧ್ಯಕ್ಷ ಒಬಾಮಾ ಭೇಟಿ ನೀಡಿದಾಗ, ಲ್ಯಾರಿ ಅವರೊಂದಿಗೆ ಸ್ನೇಹದಿಂದಿದ್ದ. ಸಾಮಾನ್ಯವಾಗಿ ಅಪರಿಚಿತರನ್ನು ಕಂಡರೆ ದೂರ ಸರಿಯುವ ಲ್ಯಾರಿ, ಒಬಾಮಾ ಅವರಿಗೆ ಹತ್ತಿರವಾಗಿದ್ದು ಸುದ್ದಿಯಾಗಿತ್ತು. ಡೊನಾಲ್ಡ್ ಟ್ರಂಪ್ ಭೇಟಿಯ ವೇಳೆ ಲ್ಯಾರಿ, ಅವರ ಭದ್ರತಾ ವಾಹನದ ಅಡಿಯಲ್ಲಿ ಹೋಗಿ ಮಲಗಿದ್ದರಿಂದ, ಟ್ರಂಪ್ ಕಾನ್ವಾಯ್ (ಬೆಂಗಾವಲು ವಾಹನಗಳು) ಸ್ವಲ್ಪ ಹೊತ್ತು ನಿಲ್ಲಬೇಕಾಯಿತು. ಪೋಲಿಷ್ ಅಧ್ಯಕ್ಷ ಕರೋಲ್ ನವ್ರೋಕಿ ಅವರನ್ನು ಕೀರ್ ಸ್ಟಾರ್ಮರ್ ಸ್ವಾಗತಿಸುವಾಗಲೂ ಲ್ಯಾರಿ ಗಾಂಭೀರ್ಯದಿಂದ ಕುಳಿತಿದ್ದ ಫೋಟೋಗಳು ವೈರಲ್ ಆಗಿದ್ದವು. ಈಗ ಲ್ಯಾರಿಗೆ ಹತ್ತೊಂಬತ್ತು ವರ್ಷ. ಬೆಕ್ಕುಗಳ ಆಯಸ್ಸಿನ ಲೆಕ್ಕಾಚಾರದಲ್ಲಿ ದೀರ್ಘ ವಯಸ್ಸು. ಮುಂದಿನ ವಾರ ಲ್ಯಾರಿ, '10, ಡೌನಿಂಗ್ ಸ್ಟ್ರೀಟ್'ನಲ್ಲಿ 15 ವರ್ಷಗಳ ಸೇವೆಯನ್ನು ಪೂರೈಸುತ್ತಿದ್ದಾನೆ. ಈ ಮೈಲಿಗಲ್ಲನ್ನು ಗುರುತಿಸಲು ಲ್ಯಾರಿಯ ಹೆಸರಿನಲ್ಲಿರುವ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ವಿಶೇಷ ಪೋಸ್ಟ್‌ಗಳನ್ನು ಹಾಕಲಾಗುತ್ತಿದೆ. ಲಕ್ಷಾಂತರ ಜನರು ಲ್ಯಾರಿಯ ಈ ದೀರ್ಘಾಯುಷ್ಯ ಮತ್ತು ನಿಷ್ಠೆಯನ್ನು ಕೊಂಡಾಡುತ್ತಿದ್ದಾರೆ. ಲ್ಯಾರಿ ಕೇವಲ ಬೆಕ್ಕಲ್ಲ, ಅದೊಂದು ಬ್ರ್ಯಾಂಡ್. 'ಎಕ್ಸ್' (ಟ್ವಿಟರ್)ನಲ್ಲಿ ಲ್ಯಾರಿಗೆ ಸುಮಾರು ಎಂಟು ಲಕ್ಷಕ್ಕೂ ಹೆಚ್ಚು ಅನುಯಾಯಿಗಳಿದ್ದಾರೆ. ಅಲ್ಲಿ ಲ್ಯಾರಿಯ ಹೆಸರಿನಲ್ಲಿ ಬರೆಯಲಾಗುವ ವ್ಯಂಗ್ಯಭರಿತ ಪೋಸ್ಟ್‌ಗಳು ಬ್ರಿಟಿಷ್ ರಾಜಕೀಯದ ಮೇಲಿನ ಲಘುಧಾಟಿಯ ಟೀಕೆಗಳಂತೆ ಇರುತ್ತವೆ. ಉದಾಹರಣೆಗೆ, ಪ್ರಧಾನಿಗಳು ರಾಜೀನಾಮೆ ನೀಡಿದಾಗ, 'ನಾನು ಎಲ್ಲಿಗೂ ಹೋಗುತ್ತಿಲ್ಲ' ಎಂದು ಲ್ಯಾರಿ ಪೋಸ್ಟ್ ಮಾಡುತ್ತಾನೆ! ಲ್ಯಾರಿಯ ಕೆಲಸದ ವೈಖರಿ ಹೇಗಿದೆ? ಅಧಿಕೃತವಾಗಿ ಇಲಿ ಹಿಡಿಯುವುದು ಲ್ಯಾರಿಯ ಕೆಲಸವಾದರೂ, ಇತ್ತೀಚಿನ ವರ್ಷಗಳಲ್ಲಿ ಅವನು ಸ್ವಲ್ಪ 'ಸೋಮಾರಿ'ಯಾಗಿದ್ದಾನೆ ಎಂದು ಹಾಸ್ಯ ಮಾಡಲಾಗುತ್ತಿದೆ. ಆದರೂ, ಡೌನಿಂಗ್ ಸ್ಟ್ರೀಟ್‌ನ ಮುಂಭಾಗದಲ್ಲಿ ಟಿವಿ ವರದಿಗಾರರು ಲೈವ್ ನೀಡುವಾಗ ಅವರ ಕೆಮರಾ ಮುಂದೆ ಗಾಂಭೀರ್ಯದಿಂದ ನಡೆದುಹೋಗುವುದು ಅಥವಾ ಬೀದಿನಾಯಿಗಳನ್ನು ಗದರಿಸಿ ಓಡಿಸುವುದು ಲ್ಯಾರಿಯ ದಿನಚರಿ. ರಾಜಕೀಯ ಅಸ್ಥಿರತೆಗಳ ನಡುವೆಯೂ ಬ್ರಿಟಿಷ್ ಜನತೆಗೆ ಲ್ಯಾರಿ ಒಂದು ಭರವಸೆಯ ಮತ್ತು ಸ್ಥಿರತೆಯ ಸಂಕೇತವಾಗಿ ಕಾಣಿಸುತ್ತಾನೆ.

ರಾಜೀನಾಮೆ ಕೊಡ್ತೀನಂದ್ರಾ ಮಲ್ಲಿಕಾರ್ಜುನ್?

ತಂದೆ ಶಾಮನೂರು ಶಿವಶಂಕರಪ್ಪ ಅವರ ನಿಧನದ ನಂತರ ತಮ್ಮ ಮೇಲೆ ಬಿದ್ದಿರುವ ವ್ಯವಹಾರದ ಹೊರೆಯಿಂದಾಗಿ ಬೇರೆ ಕೆಲಸಗಳನ್ನು ನಿರ್ವಹಿಸಲಾಗುತ್ತಿಲ್ಲ ಎಂಬ ಗ್ರಹಿಕೆಯಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಂತ್ರಿಗಿರಿಯಿಂದ ತಮ್ಮನ್ನು ರಿಲೀವ್ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿದ್ದಾರಂತೆ.

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ರಾಜ್ಯದ ಗಣಿ ಮತ್ತು ಭೂಗರ್ಭ ವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಪ್ರಸಕ್ತ ಬೆಳವಣಿಗೆಗಳ ಬಗ್ಗೆ ಮಾತುಕತೆ ನಡೆಸಿದ ಅವರು, ''ಸರ್, ಮಂತ್ರಿಗಿರಿಯ ಜವಾಬ್ದಾರಿಯಿಂದ ನನ್ನನ್ನು ಬಿಡುಗಡೆ ಮಾಡಿ'' ಅಂತ ಕೇಳಿಕೊಂಡಿದ್ದಾರೆ.

ಮಲ್ಲಿಕಾರ್ಜುನ್ ಅವರು ಹೀಗೆ ಏಕಾಏಕಿಯಾಗಿ ರಾಜೀನಾಮೆಗೆ ರೆಡಿಯಾಗಿದ್ದನ್ನು ಕಂಡು ವಿಸ್ಮಿತರಾದ ಸಿದ್ದರಾಮಯ್ಯ ಅವರು, ''ಅದೇಕ್ರೀ ಮಲ್ಲಿಕಾರ್ಜುನ್, ಮಂತ್ರಿಯಾಗಿ ನಿಮ್ಮ ಪಾಡಿಗೆ ನೀವು ಕೆಲಸ ಮಾಡಿಕೊಂಡು ಹೋಗುತ್ತಿದ್ದೀರಿ. ಅದರಲ್ಲೂ ನೀವು ನೋಡಿಕೊಳ್ಳುತ್ತಿರುವ ಗಣಿ ಖಾತೆ ಎಂದರೆ ವಿವಾದದ ಗೂಡು. ಆದರೆ ಅಂಥ ವಿವಾದದ ಗೂಡನ್ನೇ ತಂಟೆ-ತಕರಾರಿಲ್ಲದೆ ನಿರ್ವಹಿಸಿಕೊಂಡು ಹೋಗುತ್ತಿದ್ದೀರಿ. ಹೀಗಿರುವಾಗ ಮಂತ್ರಿಗಿರಿಯಿಂದ ನಿಮ್ಮನ್ನೇಕೆ ರಿಲೀವ್ ಮಾಡಲಿ? ನೋ, ನೋ, ನಿಮ್ಮ ಪಾಡಿಗೆ ನೀವು ನೆಮ್ಮದಿಯಾಗಿ ಮುಂದುವರಿಯಿರಿ'' ಎಂದರಂತೆ.

ಆದರೆ ಸಿದ್ದರಾಮಯ್ಯ ಅವರು ಹೀಗೆ ಹೇಳಿದಾಗ ಮಲ್ಲಿಕಾರ್ಜುನ್ ಅವರು ಅರೆಕ್ಷಣ ಸುಮ್ಮನಿದ್ದರೂ ನಂತರ ಸಾವರಿಸಿಕೊಂಡು, ''ಸರ್, ಮಂತ್ರಿಗಿರಿಯಿಂದ ನನ್ನನ್ನು ರಿಲೀವ್ ಮಾಡಿ ಅಂತ ಯಾಕೆ ಹೇಳಿದೆ ಎಂದರೆ, ನಮ್ಮ ತಂದೆ ಶಾಮನೂರು ಶಿವಶಂಕರಪ್ಪ ಅವರ ನಿಧನದ ನಂತರ ನನ್ನ ಮೇಲೆ ವ್ಯವಹಾರದ ಹೊರೆ ಬಿದ್ದಿದೆ. ಈ ಹೊರೆ ಯಾವ ಲೆವೆಲ್ಲಿನಲ್ಲಿದೆ ಎಂದರೆ ನನಗೆ ಬೇರೆ ಕೆಲಸಗಳನ್ನು ನಿರ್ವಹಿಸಲೂ ಪುರುಸೊತ್ತಿಲ್ಲದಂತಾಗಿದೆ. ಹೀಗೆ ಪರಿಸ್ಥಿತಿಯ ಒತ್ತಡ ಮಿತಿ ಮೀರಿರುವುದರಿಂದ ನನಗೆ ಮಂತ್ರಿಗಿರಿಯ ಹೊರೆಯನ್ನು ನಿರ್ವಹಿಸುವುದು ಕಷ್ಟವಾಗುತ್ತಿದೆ. ಈ ಕಾರಣಕ್ಕಾಗಿ ನನಗೆ ಮಂತ್ರಿಗಿರಿ ಸಾಕು ಎನ್ನಿಸುತ್ತಿದೆ. ಹೀಗಾಗಿ ನನ್ನನ್ನು ರಿಲೀವ್ ಮಾಡಿ ಎಂಬುದು ನನ್ನ ಕೋರಿಕೆ'' ಎಂದರಂತೆ.

ಆದರೆ ಮಲ್ಲಿಕಾರ್ಜುನ್ ಅವರ ಕೋರಿಕೆಯನ್ನು ಒಪ್ಪದ ಸಿದ್ದರಾಮಯ್ಯ, ''ಈಗ ಅದೆಲ್ಲ ಬೇಕಿಲ್ಲ. ನಿಮ್ಮ ತಂದೆಯವರ ನಿಧನದ ನಂತರ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹತ್ತಿರ ಬರ್ತಿದೆ. ಇಂಥ ಹೊತ್ತಿನಲ್ಲಿ ನೀವು ಮಂತ್ರಿಗಿರಿಗೆ ರಾಜೀನಾಮೆ ಕೊಟ್ಟರೆ ರಾಂಗ್ ಮೆಸೇಜು ಹೋಗುತ್ತದೆ'' ಅಂತ ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ.

ಮೂಲಗಳ ಪ್ರಕಾರ, ಮಲ್ಲಿಕಾರ್ಜುನ್ ಅವರನ್ನು ಮಂತ್ರಿಗಿರಿಯಿಂದ ಬಿಡುಗಡೆ ಮಾಡಲು ಸಿದ್ದರಾಮಯ್ಯ ಒಪ್ಪುತ್ತಿಲ್ಲ ಎಂದರೆ ಶಾಮನೂರು ಸಾಮ್ರಾಜ್ಯಕ್ಕೆ ಅವರ ಕುಟುಂಬದವರನ್ನು ಬಿಟ್ಟು ಬೇರೆಯವರಿಗೆ ಎಂಟ್ರಿ ಕೊಡಲು ಅವರು ತಯಾರಿಲ್ಲ. ನಮಗೇ ಟಿಕೆಟ್ ಬೇಕು ಅಂತ ಮುಸ್ಲಿಮರು ಪಟ್ಟು ಹಿಡಿದಿದ್ದರೂ ಒಪ್ಪಲು ಅವರು ಸಿದ್ಧರಿಲ್ಲ. ಇದೇ ರೀತಿ ಶಾಮನೂರು ಸಾಮ್ರಾಜ್ಯದಲ್ಲಿ ಮಲ್ಲಿಕಾರ್ಜುನ್ ಅವರು ಬಯಸದೆ ಇರುವ ನಾಯಕರು ಆಯಕಟ್ಟಿನ ಜಾಗದಲ್ಲಿ ತುಂಬ ದಿನ ಮುಂದುವರಿಯುವುದು ಕಷ್ಟ.

ರಾಹುಲ್ ಭೇಟಿಗೆ ಸಜ್ಜಾದರು ಸಿದ್ದು

ಈ ಮಧ್ಯೆ ಸಿಎಂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಯವರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ. ಕಾರಣ? ಹಲವು ಕಾಲದಿಂದ ಬಗೆಹರಿಯದೆ ಉಳಿದಿರುವ ಸಂಪುಟ ಪುನಾರಚನೆ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲು ಅವಕಾಶ ಕೊಡಿ ಎಂದು ಕೇಳುವುದು ಈ ಭೇಟಿಯ ಉದ್ದೇಶ.

ಅಂದ ಹಾಗೆ, ಸಂಪುಟದಲ್ಲಿರುವವರ ಪೈಕಿ ಹದಿನೈದು ಮಂದಿಯನ್ನು ತೆಗೆದು, ಖಾಲಿ ಇರುವ ಸ್ಥಾನಗಳೂ ಸೇರಿದಂತೆ ಹದಿನೈದಕ್ಕೂ ಹೆಚ್ಚು ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದು ಸಿದ್ದರಾಮಯ್ಯ ಅವರ ಲೆಕ್ಕಾಚಾರ. ವಾಸ್ತವವಾಗಿ ಈ ಕೆಲಸ ಕಳೆದ ವರ್ಷಾಂತ್ಯದಲ್ಲೇ ಪೂರ್ಣಗೊಳ್ಳಬೇಕಿತ್ತಾದರೂ ನಾಯಕತ್ವದ ವಿಷಯ ಮುನ್ನೆಲೆಗೆ ಬಂದು ಇಡೀ ಪ್ರಕ್ರಿಯೆ ಮುಂದಕ್ಕೆ ಹೋಗಿತ್ತು. ಹೀಗಾಗಿ ಈ ವಿಷಯದಲ್ಲಿ ಕಿರಿಕಿರಿ ಮಾಡಿಕೊಂಡಿರುವ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಯವರನ್ನು ಖುದ್ದಾಗಿ ಭೇಟಿಯಾಗಿ ವಿಷಯ ಸೆಟ್ಲ್ ಮಾಡಲು ತೀರ್ಮಾನಿಸಿದ್ದಾರೆ.

ಮೂಲಗಳ ಪ್ರಕಾರ, ಈಗಾಗಲೇ ರಾಹುಲ್ ಗಾಂಧಿಯವರ ಭೇಟಿಗೆ ಸಮಯ ಕೇಳಿರುವ ಸಿದ್ದರಾಮಯ್ಯ ಅವರು ಇಂಥ ಭೇಟಿಗೆ ಅವಕಾಶ ಸಿಕ್ಕರೆ ಕೆಲ ವಿಷಯಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡಲು ನಿರ್ಧರಿಸಿದ್ದಾರೆ. ಅರ್ಥಾತ್, ''ಈ ಬಾರಿಯ ಬಜೆಟ್ ಅಧಿವೇಶನಕ್ಕಿಂತ ಮುಂಚೆ ಸಂಪುಟ ಪುನಾರಚಿಸಲು ಅವಕಾಶ ಕೊಡಿ. ಇಲ್ಲವೇ ನಾಯಕತ್ವದ ವಿಷಯದಲ್ಲಿ ಗೊಂದಲವಿದೆ ಎನ್ನಿಸಿದರೆ ಶಾಸಕಾಂಗ ಪಕ್ಷದಲ್ಲಿ ವಿಶ್ವಾಸ ಮತ ಯಾಚಿಸಲು ಅವಕಾಶ ಕೊಡಿ'' ಅಂತ ಕೇಳಲಿದ್ದಾರೆ. ಹೇಗಿದ್ದರೂ ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಶಾಸಕಾಂಗ ಪಕ್ಷದಲ್ಲೇ ನಾಯಕನ ಆಯ್ಕೆಯಾಗಿತ್ತಲ್ಲ? ಹೀಗಾಗಿ ಮತ್ತೆ ಅನಿವಾರ್ಯವಾದರೆ ಶಾಸಕಾಂಗ ಪಕ್ಷದಲ್ಲೇ ನಾಯಕನ ಮರು ಆಯ್ಕೆ ಪ್ರಕ್ರಿಯೆ ನಡೆಯಲಿ ಎಂಬುದು ಸಿದ್ದರಾಮಯ್ಯ ಅವರ ವಾದ. ಮುಂದೇನಾಗುತ್ತದೋ ಕಾದು ನೋಡಬೇಕು.

ಕೈ ಎತ್ತಿದ ನಿತಿನ್, ಚೌಹಾಣ್

ಇನ್ನು ರಾಜ್ಯ ಬಿಜೆಪಿಯಲ್ಲಿ ಉಳಿದುಕೊಂಡೇ ಬಂದಿರುವ ನಾಯಕತ್ವದ ವಿಷಯದ ಬಗ್ಗೆ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಮತ್ತು ರಾಜ್ಯ ಬಿಜೆಪಿಯ ಚುನಾವಣಾ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಕೈ ಎತ್ತಿದ್ದಾರೆ.

ಅಂದ ಹಾಗೆ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನಾಯಕತ್ವವನ್ನು ಬದಲಿಸಲು ವರಿಷ್ಠರು ಬಯಸದಿದ್ದರೂ ಬಿಜೆಪಿಯ ಭಿನ್ನರ ಪಡೆ ಮಾತ್ರ ತನ್ನ ಅಹೋರಾತ್ರಿ ಹೋರಾಟವನ್ನು ಮುಂದುವರಿಸಿದೆ. ಅಷ್ಟೇ ಅಲ್ಲ, ''ನೋಡ್ತಾ ಇರಿ, ಮೇ ತಿಂಗಳ ಹೊತ್ತಿಗೆ ವಿಜಯೇಂದ್ರ ಅವರನ್ನು ವರಿಷ್ಠರೇ ಬದಲಿಸುತ್ತಾರೆ'' ಅಂತ ಹೇಳಿಕೊಳ್ಳುತ್ತಿದೆ.

ಹೀಗೆ ಮಾತೆತ್ತಿದರೆ ಭಿನ್ನರು ರವಾನಿಸುತ್ತಿರುವ ಸಂದೇಶದಿಂದ ಕಿರಿಕಿರಿ ಮಾಡಿಕೊಂಡ ಯಡಿಯೂರಪ್ಪ ಕ್ಯಾಂಪು ನೇರವಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಸಂಪರ್ಕಿಸಿದೆ. ಅಷ್ಟೇ ಅಲ್ಲ, ''ನಾಯಕತ್ವದ ವಿಷಯದಲ್ಲಿ ಭಿನ್ನರು ಮೂಡಿಸುತ್ತಿರುವ ಗೊಂದಲಗಳಿಗೆ ತೆರೆ ಎಳೆಯಬೇಕು'' ಅಂತ ಮನವಿ ಮಾಡಿಕೊಂಡಿದೆ. ಆದರೆ ಈ ವಿಷಯ ಬಂದಾಗ ಅಸಹಾಯಕತೆ ವ್ಯಕ್ತಪಡಿಸಿದ ನಿತಿನ್ ನಬಿನ್ ಅವರು, ''ಕರ್ನಾಟಕದಲ್ಲಿ ಪಕ್ಷದ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಚುನಾವಣಾ ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿದೆ. ಅವರು ಈ ಸಂಬಂಧದ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವರದಿ ನೀಡಿದರೆ ನಾನು ಮುಂದಿನ ಹೆಜ್ಜೆ ಇಡಬಹುದು'' ಎಂದಿದ್ದಾರೆ.ಯಾವಾಗ ಅವರು ಚೆಂಡನ್ನು ಶಿವರಾಜ್ ಸಿಂಗ್ ಚೌಹಾಣ್ ಅವರ ಅಂಗಳಕ್ಕೆ ಎಸೆದರೋ, ಆಗ ಪಟ್ಟು ಬಿಡದ ಯಡಿಯೂರಪ್ಪ ಕ್ಯಾಂಪು ನೇರವಾಗಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನೇ ಸಂಪರ್ಕಿಸಿದೆ. ಆದರೆ ಈ ಸಂದರ್ಭದಲ್ಲಿ ಅಸಹಾಯಕತೆ ವ್ಯಕ್ತಪಡಿಸಿದ ಶಿವರಾಜ್ ಸಿಂಗ್ ಚೌಹಾಣ್ ಅವರು, ''ಕರ್ನಾಟಕದ ವಿಷಯದಲ್ಲಿ ಪ್ರಧಾನಿ ನರೇಂದ್ರಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಏನು ಹೇಳುತ್ತಾರೋ ಅದೇ ಫೈನಲ್. ಅವರು ವಿಜಯೇಂದ್ರ ಅವರನ್ನು ಬದಲಿಸಿ ಅಂತ ಹೇಳಿಲ್ಲವಲ್ಲ? ಹೀಗಾಗಿ ನಾನು ಏನೂ ಹೇಳಲಾರೆ. ಆದ್ದರಿಂದ ನೀವು ಅವರ ಬಳಿಯೇ ಮಾತನಾಡಬಹುದು'' ಎಂದಿದ್ದಾರೆ. ಯಾವಾಗ ನಿತಿನ್ ನಬಿನ್ ಮತ್ತು ಶಿವರಾಜ್ ಸಿಂಗ್ ಚೌಹಾಣ್ ಅವರಿಬ್ಬರೂ ಕೈ ಎತ್ತಿದರೋ, ಆಗ ಮುಂದೇನು ಮಾಡಬೇಕೋ ತಿಳಿಯದೆ ಯಡಿಯೂರಪ್ಪ ಕ್ಯಾಂಪು ಮೌನವಾಗಿದೆ.

ಕುಮಾರಣ್ಣ ಕೇಳಿದ್ದು ಎಂಬತ್ಮೂರು

ಈ ಮಧ್ಯೆ ಜಾತ್ಯತೀತ ಜನತಾದಳದ ಕೋರ್ ಕಮಿಟಿ ಆ್ಯಕ್ಟಿವ್ ಆಗಿದೆ. ಕೃಷ್ಣಾರೆಡ್ಡಿ ನಾಯಕತ್ವದ ಕೋರ್ ಕಮಿಟಿ ಹೀಗೆ ಆ್ಯಕ್ಟಿವ್ ಆಗಲು ಪಕ್ಷದ ರಾಜ್ಯಾಧ್ಯಕ್ಷ, ಕೇಂದ್ರ ಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕೊಟ್ಟಿರುವ ಸಿಗ್ನಲ್ಲು ಕಾರಣ. ಮೂಲಗಳ ಪ್ರಕಾರ, ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರನ್ನು ಭೇಟಿ ಮಾಡಿದ್ದ ಕುಮಾರಸ್ವಾಮಿಯವರು ರಾಜ್ಯ ರಾಜಕಾರಣದ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದ 224 ಕ್ಷೇತ್ರಗಳ ಪೈಕಿ ಜೆಡಿಎಸ್‌ಗೆ 83 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ಕೇಳಿದ್ದಾರೆ.

ಇದೇ ರೀತಿ ಬಿಜೆಪಿ-ಜೆಡಿಎಸ್ ಮೈತ್ರಿ ರಾಜ್ಯದ ನೂರೈವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಹೇಗೆ ಗೆಲುವು ಗಳಿಸಲಿದೆ ಎಂಬ ಕುರಿತು ಬ್ಲೂಪ್ರಿಂಟು ನೀಡಿದ್ದಾರೆ. ಹೀಗೆ ಕರ್ನಾಟಕದ ರಾಜಕೀಯದ ಕುರಿತು ಕುಮಾರಸ್ವಾಮಿ ಅವರು ನೀಡಿದ ಚಿತ್ರಣದಿಂದ ಖುಷಿಯಾದ ಪ್ರಧಾನಿ ನರೇಂದ್ರ ಮೋದಿ ಅವರು, ''ನಿಮ್ಮ ಪಕ್ಷಕ್ಕೆ ಎಲ್ಲಿ ಗೆಲುವು ಖಚಿತ ಅನ್ನಿಸುತ್ತದೋ, ಅಲ್ಲೆಲ್ಲ ಸ್ಪರ್ಧಿಸಿ. ನಾನು ನಿಮ್ಮ ಹಿತ ಕಾಯುತ್ತೇನೆ'' ಎಂದಿದ್ದಾರೆ. ಯಾವಾಗ ಅವರು ಈ ಮಾತು ಹೇಳಿದರೋ, ಆಗ ಕುಮಾರಸ್ವಾಮಿ ಅವರು ಪಕ್ಷದ ಕೋರ್ ಕಮಿಟಿಗೆ ಸಿಗ್ನಲ್ಲು ನೀಡಿದ್ದಾರೆ.

ಈ ಸಂದರ್ಭದಲ್ಲಿ ತಮಗೆ ಸಿಗಲಿರುವ ಎಂಬತ್ಮೂರು ಸೀಟುಗಳ ವಿವರ ನೀಡಿ, ''ಈ ಕ್ಷೇತ್ರಗಳಿಗೆ ಭೇಟಿ ನೀಡಿ ಅಲ್ಲಿರುವ ಪ್ಲಸ್ಸು, ಮೈನಸ್ಸುಗಳ ಕುರಿತು ವರದಿ ನೀಡಿ'' ಎಂದಿದ್ದಾರೆ. ಹೀಗೆ ಕುಮಾರಸ್ವಾಮಿ ಅವರು ಸಿಗ್ನಲ್ಲು ಕೊಟ್ಟ ನಂತರ ಕೃಷ್ಣಾ ರೆಡ್ಡಿ ಅಧ್ಯಕ್ಷತೆಯ ಕೋರ್ ಕಮಿಟಿ ರಾಜ್ಯ ಪ್ರವಾಸಕ್ಕೆ ಸಜ್ಜಾಗತೊಡಗಿದೆ.

ಲಾಸ್ಟ್ ಸಿಪ್: ಅಂದ ಹಾಗೆ, 2026-27ನೇ ಸಾಲಿನ ಬಜೆಟ್ ಮಂಡನೆಗೆ ತಯಾರಿ ಆರಂಭಿಸಿರುವ ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರಿಗೆ ಸವಾಲಿನ ಮೇಲೆ ಸವಾಲು ಎದುರಾಗತೊಡಗಿದೆ. ಕೇಂದ್ರದ ಜಿಎಸ್‌ಟಿ ನೀತಿ, ಅನುದಾನ ಹಂಚಿಕೆಯ ರೀತಿಯಿಂದ ರಾಜ್ಯದ ಬೊಕ್ಕಸಕ್ಕೆ ಬಿದ್ದಿರುವ ಹೊಡೆತ ಒಂದು ಕಡೆಯಾದರೆ, ಮತ್ತೊಂದು ಕಡೆಯಿಂದ ಟ್ರಂಪಾಘಾತ ಶುರುವಾಗಿದೆ. ಅರ್ಥಾತ್, ಭಾರತ-ಅಮೆರಿಕದ ನಡುವಣ ವ್ಯಾಪಾರ ಒಪ್ಪಂದದ ನಂತರ ಹತ್ತಿ, ಸೋಯಾಬಿನ್ ಸೇರಿದಂತೆ ಹಲವು ಉತ್ಪನ್ನಗಳು ಶೂನ್ಯ ತೆರಿಗೆ ಬೆಂಬಲದೊಂದಿಗೆ ಭಾರತಕ್ಕೆ ಆಮದಾಗಲಿವೆ. ಹೀಗೆ ಹತ್ತಿ ಸೇರಿದಂತೆ ಹಲವು ಉತ್ಪನ್ನಗಳು ಆಮದಾಗತೊಡಗಿದರೆ ಕರ್ನಾಟಕದ ರೈತರಿಗೆ ಹೊಡೆತ ಬೀಳುತ್ತದೆ. ದಾವಣಗೆರೆಯಿಂದ ಮುಂದೆ ಬಹುತೇಕ ಜಿಲ್ಲೆಗಳಲ್ಲಿ ಉತ್ಪಾದನೆಯಾಗುತ್ತಿರುವ ಹತ್ತಿ ಲಕ್ಷಾಂತರ ಕುಟುಂಬಗಳಿಗೆ ಆಸರೆ ಒದಗಿಸಿದೆ. ಇಂಥ ಸಂದರ್ಭದಲ್ಲಿ ಅಗ್ಗದ ಬೆಲೆಗೆ ಅಮೆರಿಕದ ಹತ್ತಿ ಆಮದಾಗತೊಡಗಿದರೆ ಕರ್ನಾಟಕದ ಹತ್ತಿ ಬೆಳೆಗಾರರು ಬೀದಿಗೆ ಬರುತ್ತಾರೆ. ಇದು ಕೇವಲ ಹತ್ತಿ ಮಾತ್ರವಲ್ಲ, ಇಂಥ ಹಲವಾರು ಬೆಳೆಗಳನ್ನು ಉತ್ಪಾದಿಸುವ ರೈತರ ಕತೆ ಹೀಗೇ ಆಗುತ್ತದೆ.

ಇಂಥ ಸ್ಥಿತಿಯಲ್ಲಿ ಕರ್ನಾಟಕದ ರೈತರ ಹಿತ ಕಾಪಾಡಲು ಬಜೆಟ್ ಆಸರೆ ನೀಡುವುದು, ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದವನ್ನು ವಿರೋಧಿಸುವುದು ಅನಿವಾರ್ಯ ಎಂಬುದು ಸಿದ್ದು ಯೋಚನೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಡಿವಾಣ ಹಾಕಬೇಕಿದೆ

ಘಾಜಿಯಾಬಾದ್‌ನಲ್ಲಿ ಮೂವರು ಸೋದರಿಯರು 'ಕೊರಿಯನ್ ಲವರ್ ಗೇಮ್' ಎಂಬ ಆನ್‌ಲೈನ್ ಗೇಮ್ ವ್ಯಸನಕ್ಕೆ ಬಿದ್ದು ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಂಡಿರುವುದು ದುರದೃಷ್ಟಕರ. ಈ ಆನ್‌ಲೈನ್ ಗೇಮ್‌ಗಳು ವ್ಯಕ್ತಿಯೊಬ್ಬರ ಜೀವನ ಮತ್ತು ಜೀವ ಎರಡನ್ನೂ ಕಸಿದುಕೊಳ್ಳುವ ಹಂತಕ್ಕೆ ತಲುಪಿರುವುದು ವಿಷಾದನೀಯ. ಮೊದಲೆಲ್ಲಾ ಮಕ್ಕಳು ಅತ್ತರೆ ರಮಿಸಲಿಕ್ಕೆ, ಊಟ ಮಾಡಿಸಲಿಕ್ಕೆ ಪೋಷಕರು ಸೂರ್ಯ-ಚಂದ್ರ-ತಾರೆಯರನ್ನು ತೋರಿಸುವ, ಸಣ್ಣ ಕಥೆ ಹೇಳುವ, ಜೋಗುಳ ಹಾಡುವ ಪರಿಪಾಠವಿತ್ತು. ಆದರೆ ಇತ್ತೀಚಿನ ಬಿಡುವಿಲ್ಲದ ದಿನಗಳಲ್ಲಿ, ಅಳುವ ಮಕ್ಕಳಿಗೆ ಸ್ಮಾರ್ಟ್‌ಫೋನ್ ಕೊಟ್ಟು ಸಮಾಧಾನ ಮಾಡುವುದು ಸಾಮಾನ್ಯವಾಗಿದೆ. ಮಕ್ಕಳಿಗೆ ಮೊಬೈಲ್ ವ್ಯಸನ ಆರಂಭವಾಗುವುದು ಇಲ್ಲಿಂದಲೇ. ಇನ್ನು ಶಾಲಾ-ಕಾಲೇಜುಗಳು ಅಥವಾ ಕೋಚಿಂಗ್ ಸೆಂಟರ್‌ಗಳು ಹಮ್ಮಿಕೊಳ್ಳುವ ಹೆಚ್ಚುವರಿ/ವಿಶೇಷ ತರಗತಿಗಳು ಸ್ಮಾರ್ಟ್‌ಫೋನ್ ಮೂಲಕವೇ ನಡೆಯುವುದರಿಂದ ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್ ಎಂಬುದು 'ಅವಶ್ಯಕತೆ'ಯ ವ್ಯಾಪ್ತಿಗೆ ಬಂದುಬಿಟ್ಟಿದೆ. ಆದರೆ, ಮೊಬೈಲ್ ಬಳಕೆಯಿಂದ ಉಪಯೋಗ ಇರುವಂತೆ ಅಪಾಯವೂ ಉಂಟು; ಇದನ್ನರಿತು ಹಿತಮಿತವಾಗಿ ಬಳಸಿದರೆ ಮಾತ್ರವೇ ಸಂಭಾವ್ಯ ಅಪಾಯಗಳಿಂದ ಪಾರಾಗಬಹುದು. ಆದ್ದರಿಂದ, ಪೋಷಕರು ಈ ಸೂಕ್ಷ್ಮತೆಯನ್ನು ಗಮನಕ್ಕೆ ತಂದುಕೊಂಡು, ಮಕ್ಕಳು ಇಂಥ ವ್ಯಸನಗಳಿಗೆ ಬೀಳದಂತೆ ಎಚ್ಚರಿಕೆ ವಹಿಸಬೇಕು. ಮತ್ತೊಂದೆಡೆ, ಜೀವ ತೆಗೆಯುವಂಥ ಆನ್‌ಲೈನ್ ಗೇಮ್‌ಗಳಿಗೆ ಆಳುಗ ವ್ಯವಸ್ಥೆಯು ಕಾನೂನಾತ್ಮಕವಾಗಿ ಕಡಿವಾಣ ಹಾಕಬೇಕಾದ ಅಗತ್ಯವೂ ಇದೆ.

- ರಾಘವೇಂದ್ರ ಜೋಯಿಸ್, ಮೈಸೂರು

ಪ್ರಶಸ್ತಿ ಗೆದ್ದ ಸಾಮಾನ್ಯರು

ಸುರೇಂದ್ರ ಪೈ ಅವರು ತಮ್ಮ 'ಯುವಶಕ್ತಿ' ಅಂಕಣದಲ್ಲಿ (ಫೆ.8) 'ಜೆನ್-ಝಿ' ಪೀಳಿಗೆಗೆ ಪ್ರೇರಣೆಯಾದ 'ಪದ್ಮ ಪ್ರಶಸ್ತಿ'ಗಳ ಬಗ್ಗೆ ವಿಶ್ಲೇಷಣಾತ್ಮಕ ಮಾಹಿತಿ ನೀಡಿದ್ದಾರೆ. ಒಂದು ಕಾಲಕ್ಕೆ ನಮ್ಮ ದೇಶದಲ್ಲಿ ಪ್ರಶಸ್ತಿ-ಪುರಸ್ಕಾರಗಳು ಕೆಲವೇ ವರ್ಗದವರ ಸ್ವತ್ತಾಗಿದ್ದವು, ಸಾಮಾನ್ಯರಿಗೆ ಗಗನಕುಸುಮವಾಗಿದ್ದವು. ಇವನ್ನು ಪಡೆಯಲು ನಿಜವಾದ ಅರ್ಹತೆಗಿಂತ, ಹಿನ್ನೆಲೆಯಲ್ಲಿ ಬೀರಿದ ಪ್ರಭಾವವೇ ಜಾಸ್ತಿ ಕೆಲಸ ಮಾಡುತ್ತಿತ್ತು. ಅಷ್ಟೇಕೆ, ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸ್ವಂತಕ್ಕೇ 'ಭಾರತ ರತ್ನ' ಪ್ರಶಸ್ತಿಯನ್ನು ಘೋಷಿಸಿಕೊಂಡ ದೃಷ್ಟಾಂತಗಳೂ ನಮ್ಮಲ್ಲಿವೆ! ಆದರೆ ಈಗ ಕಾಲ ಬದಲಾಗಿದೆ. ಮನುಕುಲಕ್ಕೆ, ಪರಿಸರಕ್ಕೆ, ಪ್ರಾಣಿ-ಪಕ್ಷಿಗಳಿಗೆ, ಮಹಿಳೆಯರು-ಮಕ್ಕಳ ಒಳಿತಿಗೆ, ಜಲಸಂರಕ್ಷಣೆಗೆ, ಕೃಷಿ, ವಿಜ್ಞಾನ, ವೈದ್ಯಕೀಯ ಕ್ಷೇತ್ರಕ್ಕೆ, ಒಟ್ಟಿನಲ್ಲಿ ಇಡೀ ದೇಶದ ಒಳಿತಿಗಾಗಿ ಶ್ರಮಿಸುವವರು ದೇಶದ ಯಾವ್ಯಾವುದೋ ಮೂಲೆಯಲ್ಲಿರುವುದನ್ನು ಕೇಂದ್ರ ಸರಕಾರ ಗಮನಿಸಿ-ಗುರುತಿಸಿ, ಅವರನ್ನು ಯೋಗ್ಯ ರೀತಿಯಲ್ಲಿ ಸನ್ಮಾನಿಸುವ ಹೊಸ ಪದ್ಧತಿಯನ್ನು ಅನುಸರಿಸುತ್ತಿದೆ. ಇದು ನಿಜಕ್ಕೂ ಸ್ತುತ್ಯರ್ಹ. ಶ್ರೀಸಾಮಾನ್ಯರೂ ದೇಶದ ಪ್ರತಿಷ್ಠಿತ 'ಪದ್ಮ ಪ್ರಶಸ್ತಿ'ಗಳಿಗೆ ಅರ್ಹರಾಗಿ ಅವನ್ನು ಸ್ವೀಕರಿಸುವಂತಾದಲ್ಲಿ, ತಂತಮ್ಮ ಕ್ಷೇತ್ರಗಳಲ್ಲಿ ಅವರು ಇನ್ನಷ್ಟು ಹುರುಪಿನಿಂದ ತೊಡಗಿಸಿಕೊಳ್ಳಲು ಅದು ನೆರವಾಗುತ್ತದೆ. 'ಅರ್ಹರು ಪ್ರಶಸ್ತಿ ಗಳಿಸಿದಲ್ಲಿ, ಪ್ರಶಸ್ತಿಗೇ ಮೆರುಗು' ಎಂಬ ಮಾತು ಸತ್ಯ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಸ್ವಾರಸ್ಯಕರ ಬರಹ

ಶ್ರೀವತ್ಸ ಜೋಶಿಯವರು ತಮ್ಮ ಅಂಕಣ ಬರಹಕ್ಕೆ ಯಾವುದೇ ವಿಷಯವನ್ನು ಆಯ್ದುಕೊಂಡರೂ, ಕೊನೆಯವರೆಗೂ ರುಚಿಕಟ್ಟಾಗಿ ಅದನ್ನು ಸಾದರಪಡಿಸಿಕೊಂಡು ಹೋಗುವ ಕೌಶಲವನ್ನು ರೂಢಿಸಿಕೊಂಡಿದ್ದಾರೆ. ಅವಕಾಡೊ ಹಣ್ಣಿನ ಕುರಿತಾದ ಅವರ 'ತಿಳಿರು ತೋರಣ' ಅಂಕಣವೇ (ಫೆ.8) ಈ ಮಾತಿಗೆ ಸಾಕ್ಷಿ. ಇಂಥ ಬರಹಗಳು ಹೆಚ್ಚೆಚ್ಚು ಮೂಡಿಬರಲಿ.

- ರಾಮಕೃಷ್ಣಯ್ಯ ಬಿ.ಎನ್., ಬೆಳಗಾವಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಇನ್ನಾದರೂ ಆತ್ಮಾವಲೋಕನ ಮಾಡಿಕೊಂಡರೆ ಒಳಿತು

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳಾದವು. ಈ ಅವಧಿಯಲ್ಲಿ ಕಾಂಗ್ರೆಸ್ಸಿಗರು ಇದೇ ಮೊದಲ ಬಾರಿಗೆ 13 ವರ್ಷದಿಂದ ಅಧಿಕಾರವಿಲ್ಲದೆ ವಿಲವಿಲ ಒದ್ದಾಡುತ್ತಿದ್ದಾರೆ. 1947ರಿಂದ 1977ರ ತನಕ ಮೂವತ್ತು ವರ್ಷಗಳವರೆಗೆ ಸತತವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್ಸಿಗರಿಗೆ 1975ರ ತುರ್ತು ಪರಿಸ್ಥಿತಿಯು ಮುಳುವಾಗಿ, 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಮೊದಲ ಬಾರಿಗೆ ಸೋಲಿನ ರುಚಿ ಕಂಡರು.

ಅಧಿಕಾರಕ್ಕೆ ಬಂದ ಜನತಾ ಪಾರ್ಟಿಯ ಸರಕಾರವನ್ನು ಇಂದಿರಾ ಗಾಂಧಿಯವರು ಕೇವಲ 30 ತಿಂಗಳಲ್ಲಿ ಕೆಡವಿದರು. ಸೋಲುತ್ತಿದ್ದಂತೆ 'ಎಲ್ಲ ಮುಗಿಯಿತು' ಎಂದು ಅವರೆಂದೂ ಕುಗ್ಗಲೇ ಇಲ್ಲ; ಗೆಲ್ಲುವ ತಂತ್ರವನ್ನು ಕೈಗೊಂಡು 1980ರಲ್ಲಿ ಮತ್ತೆ ಅಧಿಕಾರಕ್ಕೆ ಬಂದರು. 1989ರಲ್ಲಿ ವಿ.ಪಿ. ಸಿಂಗ್ ಅವರು ಬಿಜೆಪಿ ಮತ್ತು ಎಡಪಕ್ಷಗಳ ಬಾಹ್ಯ ಬೆಂಬಲದೊಂದಿಗೆ ಸರಕಾರವನ್ನು ರಚಿಸಿದರು. ಆದರೆ ಇದು 1977ರ ಜನತಾ ಪಕ್ಷದ ಸರಕಾರಕ್ಕಿಂತ ಅಧ್ವಾನವಾಗಿ ಎರಡೇ ವರ್ಷದಲ್ಲಿ ನೆಲಕಚ್ಚಿತು; ಸಿಂಗ್ ಅವರು ರಾಮ ರಥಯಾತ್ರಾ/ಅಯೋಧ್ಯಾ ಹೋರಾಟವನ್ನು ತುಳಿಯಲು ಮುಂದಾಗಿ ಬಹುಮತವನ್ನು ಕಳೆದುಕೊಂಡರು. ರಾಜೀವ್ ಗಾಂಧಿಯವರು ಜನತಾದಳ ನಾಯಕರ ದೌರ್ಬಲ್ಯವನ್ನು ಬಳಸಿಕೊಂಡು, ಸರಕಾರವು ತನ್ನ ಭಾರಕ್ಕೆ ತಾನೇ ಕುಸಿಯುವ ಹಾಗೆ ಮಾಡಿದರು.

1991ರ ಲೋಕಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ ರಾಜೀವ್ ಗಾಂಧಿಯವರು ಎಲ್‌ಟಿಟಿಇ ಆತ್ಮಾಹುತಿ ಬಾಂಬ್ ದಾಳಿಗೆ ಸಿಲುಕಿ ಹತರಾದಾಗ, ಅನಾರೋಗ್ಯದ ಕಾರಣ ರಾಜಕೀಯದಲ್ಲಿ ಸಕ್ರಿಯರಾಗಿರದಿದ್ದ ಪಿ.ವಿ. ನರಸಿಂಹರಾವ್ ಅವರನ್ನು ವಾಪಸ್ ಕರೆತಂದ ಕಾಂಗ್ರೆಸ್ ಪಕ್ಷವು 244 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿತು. 1996ರ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 140 ಸ್ಥಾನಗಳನ್ನು ದಕ್ಕಿಸಿಕೊಂಡು ಸೋಲನ್ನು ಅನುಭವಿಸಿತು. ಬಿಜೆಪಿಯು ಮೊಟ್ಟಮೊದಲ ಬಾರಿಗೆ 160 ಸ್ಥಾನಗಳನ್ನು ಗೆದ್ದು ಏಕೈಕ ದೊಡ್ಡ ಪಕ್ಷವಾಯಿತು. ಯಾವ ಪಕ್ಷಕ್ಕೂ ಬಹುಮತವಿಲ್ಲದ ಕಾರಣ, ಜನತಾದಳ ಮತ್ತು ಇತರ ಪ್ರಾದೇಶಿಕ ಪಕ್ಷಗಳು ಸೇರಿ ರಚಿಸಿಕೊಂಡಿದ್ದ 'ಯುನೈಟೆಡ್ ಫ್ರಂಟ್' ಒಕ್ಕೂಟಕ್ಕೆ ಕಾಂಗ್ರೆಸ್ ಪಕ್ಷವು ಬಾಹ್ಯ ಬೆಂಬಲ ನೀಡಿ, ದೇವೇಗೌಡರ ನೇತೃತ್ವದ ಸರಕಾರದ ರಚನೆಗೆ ಕಾರಣವಾಯಿತು. 11 ತಿಂಗಳ ನಂತರ ಅವರನ್ನು ಕೆಳಗಿಳಿಸಿ ಐ.ಕೆ. ಗುಜ್ರಾಲರನ್ನು ಪ್ರಧಾನಿಯನ್ನಾಗಿಸಲಾಯಿತು, ಆದರೆ ಈ ಪ್ರಯೋಗ ವಿಫಲಗೊಂಡಿತು.

1998ರಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟವು ಸರಕಾರವನ್ನು ರಚಿಸಿತು. ರಾಜಕೀಯ ಬೇಡವೆಂದು 7 ವರ್ಷ ಕಾಲ ದೂರವಿದ್ದ ಸೋನಿಯಾ ಗಾಂಧಿಯವರು ಮರಳಿ ಬಂದು ಕಾಂಗ್ರೆಸ್ ಪಕ್ಷವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ವಾಜಪೇಯಿ ಸರಕಾರವು ಅಲ್ಪಾಯುಷಿಯಾಗಿ ಒಂದು ವೋಟಿನಿಂದ ಒಂದೇ ವರ್ಷದಲ್ಲಿ ಪತನವಾಯಿತು. 1999ರಲ್ಲಿ ಎನ್‌ಡಿಎ ಒಕ್ಕೂಟವು 303 ಸ್ಥಾನಗಳನ್ನು ಗೆದ್ದು ಮತ್ತೆ ಅಧಿಕಾರಕ್ಕೆ ಬಂದಿತು. ಸೋನಿಯಾ ಗಾಂಧಿಯವರು ಮೊದಲ ಬಾರಿಗೆ ಪಾರ್ಲಿಮೆಂಟ್ ಪ್ರವೇಶಿಸಿ ವಿರೋಧ ಪಕ್ಷದ ನಾಯಕಿಯಾದರು. 2004ರಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟವು ಅಧಿಕಾರವನ್ನು ಕಳೆದುಕೊಂಡಿತು. ಯುಪಿಎ ಒಕ್ಕೂಟದ ಕೈಗೆ ಅಧಿಕಾರದ ಚುಕ್ಕಾಣಿ ಸಿಕ್ಕಾಗ, ವಿದೇಶಿ ಮೂಲದ ಮಹಿಳೆಯು ಪ್ರಧಾನಿಯಾಗುವುದಕ್ಕೆ ಇದ್ದ ಪ್ರಬಲ ವಿರೋಧವನ್ನು ಗಮನಿಸಿದ ಸೋನಿಯಾ, ರಾಜಕೀಯವಾಗಿ ದುರ್ಬಲರಾಗಿದ್ದ ಮನಮೋಹನ್ ಸಿಂಗ್‌ರನ್ನು ಪ್ರಧಾನಿಯಾಗಿ ನೇಮಕ ಮಾಡಿದರು. ಸೋನಿಯಾರ ಅಧಿಕೃತ ನಿವಾಸವು ಹತ್ತು ವರ್ಷಗಳ ಕಾಲ ಅಧಿಕಾರದ ಕೇಂದ್ರಬಿಂದುವಾಯಿತು. ರಾಹುಲ್ ಗಾಂಧಿಯವರು ತಮ್ಮ ಅಹಂನಿಂದಾಗಿ, ಸರಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸುವ ಆಡಳಿತಾನುಭವ ಪಡೆಯುವ ಸದವಕಾಶವನ್ನು ಕಳೆದುಕೊಂಡರು. ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್‌ರನ್ನು ನಾಯಕರಾಗಲೂ ಬಿಡಲಿಲ್ಲ ಅಥವಾ ಪರ್ಯಾಯ ನಾಯಕತ್ವ ನೀಡಲೂ ಆಗಲಿಲ್ಲ.

ನರೇಂದ್ರ ಮೋದಿಯವರು 2012ರಲ್ಲಿ ದೆಹಲಿ ರಾಜಕಾರಣದತ್ತ ಮುಖಮಾಡುತ್ತಿದ್ದಂತೆ, ಅವರ ಆಕ್ರಮಣಕಾರಿ ನಾಯಕತ್ವದ ಮುಂದೆ ಕಾಂಗ್ರೆಸ್ ಪಕ್ಷ ಮಂಕಾಗಿ ಹೋಯಿತು. ಅನೇಕ ಹಿರಿಯ/ಪ್ರಭಾವಿ ಮುಖಂಡರು ಪಕ್ಷವನ್ನು ತೊರೆದುಹೋಗುತ್ತಿದ್ದರೂ, ಅವರನ್ನು ಉಳಿಸಿಕೊಳ್ಳುವ ಪ್ರಯತ್ನಗಳಾಗಲಿಲ್ಲ. ಜನಾಕರ್ಷಣೆಯ ನಾಯಕತ್ವ ಇಲ್ಲವಾಗಿ ಚುನಾವಣೆಯಿಂದ ಚುನಾವಣೆಗೆ ಪಕ್ಷವು ದುರ್ಬಲವಾಗುತ್ತಾ ಹೋಯಿತು. 2014ರ ನಂತರ ಕಾಂಗ್ರೆಸ್‌ನ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿತರಾದ ರಾಹುಲ್ ಗಾಂಧಿಯವರಿಗೆ, ತಮ್ಮ ಪಕ್ಷಕ್ಕೆ ಹಳೆಯ ವೈಭವವನ್ನು ತಂದುಕೊಡಲು ಸಾಧ್ಯವಾಗಿಲ್ಲ. 2014ರಲ್ಲಿ 44 ಸ್ಥಾನ, 2019ರಲ್ಲಿ 52 ಸ್ಥಾನ, 2024ರಲ್ಲಿ 99 ಸ್ಥಾನ ಗೆದ್ದ ಕಾಂಗ್ರೆಸ್ ಪಕ್ಷಕ್ಕೆ ಬಹುಮತದ ಸಮೀಪವೂ ಬರಲಾಗಿಲ್ಲ.

ಕಳೆದ 12 ವರ್ಷಗಳ ಇತಿಹಾಸವನ್ನು ಕೆದಕಿದರೆ, ಕಾಂಗ್ರೆಸ್ ಪಕ್ಷವು 3 ಲೋಕಸಭಾ ಚುನಾವಣೆಗಳಲ್ಲಿ ಸೋತಿದೆ. ದೆಹಲಿ ವಿಧಾನಸಭಾ ಚುನಾವಣೆಯಲ್ಲಿ 3 ಬಾರಿ ಶೂನ್ಯ ಸಂಪಾದನೆ ಮಾಡಿದೆ. ಇದರದ್ದು ಪಶ್ಚಿಮ ಬಂಗಾಳದಲ್ಲೂ 'ಶೂನ್ಯಸ್ಥಾನ'! ಉತ್ತರ ಪ್ರದೇಶದಲ್ಲಿ 4 ಸ್ಥಾನ, ಬಿಹಾರದಲ್ಲಿ 6 ಸ್ಥಾನ ಹೀಗೆ ಅನೇಕ ರಾಜ್ಯಗಳಲ್ಲಿ ಒಂದಂಕಿಗೆ ಕುಸಿದಿರುವ ಕಾಂಗ್ರೆಸ್‌ಗೆ, ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶವನ್ನು ಹೊರತುಪಡಿಸಿ ಬೇರೆಲ್ಲೂ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲಾಗಿಲ್ಲ ಮತ್ತು ಈಶಾನ್ಯ ರಾಜ್ಯಗಳಲ್ಲಿ ಅದು ಸಂಪೂರ್ಣ ನೆಲಕಚ್ಚಿದೆ. ಇತ್ತೀಚೆಗೆ ನಡೆದ ಮುಂಬಯಿ ಮಹಾನಗರಪಾಲಿಕೆ, ಅರುಣಾಚಲ ಪ್ರದೇಶ ಮತ್ತು ಗೋವಾ ಪಂಚಾಯತ್ ಚುನಾವಣೆಗಳಲ್ಲೂ ಕಾಂಗ್ರೆಸ್ ಹೀನಾಯ ಸೋಲನ್ನು ಅನುಭವಿಸಿದೆ.

2019ರಲ್ಲಿ, ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿ ಭ್ರಷ್ಟಾಚಾರವಾಗಿದೆ ಎಂದು ಆರೋಪಿಸಿ, ಮೋದಿಯವರನ್ನು 'ಚೌಕಿದಾರ್ ಚೋರ್' ಎಂದು ಅಪಪ್ರಚಾರ ಮಾಡಲಾಯಿತು ಕಾಂಗ್ರೆಸ್ ವತಿಯಿಂದ. ಆದರೆ 2014ರ ಚುನಾವಣೆಯಲ್ಲಿ ಜನರು ಮೋದಿಯವರಿಗೆ 282 ಸ್ಥಾನವನ್ನು ಕೊಟ್ಟರು, 2019ರಲ್ಲಿ 303 ಸ್ಥಾನದಲ್ಲಿ ಗೆಲ್ಲಿಸಿದರು. 2024ರ ಚುನಾವಣೆಯ ವೇಳೆ 'ಸಂವಿಧಾನವು ಅಪಾಯದಲ್ಲಿದೆ' ಎಂಬುದು ಕಾಂಗ್ರೆಸ್‌ನ ಅಪಪ್ರಚಾರವಾಗಿತ್ತು; ಆದರೆ ಈ ತಂತ್ರಗಾರಿಕೆಯು ವಿಫಲವಾಗಿ ಎನ್‌ಡಿಎ ಒಕ್ಕೂಟ ಅಧಿಕಾರಕ್ಕೆ ಬಂದಿತು. 99 ಸ್ಥಾನಗಳನ್ನು ಗೆದ್ದ ನಂತರ ಕಾಂಗ್ರೆಸ್ ಪಕ್ಷವು ಚೇತರಿಕೆಯ ಹಾದಿಯನ್ನು ಹಿಡಿಯಬೇಕಿತ್ತು; ಆದರೆ ತದನಂತರ ನಡೆದ ಹರಿಯಾಣ, ಮಹಾರಾಷ್ಟ್ರ, ಜಮ್ಮು-ಕಾಶ್ಮೀರ ಮತ್ತು ಬಿಹಾರ ಚುನಾವಣೆಗಳಲ್ಲಿ ಅದು ಘೋರ ಪರಾಭವವನ್ನು ಅನುಭವಿಸಿತು, ಲೋಕಸಭಾ ಚುನಾವಣೆಯಲ್ಲಿನ ಲಾಭವನ್ನು ಸಂಪೂರ್ಣ ಅಳಿಸಿಹಾಕಿತು. ಜಾತಿ ಜಾತಿಗಳ ನಡುವೆ ವಿಷಬೀಜ ಬಿತ್ತುವ ಅಪಾಯಕರ ಪ್ರಯತ್ನ ಮಾಡಿದರೂ ಕಾಂಗ್ರೆಸ್ಸಿಗರು ಬಿಹಾರದ ಚುನಾವಣೆಯಲ್ಲಿ ಸೋತರು. ಇನ್ನು, 'ಬಿಜೆಪಿಯು ವಿದ್ಯುನ್ಮಾನ ಮತಯಂತ್ರವನ್ನು ತಿರುಚಿ ಚುನಾವಣೆಗಳನ್ನು ಗೆಲ್ಲುತ್ತಿದೆ' ಎಂಬ ಕಾಂಗ್ರೆಸ್ಸಿಗರ ಆರೋಪ ಹಳಸಲಾಗಿ, ಜನರು ಅದನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಮತಪಟ್ಟಿಯಲ್ಲಿ ಕಂಡುಬಂದ ದೋಷವನ್ನು 'ಮತಗಳ್ಳತನ' ಎಂದು ವ್ಯಾಖ್ಯಾನಿಸಿ, ಚುನಾವಣಾ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸವನ್ನು ಕಳೆಯುವ ಕಾಂಗ್ರೆಸ್ಸಿಗರ ಹುನ್ನಾರವು ಸೂಕ್ತ ಸಾಕ್ಷ್ಯವಿಲ್ಲದೆ 'ಠುಸ್' ಎಂದಿತು.

ಈಗ ಕಾಂಗ್ರೆಸ್ಸಿಗರು ಅರಾಜಕತೆಯನ್ನು ಹುಟ್ಟುಹಾಕುವ ಪ್ರಯತ್ನದಲ್ಲಿದ್ದಾರೆ. ಇದರ ಭಾಗವಾಗಿಯೇ ಲೋಕಸಭೆಯಲ್ಲಿ ಪ್ರಧಾನಿಯವರ ಮೇಲೆ ಹಲ್ಲೆ ಮಾಡುವ ಕುತಂತ್ರಕ್ಕೆ ಮುಂದಾಗಿರುವುದು, ಕ್ಷುಲ್ಲಕ ಕಾರಣಕ್ಕೆ ಕಲಾಪ ನಡೆಯದಂತೆ ಗದ್ದಲವೆಬ್ಬಿಸುತ್ತಿರುವುದು. ಸಾಮಾಜಿಕ ಜಾಲತಾಣಗಳಲ್ಲಿ ಮನಸ್ಸಿಗೆ ತೋಚಿದಂತೆ ಟೀಕಿಸಿ, ಅವಹೇಳನಕಾರಿ ಮೀಮ್‌ಗಳನ್ನು ಹರಿಬಿಟ್ಟರೆ ಜನರ ವಿಶ್ವಾಸವನ್ನು ಗಳಿಸಬಹುದು ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ತೇಲಾಡುತ್ತಿದೆ. 'ಸಂಸತ್ತಿನಲ್ಲಿ ಓಡಿಸಿ ಆಗಿದೆ, ಬಾಕಿ ಉಳಿದಿರುವುದು ಪ್ರಧಾನಿ ಸ್ಥಾನದಿಂದ' ಅಂತ ಕಾಂಗ್ರೆಸ್ ವಕ್ತಾರ ಪವನ್ ಖೇರಾ 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಬರೆದುಕೊಳ್ಳುತ್ತಾರೆ. ಇದು ನಗರಪಾಲಿಕೆ ಚುನಾವಣೆಯಲ್ಲಿಯು ಗೆಲ್ಲಲು ವಿಫಲರಾದವರ ಠೇಂಕಾರ.

ಮೋದಿಯವರನ್ನು ಮಣಿಸಲು ಕಾಂಗ್ರೆಸ್ ಬಳಿ ಯಾವುದೇ ತಂತ್ರಗಾರಿಕೆಯಿಲ್ಲ, ರಣನೀತಿ ರೂಪಿಸಲೂ ಅದಕ್ಕೆ ಸಾಧ್ಯವಾಗಿಲ್ಲ. ಮೋದಿಯವರನ್ನು ವೈಯಕ್ತಿಕವಾಗಿ ನಿಂದಿಸಲು ಮಾತ್ರವೇ ಕಾಂಗ್ರೆಸ್‌ನ ಅಜೆಂಡಾ ಸೀಮಿತವಾಗಿದೆ. ಕಳೆದ ಎರಡೂವರೆ ವರ್ಷದಲ್ಲಿ ರಾಹುಲ್ ಗಾಂಧಿಯವರು ಕೇಂದ್ರ ಸರಕಾರದ ಒಂದೇ ಒಂದು ವೈಫಲ್ಯವನ್ನು ಬಯಲಿಗೆಳೆದಿಲ್ಲ, ಸದನದಲ್ಲಿ ಕನಿಷ್ಠ 45 ನಿಮಿಷಗಳ ಕಾಲ ಮಾತನಾಡಿಲ್ಲ. ಕೇವಲ ಅಂಬಾನಿ, ಅದಾನಿ, ವೋಟುಚೋರಿ ಮತ್ತು ಜಾತಿಗಳ ವಿಷಯಗಳಿಂದ ಸರಕಾರವನ್ನು ಕಟ್ಟಿಹಾಕಲಾಗಲಿಲ್ಲ. ವಿಪರ್ಯಾಸವೆಂದರೆ ಅವರು 'ವಿಬಿ- ಜಿ ರಾಮ್ ಜಿ' ಕಾಯಿದೆಯನ್ನು ಹೊರಗಡೆ ವಿರೋಧಿಸುತ್ತಾರೆ, ಸದನದಲ್ಲಿ ಅದು ಚರ್ಚೆಗೆ ಬಂದಾಗ ಜರ್ಮನಿಯಲ್ಲಿರುತ್ತಾರೆ. ಪ್ರಕಟವಾಗದ ಜನರಲ್ ನರ್ವಾಣೆ ಅವರ ಪುಸ್ತಕವನ್ನು ಮುಂದಿಟ್ಟುಕೊಂಡು ಸದನದ ಕಲಾಪವನ್ನು ಇವರು ಹಾಳುಮಾಡಿದರು. ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯವನ್ನು ಬಳಸಿಕೊಂಡು ಗಂಭೀರ ಸಮಸ್ಯೆಗಳ ಬಗ್ಗೆ ಸರಕಾರದ ಗಮನ ಸೆಳೆಯಲಿಲ್ಲ. ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಕುರಿತಾದ ಚರ್ಚೆಗೆ ಒತ್ತಾಯಿಸಲಿಲ್ಲ. ಪ್ರಾಯಶಃ ಅವರು ಚರ್ಚೆಗೆ ಪ್ರಸ್ತಾಪಿಸಬೇಕಾದ ವಿಷಯದ ಸ್ಪಷ್ಟತೆಯಿಲ್ಲದೆ, ಜನರ ಸಮಸ್ಯೆಗೆ ಪರಿಹಾರ ನೀಡುವ ವಿಷಯಗಳನ್ನು ನಿರ್ಲಕ್ಷಿಸಿ, ಕೇವಲ ಸಾಮಾಜಿಕ ಜಾಲತಾಣಗಳಿಗೆ ಮಸಾಲೆಯನ್ನು ಒದಗಿಸುವ ವಿಷಯದತ್ತ ಗಮನಹರಿಸುತ್ತಿದ್ದಾರೆ. ನಿವೃತ್ತ ಸೇನಾಮುಖ್ಯಸ್ಥ ನರ್ವಾಣೆ ಅವರ ಪುಸ್ತಕದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ದೊರೆಯದಾದಾಗ, ಪತ್ರಿಕಾಗೋಷ್ಠಿಯನ್ನು ಕರೆದು ಮಾತನಾಡಬಹುದಾಗಿತ್ತು; ಆದರೆ ಸದನ ನಡೆಯದಂತೆ ಮಾಡುವುದು ಅವರ ದುರುದ್ದೇಶಭರಿತ ತಂತ್ರಗಾರಿಕೆಯಾಗಿತ್ತು. 'ಎಪ್‌ಸ್ಟೀನ್ ಫೈಲ್‌ನಲ್ಲಿ ಮೋದಿಯವರ ಹೆಸರಿನ ಉಲ್ಲೇಖವಿದೆ, ಹೀಗಾಗಿ ಮೋದಿಯವರು ಟ್ರಂಪ್‌ಗೆ ಹೆದರಿ ದೇಶದ ಹಿತವನ್ನು ಬಲಿಕೊಡುತ್ತಿದ್ದಾರೆ' ಎಂದು ಅವರು ಗಾಳಿಯಲ್ಲಿ ಗುಂಡು ಹೊಡೆದಿದ್ದಾರೆ.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದಲ್ಲಿ ಪ್ರಧಾನಿಗಳು ಉತ್ತರ ನೀಡದಂತೆ ಅಡ್ಡಿಪಡಿಸಲು ಲೋಕಸಭೆಯಲ್ಲಿ ಮಹಿಳಾ ಸಂಸದರ ಕೈಗೆ ಬ್ಯಾನರ್ ಕೊಟ್ಟು, ಪ್ರಧಾನಿಯವರ ಆಸನದ ಸುತ್ತ ನಿಲ್ಲಿಸಿ, ಸಂಸದೀಯ ವ್ಯವಸ್ಥೆಗೆ ಅಪಚಾರವೆಸಗುತ್ತಾರೆ. 'ಪ್ರಧಾನಿಗಳು ಶರಣಾಗಿದ್ದಾರೆ, ಪ್ರಧಾನಿಗಳಿಗೆ ರಾಹುಲ್ ಗಾಂಧಿಯೆಂದರೆ ಭಯ, ಪ್ರಧಾನಿಗಳು ಅಮೆರಿಕದೊಂದಿಗೆ ರಾಜಿಯಾಗಿದ್ದಾರೆ' ಇಂಥ ಕ್ಲೀಷೆಗಳನ್ನು ಪದೇ ಪದೆ ಬಳಸಿ, ಲೋಕಸಭಾ ಚುನಾವಣೆಯನ್ನು ಗೆದ್ದಂತೆ ಸಂಭ್ರಮಿಸುತ್ತಿರುವುದನ್ನು ಕಂಡರೆ, ಇವರ ಪ್ರಬುದ್ಧತೆಯ ಬಗ್ಗೆ ಅನಿವಾರ್ಯವಾಗಿ ಪ್ರಶ್ನೆ ಏಳುತ್ತದೆ. ಪಕ್ಷಕ್ಕಾಗಿರುವ ಸೋಲಿನ ಬಗ್ಗೆ ರಾಹುಲ್ ಗಾಂಧಿಯವರು ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೇವಲ ಗಲಾಟೆ ಹಾಗೂ ಗೊಂದಲದಿಂದ ಜನರನ್ನು ಎತ್ತಿಕಟ್ಟುವ ರಾಜಕೀಯವನ್ನು ಕೈಬಿಟ್ಟು, ದೂರದೃಷ್ಟಿಯುಳ್ಳ ವ್ಯಕ್ತಿತ್ವವನ್ನು ರೂಢಿಸಿಕೊಳ್ಳದಿದ್ದರೆ ಅವರು ಬಹುಬೇಗ ಇತಿಹಾಸದ ಪುಟವನ್ನು ಸೇರುವುದು ಖಚಿತ.

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ನವೀನ ಭರಮಪ್ಪ, ಬೆಂಗಳೂರು**
ಭಟ್ರೇ, ಸಾಧು ಕೋಕಿಲಾಗೆ ಕಪ್ಪು ಕನ್ನಡಕ ಒಪ್ಪುತ್ತಾ?
- **ಕಣ್ಣಿಗಿಂತ ತಲೆಗೆ ಚೆನ್ನಾಗಿ ಒಪ್ಪುತ್ತೆ!**

- **ರಾಜೀವ ಹೆಗಡೆ, ಶಿರಸಿ**
ಭಟ್ರೇ, ಕಿಚ್ಚ ಸುದೀಪ್ 'ಟೈಟಾನಿಕ್' ಸಿನಿಮಾ ರೀಮೇಕ್ ಮಾಡಿದರೆ ಹೇಗಿರುತ್ತದೆ?
- **ಜೈಲಿಂದ ಬರುತ್ತಿದ್ದಂತೆ ಆಗ ದರ್ಶನ್ 'ಜುರಾಸಿಕ್ ಪಾರ್ಕ್' ರೀಮೇಕ್ ಮಾಡಬಹುದು!**

- **ಕಿರಣ್ ರಾಮರಾಜು, ಗಿರಿನಗರ**
ಭಟ್ರೇ, ಜನಾರ್ದನ ರೆಡ್ಡಿ ಮಗ ಆಯ್ತು, ಅವರ ಪತ್ನಿ ನಾಯಕಿಯಾಗಿ ಸಿನಿಮಾ ಮಾಡಿದ್ರೆ?
- **ಆಗ ಆ ಸಿನಿಮಾಕ್ಕೆ 'ಜನಾರ್ದನಮ್ಮಾ' ಎಂದು ಹೆಸರಿಡಬಹುದು!**

- **ಸ್ವಾತಿ ಮಲ್ಲೇಶ್ವರ, ಬೆಂಗಳೂರು**
ಭಟ್ರೇ, ಹೆಸರಿನ ಮುಂದೆ 'ಗಳು' ಎಂದು ಸೇರಿಸುವುದೇಕೆ?
- **ಮೊನ್ನೆ ಯಾರೋ 'ಉಮಾಶ್ರೀಗಳು' ಅಂತ ಹೇಳ್ತಿದ್ರಪ್ಪ!**

- **ಭಾಸ್ಕರ ಚೊಕ್ಕ, ಬೆಂಗಳೂರು**
ಭಟ್ರೇ, ಆತ ಸದಾ ನಾಟ್ ರೀಚೇಬಲ್, ಏಕಿರಬಹುದು?
- **ಸಾಲಗಾರರ ಕಾಟ!**

- **ಸಿ. ಅರುಣ, ಶಿವಮೊಗ್ಗ**
ಭಟ್ರೇ, ಬಿ.ಕೆ.ಹರಿಪ್ರಸಾಡ್‌ಗೆ ಬೆಳ್ಳಿ ಕಿರೀಟ ಹಾಕೋಣ ಅಂತ ಇದೀವಿ, ನಿಮ್ಮ ಸಲಹೆ?
- **ಅದನ್ನು ಅವರ ತಲೆಗೇ ಹಾಕಬೇಕಾಗಿ ವಿನಂತಿ!**

- **ರವಿ ಭಾಸ್ಕರಿ, (ಇಮೇಲ್ ಮೂಲಕ)**
ಭಟ್ರೇ, ವಾಟಾಳ್ ನಾಗರಾಜ ಸದಾ ಟೋಪಿ ಧರಿಸಿಯೇ ಇರ್ತಾರಲ್ಲ?
- **'ಅದು ನನ್ನ ಜನ್ಮಸಿದ್ಧ ಲುಕ್ಕು' ಎಂದು ಅವರು ಭಾವಿಸಿದ್ದಾರಂತೆ!**

- **ರಾಮಚಂದ್ರ ಕೆ. ಜ್ಯೋತಿ, ಮಂಗಳೂರು**
ಭಟ್ರೇ, ನಿಮಗೆ ಗಂಡು ಅಭಿಮಾನಿಗಳು ಹೆಚ್ಚೋ, ಹೆಣ್ಣು ಅಭಿಮಾನಿಗಳು ಹೆಚ್ಚೋ?
- **ಗಂಡು ಅಭಿಮಾನಿಗಳನ್ನು ಲೆಕ್ಕ ಹಾಕುವಾಗ ಎಣಿಸ್ತಾರೇನಯ್ಯ?!**

- **ಶ್ರೀಧರ ಗೌಡ, ಬನ್ನೇರುಘಟ್ಟ**
ಭಟ್ರೇ, ಸತ್ಯ ಹೇಳಿದರೆ, 'ನೀನೇನು ಹರಿಶ್ಚಂದ್ರನ ಮೊಮ್ಮಗನಾ?' ಅಂತಾರಲ್ಲ.. ಇನ್ನು ಸುಳ್ಳು ಹೇಳಿದರೆ?
- **ಅರಸೀಕೆರೆ ಶಿವಲಿಂಗೇಗೌಡರು ನಿನಗೇನಾಗಬೇಕು ಅಂತಾರೆ!**

ಮೌನಕ್ರಾಂತಿಯಲ್ಲಿ ತೊಡಗಿಸಿಕೊಂಡ ಡಬ್ಬಾವಾಲಾಗಳು

ವಿದೇಶವಾಸಿ

ಕಿರಣ್ ಉಪಾಧ್ಯಾಯ, ಬಹ್ರೈನ್
vveditoped@gmail.com

ಮೊನ್ನೆ ಭಾರತದಿಂದ ಬಹ್ರೈನ್‌ಗೆ ಹಿಂತಿರುಗಿ ಬರುವಾಗ ಮುಂಬೈನಲ್ಲಿ ಕೆಲವು ಗಂಟೆಗಳ ಕಾಲ ಉಳಿಯಬೇಕಾಗಿ ಬಂತು. ಅದಕ್ಕಾಗಿ ಏರ್‌ಪೋರ್ಟ್ ಹತ್ತಿರದಲ್ಲಿರುವ ಐಬಿಸ್ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದೆ. ಸಾಮಾನ್ಯವಾಗಿ ಹೋಟೆಲ್ ಕೋಣೆಯ ಗೋಡೆಗೆ ಒಂದು ಚಿತ್ರವನ್ನೋ, ಸಂದೇಶ ವನ್ನೋ, ಕಲಾಕೃತಿಯನ್ನೋ ತೂಗಿಹಾಕಿದ್ದಿರುತ್ತದೆ. ಕೆಲವೊಮ್ಮೆ ಅದು ಆ ಪ್ರದೇಶದ, ಊರಿನ ಮಹತ್ವವನ್ನು ಹೇಳುವ ಅಥವಾ ಅಲ್ಲಿಯ ಪ್ರಸಿದ್ಧ ಸ್ಥಳಗಳನ್ನು ತೋರಿಸುವ ಚಿತ್ರವಾಗಿರುತ್ತದೆ. ಮುಂಬೈನ ಐಬಿಸ್ ಹೋಟೆಲ್‌ನ ಕೋಣೆಯಲ್ಲಿ ನನ್ನ ಗಮನ ಸೆಳೆದದ್ದು, ಗೋಡೆಗೆ ಇಡಿಯಾಗಿ ಅಂಟಿಸಿದ್ದ ಒಂದು ವಾಲ್ ಪೇಪರ್. ಅದರಲ್ಲಿ, ರೈಲ್ವೆ ನಿಲ್ದಾಣದಲ್ಲಿ ಹೆಸರು ಬರೆಯುವಂತೆ, 'ಮುಂಬೈ ಕಾ ಡಬ್ಬಾವಾಲಾ' ಎಂದು ಬರೆದು, ಟಿಫಿನ್ ಕ್ಯಾರಿಯರ್ ಮತ್ತು ಒಂದಷ್ಟು ಟಿಫಿನ್ ಕ್ಯಾರಿಯರ್ (ತಿಂಡಿಯ ಡಬ್ಬಿ) ಹಿಡಿದುಕೊಂಡಿರುವ ವ್ಯಕ್ತಿಯ ಚಿತ್ರವಿತ್ತು. ಮನಸ್ಸು ಮಾಡಿದ್ದರೆ ಮುಂಬೈನ ಪ್ರಸಿದ್ಧ ಸಿದ್ಧಿವಿನಾಯಕ ದೇವಸ್ಥಾನ, ಗೇಟ್ ವೇ ಆಫ್ ಇಂಡಿಯಾ, ತಾಜ್ ಹೋಟೆಲ್, ಮರಿನ್ ಡ್ರೈವ್, ವಿಕ್ಟೋರಿಯಾ ಟರ್ಮಿನಸ್, ಚರ್ಚ್‌ಗೇಟ್ ರೈಲ್ವೆ ನಿಲ್ದಾಣ, ಶಿವಾಜಿ ಮಹಾರಾಜ, ತಾನಾಜಿ, ಸಂಭಾಜಿ ಹೀಗೆ ಯಾವುದಾದರೂ, ಯಾರದ್ದಾದರೂ ಚಿತ್ರವನ್ನು ಹಾಕ ಬಹುದಾಗಿತ್ತು. ಆದರೆ ಒಂದು ಗೋಡೆಯ ತುಂಬಾ ಡಬ್ಬಿ ಕೊಡೊಯ್ಯುವ ವ್ಯಕ್ತಿಯ ಚಿತ್ರ ಹಾಕಿದ್ದಾರೆ ಎಂದರೆ, ಅದು 'ಖಾಲಿ-ಪೀಲಿ' ಅಲ್ಲ.

ಮುಂಬೈನಲ್ಲಿ ಡಬ್ಬಾವಾಲಾಗಳು ಅಂದರೆ, ಅದೆಷ್ಟೋ ಜನರಿಗೆ ಅನ್ನದಾತರು. ಇವರ ಇತಿಹಾಸವನ್ನು ಕೆದುಕುವುದಾದರೆ, 18ನೇ ಶತಮಾನದ ಕೊನೆಯಿಂದ ಆರಂಭಿಸಬೇಕು. 1890ರ ಹೊತ್ತಿಗೆ, ಮಹಾದೇವ ಹಾವಾಜಿ ಬಚ್ಚೆ ಎನ್ನುವ ಹೆಸರಿನವರು ಈ ಕೆಲಸವನ್ನು ಮೊದಲ ಬಾರಿಗೆ ಆರಂಭಿಸಿದರಂತೆ. ಆಗ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಇತ್ತು. ಆ ದಿನಗಳಲ್ಲಿ ಬಹುತೇಕರು ಮುಂಬೈ ನಗರಕ್ಕೆ ಉದ್ಯೋಗ ನಿಮಿತ್ತ ಬರುತ್ತಿದ್ದರು. ಪಟ್ಟಣ ಪ್ರದೇಶಗಳಲ್ಲಿ ಬದುಕಬೇಕು ಎಂದರೆ ಹೆಚ್ಚಿನ ಹಣ ನೀಡಬೇಕಾಗಿದ್ದುದರಿಂದ ಜನ ಊರಿಗೆ ಸ್ವಲ್ಪ ದೂರದಲ್ಲಿ ಮನೆ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಕೆಲಸಕ್ಕೆ ಹೋಗುವವರು ಬೇಗ ಮನೆಯಿಂದ ಹೊರಡಬೇಕಾಗುತ್ತಿತ್ತು. ಆದರೆ ಅಷ್ಟು ಬೆಳ್ಳಂಬೆಳಗ್ಗೆ ಮನೆಯಲ್ಲಿ ಅಡುಗೆ ಮಾಡುವುದು ಹೆಂಗಸರಿಗೆ ಕಷ್ಟದ ಕೆಲಸವಾಗಿತ್ತು. ಒಂದುವೇಳೆ ಅಡುಗೆ ಮಾಡಿ ಕೊಟ್ಟು ಕಳಿಸಿದರು ಅಂದುಕೊಳ್ಳಿ, ಮಧ್ಯಾಹ್ನದವರೆಗೆ ಊಟ ತಣ್ಣಗಾಗುತ್ತಿತ್ತು. ಬೇಸಗೆಯಲ್ಲಿ ಹಳಸುವ ಸಾಧ್ಯತೆಯೂ ಇತ್ತು. ಮನೆಯ ಊಟ ಬಯಸುವವರು, ಹೊರಗಿನ ತಿಂಡಿ ಅಥವಾ ಊಟವನ್ನು ತಿನ್ನಲು ಬಯಸದ ಜನರಿಗೆ ಮನೆಯಲ್ಲೇ ತಯಾರಿಸಿದ ಮಧ್ಯಾಹ್ನದ ಊಟ ತಲುಪಿಸುವ ಉಪಾಯವನ್ನು ಹುಡುಕಿದವರು ಮಹಾದೇವ ಬಚ್ಚೆ. ಆ ದಿನಗಳಲ್ಲಿ ಕಚೇರಿಗಳಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಿದ್ದ ಬ್ರಿಟಿಷರು ಮತ್ತು ಪಾರ್ಸಿ ಜನರಿಗೆ ಅವರವರ ಮನೆಯಿಂದ ಊಟವನ್ನು ತೆಗೆದುಕೊಂಡು ಹೋಗಿ ಕಚೇರಿಗೆ ತಲುಪಿಸುವ ಕೆಲಸವನ್ನು ಬಚ್ಚೆ ಆರಂಭಿಸಿದರು. ಈ ಕೆಲಸಕ್ಕಾಗಿ ಸುಮಾರು ನೂರು ಜನರನ್ನು ಹುಡುಕಿ ತಮ್ಮ ಜತೆ ಸೇರಿಸಿಕೊಂಡರು. ತಮ್ಮ ತೋಳುಗಳಲ್ಲಿ ಶಕ್ತಿ ಇರುವವರೆಗೂ ಬಚ್ಚೆ ಈ ಕೆಲಸವನ್ನು ಮಾಡಿದರು. ಸುಮಾರು 65 ವರ್ಷ ನಿರಂತರವಾಗಿ ಈ ಕೆಲಸ ಮಾಡಿದ ನಂತರ ಇದನ್ನು ಒಂದು ಟ್ರಸ್ಟ್ ಎಂದು ನೋಂದಾಯಿಸಿಕೊಳ್ಳಲಾಯಿತು.

ಸುಮಾರು 140 ವರ್ಷಗಳ ಹಿಂದೆ ಆರಂಭವಾದ, ಮನೆಯಿಂದ ಕಚೇರಿಗೆ, ಮಳಿಗೆಗೆ ಊಟ ತಲುಪಿಸುವ ಕೆಲಸ ಮುಂಬೈ ಮಹಾನಗರದಲ್ಲಿ ಇಂದಿಗೂ ಮುಂದುವರಿದಿದೆ. ಆದರೆ ನೂರು ಜನರಿಂದ ಆರಂಭವಾದ ಈ ಕಾರ್ಯದಲ್ಲಿ ಒಂದು ಕಾಲದಲ್ಲಿ 5,000 ಜನ ತಮ್ಮನ್ನು ತೊಡಗಿಸಿಕೊಂಡಿದ್ದರು. ಇತ್ತೀಚೆಗೆ ಸ್ವಿಗ್ಗಿ, ಝೊಮ್ಯಾಟೋದಂಥ ಕಂಪನಿಗಳು ಇದೇ ರೀತಿಯ ಕಾರ್ಯವನ್ನು ಮಾಡುತ್ತಿರುವುದರಿಂದ ಡಬ್ಬಾವಾಲಗಳ ಸಂಖ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿರಬಹುದು ಎಂಬ ವರದಿ ಇದೆ. ಹಾಗೆಯೇ, ಸ್ವಿಗ್ಗಿ, ಝೊಮ್ಯಾಟೋದಂಥ ಕಂಪನಿಗಳಿಗೆ ಇವರೇ ಮಾದರಿ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಇಂದು ಆ ಕಂಪನಿಗಳು ಮಾಡುತ್ತಿರುವ ಕೆಲಸವನ್ನು ನೂರು ವರ್ಷಕ್ಕೂ ಹಿಂದೆ ಈ ಡಬ್ಬಾವಾಲಾಗಳು ಮಾಡಿ ತೋರಿಸಿದ್ದಾರೆ. ಇಂದಿಗೂ ಡಬ್ಬಾವಾಲಾಗಳು ತಮ್ಮ ಕೆಲಸಕ್ಕೆ ಇತರ ಕಂಪನಿಗಳಂತೆ ಕಾರು, ಬೈಕು ಅಥವಾ ರಿಕ್ಷಾಗಳನ್ನು ಬಳಸುವುದಿಲ್ಲ. ಅವರು ಬಳಸುವುದು ಸೈಕಲ್ ಅಥವಾ ಕೈಗಾಡಿ. ಜತೆಗೆ ಮುಂಬೈನ ಲೋಕಲ್ ಟ್ರೈನ್ (ಸ್ಥಳೀಯ ರೈಲ್ವೆ). ಇಷ್ಟನ್ನೇ ಬಳಸಿಕೊಂಡು, ಕಚೇರಿಯಲ್ಲಿ ಕೆಲಸ ಮಾಡುವವರಿಗೆ, ಶಾಲೆ, ಕಾಲೇಜಿನಲ್ಲಿ ಓದುವ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಊಟ ತಲುಪಿಸುತ್ತಾರೆ. ಅದೂ ತಿಂಗಳಿಗೆ ಒಬ್ಬರಿಂದ 1500ರಿಂದ 2000 ರೂಪಾಯಿಯ ಒಳಗೆ. ಅಂದಂತೆ ಇವರು ಮನೆಯಿಂದ ಊಟ ತಲುಪಿಸುವುದಷ್ಟೇ ಅಲ್ಲ ಊಟ ಮುಗಿದ ನಂತರ ಖಾಲಿ ಡಬ್ಬಿಯನ್ನು ಪುನಃ ಮನೆಗೆ ತಲುಪಿಸುತ್ತಾರೆ. ಆಗ ಮಾತ್ರ ಅವರ ದಿನದ ಕೆಲಸ ಪೂರ್ತಿಯಾದಂತೆ. ಇಂದಿಗೂ ಮುಂಬೈನ ಬಹುತೇಕ ಜನರಿಗೆ ಡಬ್ಬಾವಾಲಾಗಳು ಎಂದರೆ ಭರವಸೆಯ ಅನ್ನದಾತರು. ಏಕೆಂದರೆ, 'ಗಡಿಯಾರದ ಮುಳ್ಳು ಸಮಯವನ್ನು ತಪ್ಪಬಹುದು, ಡಬ್ಬಾವಾಲಾಗಳ ಸಮಯ ಯಾವತ್ತೂ ತಪ್ಪುವುದಿಲ್ಲ' ಎಂಬ ಮಾತು ಮುಂಬೈ ಪ್ರದೇಶದಲ್ಲಿ ರೂಢಿಯಲ್ಲಿದೆ. ಹಾಗೆಯೇ 'ಸಮಯ ಮತ್ತು ಡಬ್ಬಾವಾಲಾ ಯಾರಿಗೂ ಕಾಯುವುದಿಲ್ಲ' ಎಂಬ ಮಾತೂ ಜಾರಿಯಲ್ಲಿದೆ. ಇನ್ನೂ ಒಂದು ವಿಷಯ ಏನೆಂದರೆ, ಇಷ್ಟು ವರ್ಷಗಳ ಇತಿಹಾಸದಲ್ಲಿ ಅವರು ರಜೆ ಮಾಡಿದ್ದು ಕೇವಲ ಒಂದೇ ಒಂದು ದಿನ. ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಆಂದೋಲನ ಕೈಗೊಂಡಿದ್ದ ಸಮಯದಲ್ಲಿ. ಇದು ಆಶ್ಚರ್ಯ ಅನಿಸಬಹುದು, ಆದರೆ ಸತ್ಯ.

2005ರಲ್ಲಿ ಮುಂಬೈನಲ್ಲಿ ಮುಸಲಧಾರೆಯಂತೆ ಮಳೆ ಸುರಿದು, 12 ತಾಸಿನಲ್ಲಿಯೇ 25 ಇಂಚು ಮಳೆಯಾಗಿ, ಮುಂಬೈ ನಗರವೇ ನೀರಿನಿಂದ ತುಂಬಿ ಹೋದಾಗಲೂ, ನಿಲ್ಲದೇ ಕೆಲಸ ಮಾಡಿದವರು ಎಂದರೆ ಈ ಡಬ್ಬಾವಾಲಾಗಳು. ಇವರ ಕಾರ್ಯತತ್ಪರತೆ, ಪ್ರಾಮಾಣಿಕತೆ, ಸಮಯ ಪಾಲನೆ, ನಿಷ್ಕಲ್ಮಶ ಭಾವಕ್ಕೆ ಎಷ್ಟು ಕೋಟಿ ಬೆಲೆ ಕಟ್ಟಿದರೂ ಸಾಲದು.



ಸಂಘಟನಾಶಕ್ತಿಗೆ ಅತ್ಯುತ್ತಮ ಉದಾಹರಣೆ ಡಬ್ಬಾವಾಲಗಳು. ಅದಕ್ಕೇ ಇರಬೇಕು, 'ಡಬ್ಬಾವಾಲಾಗಳು ಮಾಡುವ ಒಂದು ಕೋಟಿ ಅರವತ್ತು ಲಕ್ಷ ಕೆಲಸದಲ್ಲಿ ಒಂದು ತಪ್ಪು ಕಾಣಬಹುದು' ಎಂದು ಜಾಗತಿಕ ಮಟ್ಟದ ಮಾಧ್ಯಮ ಸಂಸ್ಥೆ 'ಫೋರ್ಬ್ಸ್' ಹೇಳಿದೆ. ಕೇವಲ ಮುಂಬೈ ಮಹಾನಗರಕ್ಕಷ್ಟೇ ಸೀಮಿತವಾಗಿರುವ, ಅಲ್ಲಿಯೇ ತಮ್ಮ ಕಾರ್ಯವ್ಯಾಪ್ತಿಯನ್ನು ಇಟ್ಟುಕೊಂಡಿರುವ, ನೂರಕ್ಕೂ ಹೆಚ್ಚು ವರ್ಷಗಳಾದರೂ ಮುಂಬೈನಿಂದ ಹೊರಗೆ ಹೋಗದ ಇವರ ಕುರಿತಾಗಿ ಫೋರ್ಬ್ಸ್ ಸಂಸ್ಥೆಯವರು ಅಧ್ಯಯನ ಮಾಡುವುದಾಗಲಿ, ಬ್ರಿಟನ್‌ನ ಇಂದಿನ ರಾಜ, ಅಂದಿನ ರಾಜಕುಮಾರ ಚಾರ್ಲ್ಸ್ ಅವರು ಇವರೊಂದಿಗೆ ಗಂಟೆಗಟ್ಟಲೆ ಕಾಲ ಕಳೆಯುವುದಾಗಲಿ, ಹಾರ್ವರ್ಡ್, ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದವರು ವ್ಯಾಪಾರದ ಪಾಠ ಮಾಡುವಾಗ ಇವರ ಉದಾಹರಣೆಯನ್ನು ಕೊಡುವುದಾಗಲಿ ಏಕೆ ಎನ್ನುವುದು ಅರ್ಥವಾಗಬೇಕಾದರೆ ಡಬ್ಬಾವಾಲಾಗಳ ಕಾರ್ಯವೈಖರಿ ಹೇಗೆ ಎಂಬುದು ಗೊತ್ತಾಗಬೇಕು.

ಡಬ್ಬಾವಾಲಾಗಳು ಬೆಳಗ್ಗೆ 10 ಗಂಟೆಯ ಹೊತ್ತಿಗೆ ಮನೆಯಿಂದ ಊಟದ ಡಬ್ಬಿ ಸಂಗ್ರಹಿಸಿ, ಸೈಕಲ್ ಅಥವಾ ಕೈಗಾಡಿಯ ಮೂಲಕ ಹತ್ತಿರದ ರೈಲ್ವೆ ನಿಲ್ದಾಣಕ್ಕೆ ತರುತ್ತಾರೆ. ಬೇರೆ ಬೇರೆ ಕಡೆಗಳಿಂದ ಬಂದ ಡಬ್ಬಿಗಳನ್ನೆಲ್ಲ ಮುಂದಿನ ಪ್ರಯಾಣಕ್ಕೆ ಅನುಕೂಲವಾಗುವಂತೆ ಕಟ್ಟಿಗೆಯ ಟ್ರೇನಲ್ಲಿ ತುಂಬಿ, ಸ್ಥಳೀಯ ರೈಲ್ವೆಯಲ್ಲಿ ಕೊಂಡೊಯ್ಯುತ್ತಾರೆ. ಪ್ರತಿ ನಿಲ್ದಾಣದಲ್ಲೂ ಇದಕ್ಕೆ ಅವರಿಗೆ ಸಿಗುವ ಸಮಯ 20ರಿಂದ 30 ಸೆಕೆಂಡುಗಳು ಮಾತ್ರ. ಅಷ್ಟರಲ್ಲಿಯೇ ಒಂದು ಯಂತ್ರದಂತೆ ಅವರು ಕೆಲಸ ಮಾಡುತ್ತಾರೆ. ರೈಲ್ವೆ ಬೋಗಿಯ ಒಳಗೆ ಕೇವಲ 10 ನಿಮಿಷದಲ್ಲಿ ಈ ಡಬ್ಬಿಗಳನೆಲ್ಲ ಪುನಃ ವಿಂಗಡಿಸುತ್ತಾರೆ. ತಲುಪಿಸಬೇಕಾದ ಸ್ಥಳದ ಸಮೀಪದ ರೈಲ್ವೆ ನಿಲ್ದಾಣದಲ್ಲಿ ಡಬ್ಬಿಗಳನ್ನು ಇಳಿಸುತ್ತಾರೆ. ಅಲ್ಲಿ ಇದಕ್ಕಾಗಿಯೇ ಕಾದಿರುವ ಇನ್ನೊಂದು ತಂಡದವರು ಡಬ್ಬಗಳನ್ನೆಲ್ಲ ಸಂಗ್ರಹಿಸಿ ಮಧ್ಯಾಹ್ನ ಹನ್ನೆರಡರಿಂದ ಒಂದು ಗಂಟೆಯ ಒಳಗೆ ಕಚೇರಿಗೋ, ಶಾಲೆಗೋ, ಕಾಲೇಜಿಗೋ ಅದನ್ನು ತಲುಪಿಸುತ್ತಾರೆ. ಅದಾಗಿ ಒಂದು ಗಂಟೆಯ ನಂತರ ಖಾಲಿ ಡಬ್ಬಿಗಳನ್ನೆಲ್ಲ ಪುನಃ ಕಲೆಹಾಕಿ, ಸಾಯಂಕಾಲ ಐದು ಗಂಟೆಯ ಒಳಗೆ ತಲುಪಿಸಬೇಕಾದ ಮನೆಗಳಿಗೆ ತಲುಪಿಸುತ್ತಾರೆ. ಹೀಗೆ ಪ್ರತಿನಿತ್ಯ ಒಟ್ಟೂ ಒಂದೂಮುಕ್ಕಾಲರಿಂದ ಎರಡು ಲಕ್ಷ ಡಬ್ಬಿಗಳನ್ನು ನಿಯಂತ್ರಿಸುತ್ತಾರೆ. ಇದಕ್ಕಾಗಿ ಸುಮಾರು 200 ತಂಡಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಒಂದು ತಂಡದಲ್ಲಿ 20ರಿಂದ 30 ಸದಸ್ಯರು, ಅದಕ್ಕೆ ಒಬ್ಬರು ಅಥವಾ ಇಬ್ಬರು ಮೇಲ್ವಿಚಾರಕರು ಇರುತ್ತಾರೆ. ಅಪಘಾತ, ಅನಾರೋಗ್ಯ ಅಥವಾ ಇನ್ನಾವುದೋ ಅನಿವಾರ್ಯ ಕಾರಣದಿಂದ ಯಾರಿಗಾದರೂ ಕೆಲಸಕ್ಕೆ ಬರಲಾಗದಿದ್ದರೆ ಅಂಥವರ ಸ್ಥಳ ತುಂಬಲು ಒಂದಿಬ್ಬರನ್ನು ಮೀಸಲಿಟ್ಟಿರುತ್ತಾರೆ. ಇವರೆಲ್ಲ ಬಹುತೇಕ ಒಬ್ಬರಿಗೊಬ್ಬರು ಸಂಬಂಧಿಗಳೇ ಆಗಿರುತ್ತಾರೆ. ಹೊಸದಾಗಿ ಯಾರಾದರೂ ಈ ತಂಡವನ್ನು ಸೇರಿಕೊಂಡರೆ ಅವರಿಗೆ ಆರು ತಿಂಗಳು ತರಬೇತಿ ನೀಡುತ್ತಾರೆ. ತಂಡದಲ್ಲಿರುವ ಪ್ರತಿಯೊಬ್ಬರೂ ಅವರ ಸುತ್ತಮುತ್ತಲಿನ ಜಾಗದ ಪರಿಚಯವನ್ನು ತಿಳಿದವರಾಗಿರುತ್ತಾರೆ. ಇತ್ತೀಚೆಗೆ ಮೊಬೈಲ್, ಜಿಪಿಎಸ್, ಗೂಗಲ್ ಮ್ಯಾಪ್ ಇತ್ಯಾದಿ ವ್ಯವಸ್ಥೆಗಳೆಲ್ಲ ಬಂದಿವೆ ಅಂದುಕೊಳ್ಳೋಣ. ಆದರೆ ಮೊಬೈಲ್ ಬರುವುದಕ್ಕಿಂತ ದಶಕಗಳ ಮೊದಲಿನಿಂದಲೂ ಅವರು ಈ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಈಗಲೂ ಬಹುತೇಕ ವಯಸ್ಕ ಡಬ್ಬಾವಾಲಾಗಳ ಬಳಿ ಮೊಬೈಲ್ ಫೋನ್ ಇಲ್ಲ. ಇದ್ದರೂ ಹಳೆಯ ಕೀ-ಪ್ಯಾಡ್ ಇರುವ ಮೊಬೈಲ್. ಹಳೆಯ ಜನರಿಗೆ ಆಧುನಿಕ 'ಐಫೋನ್' ಆಗಲಿ, ಆಂಡ್ರಾಯ್ಡ್ ಫೋನ್ ಬಳಸುವುದಾಗಲಿ ಇಂದಿಗೂ ಗೊತ್ತಿಲ್ಲ. ಈ ವಿಷಯದಲ್ಲಿ ಕೆಲವು ಡಬ್ಬಾವಾಲಾಗಳು ಇಂದಿಗೂ ಅನಕ್ಷರಸ್ಥರು. ಆದರೆ ಮೊಬೈಲ್ ಇಲ್ಲದೇ ಅದಕ್ಕಿಂತ ನಿಖರವಾಗಿ, ಖಚಿತವಾಗಿ ಕೆಲಸವನ್ನು ಮಾಡಬಲ್ಲ ಶಕ್ತಿ ಉಳ್ಳವರು ಇವರಾಗಿದ್ದಾರೆ. ಆದಾಗ್ಯೂ, ಅಷ್ಟು ಕರಾರುವಾಕ್ಕಾಗಿ ಡಬ್ಬಿಯನ್ನು ಯಾವುದೇ ತಪ್ಪಿಲ್ಲದೆ ತಲುಪಿಸುವುದಕ್ಕೆ ಕಾರಣ ಅವರು ಮಾಡಿಕೊಂಡಿರುವಂಥ ಸಂಕೇತ ಅಥವಾ ಗುರುತಿನ ಪದ್ಧತಿ. ಅನಕ್ಷರಸ್ಥರು ಸುಲಭವಾಗಿ ಅರ್ಥಮಾಡಿಕೊಳ್ಳಲು ಇದು ಸಹಕರಿಸುತ್ತದೆ. ಡಬ್ಬದ ಮುಚ್ಚಳದ ಮೇಲೆ ಹಸಿರು, ಹಳದಿ, ಕೆಂಪು, ನೀಲಿ ಬಣ್ಣದ ಗುರುತು ಹಾಕಿಕೊಂಡು, ಡಬ್ಬದ ಮೇಲೆ ಸಂಗ್ರಹಿಸಿದ ಮತ್ತು ಹಿಂತಿರುಗಿಸಬೇಕಾದ ಸ್ಥಳ, ನಡುವೆ ಸಿಗುವ ಪ್ರಮುಖ ರೈಲ್ವೆ ನಿಲ್ದಾಣಗಳು, ಇಳಿಯಬೇಕಾದ ನಿಲ್ದಾಣ, ವಿತರಿಸಬೇಕಾದ ವಿಳಾಸ ಇತ್ಯಾದಿಗಳನ್ನೆಲ್ಲ ಸಂಕೇತದ ಮುಖಾಂತರವೇ ಗುರುತು ಮಾಡಿಕೊಳ್ಳುತ್ತಾರೆ.

ಇವರು ಸಮಯ ಪಾಲನೆಯಲ್ಲಿ ತುಂಬಾ ಕಟ್ಟುನಿಟ್ಟಿನ ಜನ. ಊಟದ ಡಬ್ಬ ಸಂಗ್ರಹಿಸುವಾಗ ಒಂದು ಮನೆಯ ಮುಂದೆ ಒಂದು ನಿಮಿಷಕ್ಕಿಂತ ಹೆಚ್ಚು ಕಾಯುವುದಿಲ್ಲ. ಯಾವತ್ತಾದರೂ ಒಂದು ನಿಮಿಷಕ್ಕಿಂತ ಹೆಚ್ಚು ಕಾಯಬೇಕಾದ ಪರಿಸ್ಥಿತಿ ಬಂದರೆ ಮನೆಯವರಿಗೆ ಎಚ್ಚರಿಕೆ ಕೊಟ್ಟು ಬರುತ್ತಾರೆ. ಎರಡನೇ ಬಾರಿಯೂ ಹಾಗೆಯೇ ಆದರೆ, ಆ ಮನೆಯನ್ನು ಬಿಟ್ಟು ಮುಂದಕ್ಕೆ ನಡೆಯುತ್ತಾರೆ. ಒಬ್ಬರಿಂದಾಗಿ ಉಳಿದವರಿಗೆಲ್ಲ ತೊಂದರೆಯಾಗಬಾರದು ಎಂಬ ಕಾರಣದಿಂದ ಅವರು ಈ ನೀತಿಯನ್ನು ಅನುಸರಿಸುತ್ತಾರೆ.

'ಅನ್ನದಾನ ಮಹಾದಾನ' ಎಂಬ ಮಾತನ್ನೇ ಧ್ಯೇಯವಾಕ್ಯವನ್ನಾಗಿಸಿಕೊಂಡ ಇವರ ಆದಾಯ ಎಷ್ಟು ಎಂದು ಕೇಳಿದರೆ ನೀವು ಆಶ್ಚರ್ಯಪಡುತ್ತೀರಿ. ಒಬ್ಬ ಡಬ್ಬಾವಾಲಾನಿಗೆ ತಿಂಗಳಿಗೆ ಎಂಟರಿಂದ ಹನ್ನೆರಡು ಸಾವಿರ ರೂಪಾಯಿ ಸಂಬಳವಿರುತ್ತದೆ. ಆರರಿಂದ ಎಂಟು ತಿಂಗಳು ಕೆಲಸ ಮಾಡಿದ ನಂತರ, ಮೂಲಧನಕ್ಕೆ ತಮ್ಮ ಹಣವನ್ನು ಜೋಡಿಸಿದರೆ, ಅಂಥವರು ಆ ಸಂಘಟನೆಯಲ್ಲಿ ಹೂಡಿಕೆದಾರರಾಗುತ್ತಾರೆ. ವರ್ಷಾಂತ್ಯದಲ್ಲಿ ಬರುವ ಲಾಭಕ್ಕೆ ಅವರು ಪಾಲುದಾರರಾಗುತ್ತಾರೆ. ಜತೆಗೆ, ಪ್ರತಿನಿತ್ಯ ಮನೆಯಿಂದ ಅಮ್ಮನೋ, ಹೆಂಡತಿಯೋ ತಯಾರಿಸಿದ ಊಟ-ತಿಂಡಿ ತಲುಪಿಸಿದಾಗ ಆ ಮನೆಯವರಿಂದ ಸಿಗುವ ಹಾರೈಕೆ, ಇವೇ ಡಬಾವಾಲಾಗಳ ಆದಾಯ.

ಮುಂಬೈನ ರೈಲ್ವೆ ನಿಲ್ದಾಣದಲ್ಲಿ ಬೆಳಗ್ಗೆ ಹತ್ತು ಗಂಟೆಯ ಹೊತ್ತಿಗೆ ಬಿಳಿ ಅಂಗಿ, ಬಿಳಿ ಪೈಜಾಮಾ, ಬಿಳಿ ಟೊಪ್ಪಿ ಧರಿಸಿ, ಹಣೆಯಲ್ಲಿ ತಿಲಕ, ಕೊರಳಲ್ಲಿ ತುಳಸಿಮಾಲೆ ತೊಟ್ಟು, ಟ್ರೇನ್ ಬಂದು ನಿಲ್ಲುತ್ತಿದ್ದಂತೆ, ಮಿಂಚಿನ ವೇಗದಲ್ಲಿ ತಿಂಡಿಯ ಡಬ್ಬಿಗಳನ್ನೆಲ್ಲ ರೈಲ್ವೆ ಡಬ್ಬಿಯೊಳಗೆ ತುಂಬಿ, ಪಾಂಡುರಂಗ ವಿಠಲನ ಭಜನೆ ಆರಂಭ ಮಾಡಿದರು ಎಂದರೆ, ಅವರು ಡಬ್ಬಾವಾಲಾಗಳು ಎಂದೇ ಅರ್ಥ.

ಹೀಗಿರುವಾಗ, ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ಇವರೆಲ್ಲ ಸಾಕಷ್ಟು ಸಂಕಷ್ಟಕ್ಕೆ ಒಳಗಾಗಿದ್ದರು. ಲಾಕ್‌ಡೌನ್‌ನಿಂದಾಗಿ ಇವರೆಲ್ಲ ಕೆಲಸವಿಲ್ಲದೆ ಮನೆಯಲ್ಲೇ ಉಳಿಯುವಂತಾಗಿತ್ತು. ಯಾರೂ ಕೆಲಸಕ್ಕೆ ಹೋಗದಿದ್ದಾಗ, ಕೆಲಸ ಆರಂಭವಾದ ಮೇಲೂ ಮನೆಯಿಂದಲೇ ಕೆಲಸ ಮಾಡುವಂತಾದಾಗ (ವರ್ಕ್ ಫ್ರಮ್ ಹೋಮ್) ಊಟ ತಲುಪಿಸುವ ಕೆಲಸವೇ ಇರಲಿಲ್ಲ. ಈಗ ಕೋವಿಡ್ ಇಲ್ಲದಿದ್ದರೂ ಮನೆಯಿಂದ ಕೆಲಸ ಮಾಡುವ ಪರಿಪಾಠ ಮುಂದುವರಿದಿದೆ. ಕೋವಿಡ್ ಸಂದರ್ಭದಲ್ಲಿ ನಾಲ್ಕು ಸಾವಿರ ಜನ ಡಬ್ಬಾವಾಲಾಗಳು ಕೆಲಸವಿಲ್ಲದೆ ಮನೆಯಲ್ಲಿ ಕುಳಿತುಕೊಂಡಿದ್ದರು ಎಂದು ಒಂದು ವರದಿ ಹೇಳುತ್ತದೆ. ಆ ಸಂದರ್ಭದಲ್ಲಿ ತಮ್ಮ ಹೊಟ್ಟೆಪಾಡಿಗಾಗಿ ಡ್ರೈವರ್ ಕೆಲಸವನ್ನೋ, ವಾಚ್‌ಮನ್ ಕೆಲಸವನ್ನೋ, ಬೀದಿಬದಿಯಲ್ಲಿಯ ವ್ಯಾಪಾರವನ್ನೋ ಆರಂಭಿಸಿಕೊಂಡ ಡಬ್ಬಾವಾಲಾಗಳೂ ಸಾಕಷ್ಟು ಇದ್ದಾರೆ. ಈಗ ಮುಂಬೈನಲ್ಲಿ ಡಬ್ಬಾವಾಲಾಗಳು ಇದ್ದರೂ, ಮೊದಲಿನಂತೆ ಜನ ತಮ್ಮನ್ನು ಅದರಲ್ಲಿ ತೊಡಗಿಸಿಕೊಳ್ಳುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಏನೇ ಇದ್ದರೂ, ಅಂಥವರನ್ನು ನೆನಪಿಸಿಕೊಳ್ಳುವ ದೃಷ್ಟಿಯಿಂದ, ಅಂಥವರಿಗೆ ಗೌರವ ಸೂಚಿಸುವ ನಿಟ್ಟಿನಲ್ಲಿ ಐಬಿಸ್ ಹೋಟೆಲ್ ತನ್ನ ಕೊಠಡಿಯ ಗೋಡೆಗೆ ಅವರ ಚಿತ್ರ ಬರೆದಿದ್ದು ಕಂಡು ನಿಜಕ್ಕೂ ಮನಸ್ಸು ಆರ್ದ್ರವಾಯಿತು.

ನಿಂತ ನೀರಾದ ನೀರಾವರಿ ಯೋಜನೆಗಳು!

ಜಲ-ಆಶಯ

ರವೀ ಸಜಂಗದ್ದೆ
vveditoped@gmail.com

ಗಾಳಿ, ನೀರು, ಬೆಳಕು ಇಲ್ಲದಿದ್ದರೆ ಮನುಷ್ಯ ಈ ಪ್ರಪಂಚದಲ್ಲಿ ಬದುಕಲಾರ. ಈ ಮೂರೂ ಸಂಪನ್ಮೂಲಗಳು ಪ್ರಕೃತಿಯು ನಮಗೆ ಒದಗಿಸುವ ಭಿಕ್ಷೆ! ಶಿಲಾಯುಗದಿಂದ ತೊಡಗಿ ಕಲಿಯುಗಕ್ಕೆ ಮಾನವನ ಸುದೀರ್ಘ ಪಯಣ ಬಂದು ನಿಂತಿದೆ. ಈ ಕಾಲಘಟ್ಟದಲ್ಲೂ ದೈನಂದಿನ ಬದುಕಿಗೆ ಮತ್ತು ಕೃಷಿಗೆ ಬೇಕಾದಷ್ಟು ನೀರು ಮತ್ತು ಶುದ್ಧ ಗಾಳಿ ಬಹುತೇಕ ಕಡೆಗಳಲ್ಲಿ ದೊರಕುತ್ತಿಲ್ಲ ಎನ್ನುವುದು ಕಲಿಯುಗದ ಮಹಿಮೆ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ನಾವುಗಳು ಮಾಡಿಕೊಂಡ ಕರ್ಮಕಾಂಡ! ಶುದ್ಧ ಗಾಳಿ ಮತ್ತು ಶುದ್ಧ ನೀರು ಎಲ್ಲರಿಗೂ, ಎಲ್ಲೆಡೆಯೂ ಸಿಗುತ್ತಿಲ್ಲ ಎನ್ನುವುದು ದುರಂತ! ನೀರು ಮತ್ತು ಕರ್ನಾಟಕದ ನೀರಾವರಿ ಯೋಜನೆಗಳ ದುರವಸ್ಥೆಯ ಬಗ್ಗೆ ಮತ್ತು ನನೆಗುದಿಗೆ ಬಿದ್ದಿರುವ ಯೋಜನೆಗಳ ಕುರಿತು ರಾಜ್ಯಸಭಾ ಸದಸ್ಯರೂ, ಮಾಜಿ ಪ್ರಧಾನಮಂತ್ರಿಯೂ ಆದ ದೇವೇಗೌಡರು ಇತ್ತೀಚೆಗೆ ರಾಜ್ಯಸಭೆಯಲ್ಲಿ ಮಾಡಿದ ಭಾಷಣ ಮತ್ತು ವಿನಂತಿ ನಮ್ಮ ಪರಿಸ್ಥಿತಿಯನ್ನು ಬಟಾಬಯಲು ಮಾಡಿದೆ. ಸ್ವಾತಂತ್ರ್ಯ ಬಂದು ಹತ್ತಿರ ಹತ್ತಿರ ಎಂಟು ದಶಕಗಳು ಸಂದರೂ, ವಿವಿಧ ಸರಕಾರಗಳು ದೇಶ ಮತ್ತು ರಾಜ್ಯವನ್ನು ಆಳಿದರೂ ರಾಜ್ಯದೆಲ್ಲೆಡೆ ನೀರಿನ ಸರಬರಾಜು ಮತ್ತು ಲಭ್ಯತೆ ಇಲ್ಲದಿರುವುದು ನಮ್ಮನ್ನು ಆಳಿದವರ ಕಾರ್ಯಕ್ಷಮತೆಗೆ ಹಿಡಿದ ಕೈಗನ್ನಡಿಯಾಗಿದೆ.

ರಾಜ್ಯಸಭೆಯಲ್ಲಿ ಮೊನ್ನೆ ಬುಧವಾರ ನಡೆದ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡುತ್ತಾ ದೇವೇಗೌಡರು ಹೇಳಿದ ಮಾತುಗಳು, ನೀರು ಮತ್ತು ನೀರಾವರಿ ವಿಚಾರದಲ್ಲಿ ಅವರ ಪಕ್ಷ ಮತ್ತು ಸರಕಾರವೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸರಕಾರಗಳ ಅಸಡ್ಡೆಯ ಕುರಿತು ಬೆಳಕು ಚೆಲ್ಲಿದವು. ''ನನ್ನ ರಾಜ್ಯಸಭಾ ಅವಧಿ ಇನ್ನೊಂದು ತಿಂಗಳಲ್ಲಿ ಮುಗಿಯಲಿದೆ. ನನ್ನ ರಾಜ್ಯದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರ ಹಿತವನ್ನು ಕಾಯಬೇಕಾಗಿದೆ.

ನಾವೆಲ್ಲರೂ ಮನುಷ್ಯರು. ಮಳೆ ಬಿದ್ದರೆ ನೀರು, ಇಲ್ಲವಾದರೆ ಇಲ್ಲ. ಈ ಸದನದ ಎಲ್ಲಾ ಸದಸ್ಯರು ಕರ್ನಾಟಕದ ರಕ್ಷಣೆ ಮಾಡಬೇಕು ಎಂಬುದಾಗಿ ನಾನು ಕೈ ಮುಗಿದು ಬೇಡುತ್ತೇನೆ. ಕರ್ನಾಟಕ ರಾಜ್ಯವು ನಿರಂತರವಾಗಿ ನೆರೆ ರಾಜ್ಯಗಳ ಜತೆ ತನ್ನ ನೀರಾವರಿ ಹಕ್ಕಿಗಾಗಿ ಹೋರಾಟ ನಡೆಸುತ್ತಿದೆ. ನಾನು ಕೂಡ ನೀರಿಗಾಗಿ 65 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದೇನೆ. ಈ ಸದನದಲ್ಲಿ ನಾನು ನ್ಯಾಯಮಂಡಳಿಗಳು ಈವರೆಗೆ ನೀಡಿರುವ ತೀರ್ಪುಗಳ ಬಗ್ಗೆ ಚರ್ಚಿಸಲು ಬಯಸುವುದಿಲ್ಲ. ಕರ್ನಾಟಕ ರಾಜ್ಯಕ್ಕೆ ನೀರಿನದ್ದೇ ಬಹುದೊಡ್ಡ ಬಿಕ್ಕಟ್ಟಾಗಿದೆ. ಒಂದೆಡೆ ತಮಿಳುನಾಡು, ಮತ್ತೊಂದೆಡೆಯಲ್ಲಿ ಆಂಧ್ರಪ್ರದೇಶ, ಇನ್ನೊಂದು ಕಡೆಯಲ್ಲಿ ಗೋವಾದಿಂದ ತೊಂದರೆಯನ್ನು ರಾಜ್ಯವು ಎದುರಿಸುತ್ತಿದೆ. ನಾನು ಜೀವನದ ಕೊನೆಗಾಲದಲ್ಲಿ ಇದ್ದೇನೆ. ಈ ವೃದ್ಧನ ಮನವಿಗೆ ಮಾನವೀಯತೆಯಿಂದ ಸ್ಪಂದಿಸಿ'' ಎಂದು ಗೌಡರು ಹೇಳಿ ಮುಗಿಸಿದಾಗ ಅವರ ಕಂಗಳು ತುಂಬಿದ್ದವು ಮತ್ತು ಮನಸ್ಸು ಆರ್ದ್ರವಾಗಿತ್ತು! ಜಲ ಸಂಪನ್ಮೂಲ ಮತ್ತು ಅದರ ನಿರ್ವಹಣೆಯ ವಿಚಾರದಲ್ಲಿ ನಾವು ಎಷ್ಟು ಹಿಂದೆ ಇದ್ದೇವೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ರಾಜ್ಯದ ಬಹುತೇಕ ನೀರಾವರಿ ಯೋಜನೆಗಳು ನನೆಗುದಿಗೆ ಬಿದ್ದಿವೆ ಅಥವಾ ದಶಕಗಳಿಂದ ಆಮೆಗತಿಯಲ್ಲಿ ಸಾಗುತ್ತಿವೆ. ಕರ್ನಾಟಕ ಏಕೀಕರಣದ ನಂತರ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಹೆಚ್ಚಿನ ನೀರಾವರಿ ಯೋಜನೆಗಳು ಏಕಕಾಲಕ್ಕೆ ಆರಂಭ ಆಗಿವೆ. ತುಲನಾತ್ಮಕವಾಗಿ ನೋಡಿದಾಗ ದಕ್ಷಿಣಕ್ಕೆ ಸಿಕ್ಕಷ್ಟು ಸವಲತ್ತು ಉತ್ತರಕ್ಕೆ ಸಿಗಲಿಲ್ಲ! ಆಡಳಿತಾತ್ಮಕ ಅನುಮೋದನೆ, ಸಕಾಲಿಕ ಮತ್ತು ಸ್ಪಷ್ಟ ನಿರ್ಧಾರಗಳು ಮತ್ತು ಅಗತ್ಯ ಹಣಕಾಸಿನ ನೆರವಿನ ವಿಚಾರದಲ್ಲಿ ಉತ್ತರಕ್ಕೆ ಸದಾ ತಾರತಮ್ಯ ಆಗಿರುವುದು ಖರೆ. ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳು ಇದಕ್ಕೆ ಜ್ವಲಂತ ಉದಾಹರಣೆ. ಇವು ಆ ಭಾಗದ ಜನರ ಮತಗಳನ್ನು ಗಳಿಸುವ ಚುನಾವಣಾ ಸರಕು! ಪಕ್ಷಾತೀತವಾಗಿ, ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಕಳೆದ ನಾಲ್ಕು ದಶಕಗಳಿಂದ ಉತ್ತರದ ಬಹುತೇಕ ಯೋಜನೆಗಳು 'ನಿಂತ ನೀರಿನಂತಾಗಿವೆ'!

ದಾಖಲೆಗಳನ್ನು ಗಮನಿಸಿದಾಗ, ಕರ್ನಾಟಕದಲ್ಲಿ ದಶಕಗಳಿಂದ ನನೆಗುದಿಗೆ ಬಿದ್ದಿರುವ ಪ್ರಮುಖ ನೀರಾವರಿ ಯೋಜನೆಗಳೆಂದರೆ- ಮಹದಾಯಿ, ಮೇಕೆದಾಟು, ಭದ್ರಾ ಮೇಲ್ದಂಡೆ, ಕೃಷ್ಣಾ ಮೇಲ್ದಂಡೆ ಮತ್ತು ನವಲಿ ಏಕೀಕೃತ ಜಲಾಶಯ ಯೋಜನೆ. ಇದಲ್ಲದೆ 30+ ವಿವಿಧ ಸಣ್ಣ ನೀರಾವರಿ ಯೋಜನೆಗಳು ಅಸಮರ್ಪಕ ನಿರ್ವಹಣೆ ಮತ್ತು ಅನುದಾನದ ಕೊರತೆಯಿಂದ ಸ್ಥಗಿತಗೊಂಡಿವೆ. ಈ ಯೋಜನೆಗಳು ಮುಖ್ಯವಾಗಿ ಅಂತಾರರಾಜ್ಯ ಜಲವಿವಾದಗಳು (ಮಹದಾಯಿ, ಕಾವೇರಿ), ಪರಿಸರ ಮತ್ತು ಅರಣ್ಯ ಇಲಾಖೆಗಳ ಅನುಮತಿಯಲ್ಲಿ ವಿಳಂಬ, ಭೂಸ್ವಾಧೀನ ಮತ್ತು ಪುನರ್ವಸತಿ ಪ್ರಕ್ರಿಯೆಯಲ್ಲಿನ ಸಮಸ್ಯೆಗಳು, ದುಬಾರಿ ಕಾಮಗಾರಿ ವೆಚ್ಚ ಮತ್ತು ಅನುದಾನದ ಕೊರತೆಯಿಂದ ವಿಳಂಬವಾಗುತ್ತಿವೆ, ನಿಂತಿವೆ!

ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ಪ್ರಮುಖ ಯೋಜನೆಗಳಿವು:

- ಕರ್ನಾಟಕದ ಈಗಿನ ಕಾಂಗ್ರೆಸ್ ಸರಕಾರವು ಮೇಕೆದಾಟು ಯೋಜನೆಯ ಹೆಸರಿನಲ್ಲಿ ಪಾದಯಾತ್ರೆ ಮಾಡಿ ಅಧಿಕಾರಕ್ಕೆ ಬಂತು. ಕಾವೇರಿ ಜಲಾನಯನ ಪ್ರದೇಶದ ಈ ಯೋಜನೆಗೆ ತಮಿಳುನಾಡಿನ ವಿರೋಧ, ಪರಿಸರ ಕಾಳಜಿ ಮುಂತಾದ ಕಾನೂನು ಅಡಚಣೆಗಳು ಮುಗಿದಿಲ್ಲ.
- ಮಹದಾಯಿ ಯೋಜನೆಗೆ ಪರಿಸರ ಇಲಾಖೆಯ ಅನುಮತಿ ವಿಳಂಬವಾಗುತ್ತಿದೆ. ಗೋವಾ ರಾಜ್ಯದೊಂದಿಗಿನ ವಿವಾದವೂ ಕಾಮಗಾರಿ ವಿಳಂಬಕ್ಕೆ ಇನ್ನೊಂದು ಕಾರಣ.
- ತುಂಗಭದ್ರಾ ಅಣೆಕಟ್ಟಿನ ಹೂಳೆತ್ತುವ ಮತ್ತು ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣದ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿವೆ.
- ಭದ್ರಾ ಮೇಲ್ದಂಡೆ ಯೋಜನೆಯು ಸಾಕಷ್ಟು ಅನುದಾನದ ಕೊರತೆಯನ್ನು ಎದುರಿಸುತ್ತಿದೆ; ಕೇಂದ್ರದಿಂದ ಅಗತ್ಯವಿರುವ ಹಣ ಇನ್ನೂ ಬಿಡುಗಡೆ ಆಗದಿರುವುದು ಈ ಯೋಜನೆಯ ವಿಳಂಬಕ್ಕೆ ಕಾರಣ.
- ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಪರಿಸರ ನಾಶದ ಆರೋಪ ಮತ್ತು ಟೆಂಡರ್ ಪ್ರಕ್ರಿಯೆಯ ವಿವಾದಗಳಿಂದಾಗಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.
- ಕೃಷ್ಣಾ ಮೇಲ್ದಂಡೆ ಯೋಜನೆಯು (ಹಂತ 3) ಜಲಾಶಯದ ಎತ್ತರವನ್ನು ಹೆಚ್ಚಿಸುವುದರಿಂದ ಭೂಮಿ ಕಳೆದುಕೊಳ್ಳುವ ಜನರಿಗೆ ಪುನರ್ವಸತಿ ಕಲ್ಪಿಸುವಲ್ಲಿನ ವಿಳಂಬದ ಕಾರಣ ಇನ್ನೂ ಕಡತಗಳಲ್ಲೇ ಉಳಿದಿದೆ.

ಇದು ಕೆಲವೇ ಸ್ಯಾಂಪಲ್‌ಗಳು ಅಷ್ಟೇ! 'ನಮ್ಮ ಸರಕಾರಗಳು ಲಭ್ಯವಿರುವ ಜಲಸಂಪನ್ಮೂಲವನ್ನು ಉಪಯೋಗಿಸುವಲ್ಲಿ ಸಂಪೂರ್ಣ ಸೋತಿವೆ' ಎನ್ನುವುದು ಈ ಕೆಳಗಿನ ವಿವರಗಳಿಂದ ಸ್ಪಷ್ಟವಾಗುತ್ತದೆ. ಒಂದು ಅಂದಾಜಿನ ಪ್ರಕಾರ, ಬಹುತೇಕ ಕರ್ನಾಟಕವನ್ನು ಸಮೃದ್ಧಗೊಳಿಸಲು ಕೃಷ್ಣಾ ನದಿ ನೀರು ಸಮರ್ಪಕವಾಗಿ ಹಂಚಿಕೆಯಾದರೆ ಸಾಕು! ಕೃಷ್ಣೆಯ ಒಡಲು ಅಕ್ಷರಶಃ ಅಕ್ಷಯಪಾತ್ರೆ. ಆಗಿನ ಬಚಾವತ್ ಆಯೋಗದ ತೀರ್ಪಿನಲ್ಲಿ ರಾಜ್ಯಕ್ಕೆ 734 ಟಿಎಂಸಿ ಹಂಚಿಕೆಯಾಗಿದೆ. ನಂತರ ಕೃಷ್ಣಾ ನ್ಯಾಯಾಧಿಕರಣ-2ರಲ್ಲಿ ಮತ್ತೆ 173 ಟಿಎಂಸಿ ನೀರು ನೀಡಲಾಗಿದೆ. ಇದರ ನಡುವೆ ಪೋಲಾವರಂ ಡೈವರ್ಷನ್ ಮೂಲಕ 21 ಟಿಎಂಸಿ ನೀರು ಲಭ್ಯವಿದೆ. ಕೃಷ್ಣೆಯಿಂದ ಕರ್ನಾಟಕಕ್ಕೆ 928 ಟಿಎಂಸಿ ನೀರು ಲಭ್ಯವಿದೆ ಮತ್ತು ಇದು 5.94 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸಲಿದೆ! ಇಷ್ಟೆಲ್ಲಾ ನೀರನ್ನು ಪೂರ್ಣ ಪ್ರಮಾಣದಲ್ಲಿ, ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗದಿರುವುದು ರಾಜ್ಯದ ದೌರ್ಭಾಗ್ಯ, ಅಷ್ಟೇ! ನಮ್ಮ ನೆಲದ ನೀರನ್ನು ಸಮರ್ಪಕವಾಗಿ ಬಳಸಲಾಗದೇ ಇರುವ ಇಂಥ ಇನ್ನೂ ಕೆಲವು ಅಪ್ರಯೋಜಕ ಯೋಜನೆಗಳು ಚಾಲ್ತಿಯಲ್ಲಿವೆ.

ನೀರಿನ ಕುರಿತಾದ ದೇವೇಗೌಡರ ಕಳಕಳಿ ಮೆಚ್ಚಬೇಕಾದದ್ದು. ಇಳಿವಯಸ್ಸಿನಲ್ಲೂ ರಾಜ್ಯದ ನೀರಾವರಿಯ ಕುರಿತು ಅವರು ಎತ್ತಿರುವ ಧ್ವನಿ ಅವರ ಜನಪರ-ರೈತಪರ ಕಾಳಜಿಯ ಪ್ರತೀಕ. ಹಾಗೆಂದು ಅವರು ವಿನಂತಿಸಿದ ಕೂಡಲೇ ರಾಜ್ಯದಲ್ಲಿ ಕುಂಟುತ್ತಾ ಸಾಗುತ್ತಿರುವ ಅಥವಾ ನಿಂತಿರುವ ವಿವಿಧ ನೀರಾವರಿ ಯೋಜನೆಗಳು ಬೇಕಾದ ಪ್ರಮಾಣಪತ್ರ, ಆರ್ಥಿಕ ನೆರವು ಮುಂತಾದುವನ್ನೆಲ್ಲ ದೊರಕಿಸಿಕೊಂಡು, ನಾಳೆಯಿಂದಲೇ ಕಾಮಗಾರಿ ಶುರುವಾದೀತೆಂಬ ಹಗಲುಗನಸೂ ಇಲ್ಲವೆನ್ನಿ.

ದೇವೇಗೌಡರ ಈ ಮನವಿಯು ಕೇಂದ್ರ ಮತ್ತು ರಾಜ್ಯದಲ್ಲಿರುವ ಆಳುವವರಿಗೆ ಎಚ್ಚರಿಕೆಯ ಗಂಟೆ. ಯಾಕೆಂದರೆ ಈವರೆಗಿನ ಯಾವುದೇ ಸರಕಾರಗಳು ಜನಹಿತಕ್ಕಾಗಿ ಕೆಲಸ ಮಾಡಿ, ಜನರ ಮೂಲಭೂತ ಅಗತ್ಯಗಳಾದ ದೈನಂದಿನ ಉಪಯೋಗಕ್ಕೆ ಮತ್ತು ಕೃಷಿಗೆ ಬೇಕಾದಷ್ಟು ನೀರನ್ನು ಒದಗಿಸುವ ಕನಿಷ್ಠ ಕೆಲಸವನ್ನು ಮಾಡಲೇ ಇಲ್ಲ. ಜನರಿಗೆ ಮತ್ತು ಕೃಷಿಗೆ ಅನುಕೂಲವಾಗುವ ನೀರಾವರಿ ಯೋಜನೆಗಳಿಗೆ ಬಂದೊದಗಿರುವ ಕಂಟಕಗಳನ್ನು ನಿವಾರಿಸುವ, ವಿವಿಧ ಇಲಾಖೆಗಳಿಂದ ಸಿಗಬೇಕಾದ ಅನುಮತಿಗಳನ್ನು ತ್ವರಿತವಾಗಿ ಪಡೆದು, ನೆರೆ ರಾಜ್ಯಗಳೊಂದಿಗಿನ ಜಲವ್ಯಾಜ್ಯವನ್ನು ಪರಿಹರಿಸಿ, ಬೇಕಾದ ಆರ್ಥಿಕ ಅನುದಾನ ಒದಗಿಸಿ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಜೋಡೆತ್ತುಗಳ ಮಾದರಿಯಲ್ಲಿ ಕೆಲಸ ಮಾಡಿದಾಗ ಮಾತ್ರ ನನೆಗುದಿಯಲ್ಲಿರುವ ಎಲ್ಲ ನೀರಾವರಿ ಯೋಜನೆಗಳು ಪೂರ್ಣವಾಗಿ, ಜನರಿಗೆ ಅವುಗಳ ಸದುಪಯೋಗ ಸಿಗಲು, ಕೃಷಿಗೆ ಭರಪೂರ ನೀರು ವರ್ಷದ 365 ದಿನಗಳಲ್ಲೂ ಸಿಗಲು ಸಾಧ್ಯ. ನೀರಿನ ವಿಚಾರದಲ್ಲಿ ಸದಾ ತಮಿಳುನಾಡು, ಮಹಾರಾಷ್ಟ್ರ ಮತ್ತು ಗೋವಾ ಪರವಾಗಿ ನಿಲ್ಲುವ ನ್ಯಾಯಮಂಡಳಿಗಳು ಕರ್ನಾಟಕದ ನೀರೊತ್ತಾಯವನ್ನೂ ಆಲಿಸಿ, ಸಕಾರಾತ್ಮಕವಾಗಿ ನೆರವಾಗಬೇಕು.

ದೇವೇಗೌಡರ ಆಶಯ ಆದಷ್ಟು ಶೀಘ್ರವಾಗಿ ಈಡೇರಲಿ. ಕೇಂದ್ರವು ಈ ನಿಟ್ಟಿನಲ್ಲಿ ದೊಡ್ಡ ಮನಸು ಮಾಡಿ ರಾಜ್ಯ ಸರಕಾರಗಳೊಂದಿಗೆ ಚರ್ಚಿಸಿ, ವಿಸ್ತೃತ ಕಾರ್ಯಯೋಜನೆ ಹಾಕಿಕೊಂಡು ಜಾರಿಗೊಳಿಸಲಿ. ನಿಂತ ನೀರಿನಂತಾದ ಕರ್ನಾಟಕದ ಎಲ್ಲಾ ನೀರಾವರಿ ಯೋಜನೆಗಳು ತ್ವರಿತವಾಗಿ ಪೂರ್ಣಗೊಂಡು, ಜಲಾಶಯಗಳಲ್ಲಿ ನೀರು ತುಂಬಿ ತುಳುಕಲಿ. ರಾಜ್ಯಕ್ಕೆ ಅಂಟಿದ ನೀರಿನ ಶಾಪ ವಿಮೋಚನೆಯಾಗಲಿ. ಜೀವರಕ್ಷಕ ನೀರು ಕೃಷಿಕರ ಬಾಳಿಗೂ ಸಂಜೀವಿನಿಯಾಗಲಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ನೈರ್ಮಲ್ಯದ ತುಡಿತಕ್ಕೆ ದನಿಯಾಗುವಿಕೆ

ಕಳಕಳಿ

ಲಲಿತಾ ಪಣಿಕ್ಕರ್
vveditoped@gmail.com

ಬಿಬಿಸಿ ಸುದ್ದಿಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸುಪ್ರಸಿದ್ಧ ಉದ್ಘೋಷಕ/ಪ್ರಸಾರಕ ಮಾರ್ಕ್ ಟಲಿ ಅವರು ಇತ್ತೀಚೆಗಷ್ಟೇ ಅಸುನೀಗಿದ್ದು ಗೊತ್ತಿರುವ ಸಂಗತಿಯೇ; ಭಾರತದಂಥ ವಿಶಾಲ ಮತ್ತು ವೈವಿಧ್ಯಮಯ ದೇಶದಲ್ಲಿ, ಒಂದು ಸಂವಹನ ವಾಹಕವಾಗಿ ರೇಡಿಯೋಗೆ ಇರುವ ಮಹತ್ವವನ್ನು ಈ ಸಾವು ಮುನ್ನೆಲೆಗೆ ತಂದಿತು ಎನ್ನಲಡ್ಡಿಯಿಲ್ಲ. ಈ ಕಾರಣದಿಂದಾಗಿಯೇ, ಸ್ವಚ್ಛ ಭಾರತ ಅಭಿಯಾನದ ಧ್ಯೇಯೋದ್ದೇಶಗಳನ್ನು ಬಲಪಡಿಸಲಿಕ್ಕಾಗಿ ದೇಶದ 4 ರಾಜ್ಯಗಳಲ್ಲಿ 25 ಸಮುದಾಯ ರೇಡಿಯೋ ಕೇಂದ್ರಗಳೊಂದಿಗೆ ಕಾರ್ಯನಿರ್ವಹಿಸುವ, ದೆಹಲಿಯ UNICEF ಬೆಂಬಲವನ್ನು ಹೊಂದಿರುವ, WASH-CCES ತಂಡದ ಯೋಜನೆಯಾದ Seeking Modern Applications for Real Transformation (SMART) ನ ಕಾರ್ಯ ಚಟುವಟಿಕೆಯು ತುಂಬಾ ಪ್ರಸ್ತುತವೆನಿಸುತ್ತದೆ. ಮಧ್ಯಪ್ರದೇಶದ ಝಬುವಾ ಪಟ್ಟಣದಿಂದ ವರದಿಯಾಗಿರುವ ನಿದರ್ಶನವೊಂದು, ದೂರದ ಕೊಂಪೆಗಳಲ್ಲಿ ಸಮುದಾಯ ರೇಡಿಯೋ ವ್ಯವಸ್ಥೆಗೆ ಇರುವ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಶಾಂತಿ ದಮೋರ್ ಎಂಬ 25ರ ಹರೆಯದ ಯುವತಿಯು ತನ್ನ ಮದುವೆಯ ನಂತರ, ಝಬುವಾ ಪಟ್ಟಣದಿಂದ ಕೇವಲ 7 ಕಿ.ಮೀ.ನಷ್ಟು ದೂರದಲ್ಲಿರುವ ಮೋಹನ್‌ಪುರ ಎಂಬ ಗ್ರಾಮಕ್ಕೆ ಸ್ಥಳಾಂತರಗೊಳ್ಳಬೇಕಾಗಿ ಬಂದಾಗ, ಗ್ರಾಮೀಣ ಜೀವನವು ವಿಭಿನ್ನವಾಗಿರುತ್ತದೆ ಎಂದೇ ನಿರೀಕ್ಷಿಸಿದ್ದಳು. 'ಭಿಲ್' ಎಂಬ ಬುಡಕಟ್ಟು ಸಮುದಾಯದಲ್ಲಿ ಜನಿಸಿದ್ದ ಆಕೆ ಕಾಲೇಜಿನವರೆಗೆ ವಿದ್ಯಾಭ್ಯಾಸ ಮಾಡಿದ್ದಳು ಮತ್ತು ಆ ಶಿಕ್ಷಣದಿಂದ ದಕ್ಕಿದ ಅಭ್ಯಾಸಗಳು ಮತ್ತು ಪರಿಕಲ್ಪನೆಗಳನ್ನು ಮೈಗೂಡಿಸಿಕೊಂಡಿದ್ದಳು. ಆದರೆ ಮೋಹನ್‌ಪುರ ಗ್ರಾಮದಲ್ಲಿ, ಎಲ್ಲಕ್ಕಿಂತ ಹೆಚ್ಚಾಗಿ ಒಂದು ಕಹಿವಾಸ್ತವವು ಆಕೆಗೆ ಆಘಾತವನ್ನುಂಟುಮಾಡಿತು. ಅದೆಂದರೆ, ಆಕೆಯ ಹೊಸಮನೆಯಲ್ಲೊಂದು ಶೌಚಾಲಯವು ಇದ್ದುದರ ಹೊರತಾಗಿಯೂ, ಯಾರೊಬ್ಬರೂ ಅದನ್ನು ಬಳಸುತ್ತಿರಲಿಲ್ಲ! ಬದಲಿಗೆ ಅದೊಂದು ಉಗ್ರಾಣವಾಗಿ ಮಾರ್ಪಟ್ಟಿತ್ತು. ಆ ಕುಟುಂಬಿಕರು ಶೌಚದ ಉದ್ದೇಶಗಳಿಗಾಗಿ ಬಳಸುತ್ತಿದ್ದುದು ಹೊಲಗಳನ್ನು, ತೆರೆದ ಬಯಲುಗಳನ್ನು!

ಈ ಕಹಿವಾಸ್ತವವು ರಾಚುತ್ತಿದ್ದಂತೆ ಶಾಂತಿ ದಮೋರ್ ತೀವ್ರ ಕಸಿವಿಸಿಗೆ ಒಳಗಾದಳು, ಅಸಮಾಧಾನವು ಅವಳನ್ನು ಆವರಿಸಿತು. ಶೌಚಕ್ಕೆಂದು ಪ್ರತಿದಿನವೂ ಮನೆಯಿಂದಾಚೆಗೆ ಹೆಜ್ಜೆಹಾಕಿ ಬಯಲು ಪ್ರದೇಶಕ್ಕೆ ತೆರಳುವುದು ಅವಳ ಪಾಲಿಗೆ ಅಸುರಕ್ಷಿತ ಮತ್ತು ಅನನುಕೂಲಕರ ನಡೆಯಾಗಿದ್ದರ ಜತೆಗೆ, ಅವಳ ಖಾಸಗಿತನದ ಉಲ್ಲಂಘನೆಯೂ ಆಗಿತ್ತು. ಇಷ್ಟಾಗಿಯೂ, ತನ್ನ ಅತ್ತೆ-ಮಾವನ ಹಳೆಯ ಅಭ್ಯಾಸಗಳನ್ನು ಬದಲಾಯಿಸುವುದು ತಾನು ಅಂದುಕೊಂಡಷ್ಟು ಸುಲಭವಲ್ಲ ಎಂಬುದೂ ಅವಳಿಗೆ ಗೊತ್ತಿತ್ತು. ಹೀಗಾಗಿ, ಮೊದಮೊದಲಿಗೆ ಆಕೆ ಮೌನವಾಗಿದ್ದಳು. ಹಾಗೆಂದ ಮಾತ್ರಕ್ಕೆ, ಈ ಕಹಿವಾಸ್ತವವನ್ನು ದೀರ್ಘಾವಧಿಯವರೆಗೆ ಜೀರ್ಣಿಸಿಕೊಳ್ಳಲು ಅವಳು ಸಿದ್ಧಳಿರಲಿಲ್ಲ.

ಆದರೆ, 'ರೇಡಿಯೋ ತಾಂತ್ಯ'ಕ್ಕೆ ಸೇರಿದ ತಂಡವೊಂದು ಆ ಗ್ರಾಮಕ್ಕೆ ನೀಡಿದ ಭೇಟಿಯು ತಿರುವಿನ ಘಟ್ಟವಾಗಿ ಪರಿಣಮಿಸಿತು. ಶಾಂತಿ ದಮೋರ್ ಕೂಡ ಓರ್ವ ಸದಸ್ಯೆಯಾಗಿದ್ದ ಸ್ಥಳೀಯ ಮಹಿಳೆಯರ 'ಸ್ವ-ಸಹಾಯ ಗುಂಪನ್ನು' (ಎಸ್‌ಎಚ್‌ಜಿ) ಈ ತಂಡವು ಭೇಟಿಮಾಡಿ, ನೈರ್ಮಲ್ಯ ಮತ್ತು ಮಹಿಳೆಯರ ಘನತೆಯ ಬಗ್ಗೆ, ಶೌಚಾಲಯಗಳು ಏಕೆ ಮುಖ್ಯ ಎಂಬುದರ ಕುರಿತು ಸರಳವಾಗಿ, ನೇರವಾಗಿ, ಮನಕ್ಕೆ ಮುಟ್ಟುವಂತೆ ಮಾತನಾಡಿತು. ಒಂದು ಪುಟ್ಟ ವರ್ಗೀಕರಣದ ಮೂಲಕ ಕುಟುಂಬಗಳು ಹೇಗೆ 36 ರೋಗಗಳನ್ನು ತಡೆಗಟ್ಟಬಹುದು ಎಂಬುದನ್ನೂ ಈ ತಂಡವು ವಿವರಿಸಿತು. ತನ್ನ ಸಮುದಾಯದ ಇತರ ಮಹಿಳೆಯರೊಂದಿಗೆ ಕುಳಿತು ಇವೆಲ್ಲವನ್ನೂ ಆಲಿಸುತ್ತಿದ್ದ ಶಾಂತಿ ದಮೋರ್, ತನಗಿದ್ದ ಹಿಂಜರಿಕೆಯೇ ಈಗ ದೃಢನಿಶ್ಚಯವಾಗಿ ಬದಲಾಗುತ್ತಿದೆ ಅಂದುಕೊಂಡಳು.

ತನ್ನ ವಿವಾಹದ ಕೆಲ ತಿಂಗಳ ನಂತರ ತಾನು ಸೇರ್ಪಡೆಗೊಂಡಿದ್ದ ಸ್ವ-ಸಹಾಯ ಗುಂಪಿನಲ್ಲಿ ಆಕೆಗೆ ಇತರ ಮಹಿಳೆಯರ ಒಡನಾಟವೂ ದಕ್ಕಿತು; ಈ ಪೈಕಿ ಅನೇಕರು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಅಸಮಾಧಾನ ಮತ್ತು ಮುಜುಗರಕ್ಕೆ ಒಳಗಾಗಿದ್ದರೂ, ಅದರ ಬಗ್ಗೆ ಎಂದಿಗೂ ದನಿಯೆತ್ತಿರಲಿಲ್ಲ. ಇದು ಶಾಂತಿ ದಮೋರ್‌ಳನ್ನು ಆಳವಾಗಿ ತಟ್ಟಿತು. ಮನೆಯ ಮಕ್ಕಳು ಮತ್ತೆ ಮತ್ತೆ ಅನಾರೋಗ್ಯಕ್ಕೆ ಒಳಗಾಗುತ್ತಿದ್ದುದು, ಶೌಚಕ್ಕೆಂದು ಹೊಲಗಳು/ತೆರೆದ ಬಯಲುಗಳಿಗೆ ನಡೆದುಕೊಂಡು ಹೋಗುವಾಗಿನ ಮುಜುಗರ ಮತ್ತು ಮನೆಯಲ್ಲಿದ್ದ ಶೌಚಾಲಯವು ಧೂಳುಹಿಡಿದುಕೊಂಡಿದ್ದುದು ಮುಂತಾದ ದೃಶ್ಯಗಳನ್ನೆಲ್ಲಾ ಶಾಂತಿ ನೆನಪಿಸಿಕೊಂಡಳು. 'ಇನ್ನು ಈ ದುಸ್ಥಿತಿಗೆ ಒಡ್ಡಿಕೊಳ್ಳಲಾಗದು, ಇದು ಸುಧಾರಿಸುತ್ತದೆ ಅಂತ ಇನ್ನು ಕಾಯಲಾಗದು' ಎಂದು ಅವಳು ನಿರ್ಧರಿಸಿದಳು.

''ಮನೆಯ ಶೌಚಾಲಯವನ್ನು ಇನ್ನಾದರೂ ದುರಸ್ತಿ ಮಾಡಿಸಬೇಕು ಹಾಗೂ ಅದನ್ನು ಕುಟುಂಬಿಕರೆಲ್ಲರೂ ಬಳಸುವಂತಾಗಬೇಕು, ಇಲ್ಲವಾದಲ್ಲಿ ನಾನು ಮನೆಯನ್ನು ಬಿಟ್ಟು ತವರಿಗೆ ಹೋಗಿಬಿಡುವೆ'' ಎಂದು ಶಾಂತಿ ತನ್ನ ಪತಿಯ ಬಳಿ ದೃಢವಾಗಿ ಹೇಳಿಬಿಟ್ಟಳು. ಕಾರಣವನ್ನು ವಿವರಿಸುವ ಹಾಗೂ ಬೆದರಿಸುವ ಈ ಎರಡೂ ಮಾರ್ಗವನ್ನು ಬಳಸಿ ಪತಿಯ ಮನವೊಲಿಸುವಲ್ಲಿ ಆಕೆ ಸಫಲಳಾದಳು. ಪತಿ-ಪತ್ನಿ ಜತೆಗೂಡಿ ಶೌಚಾಲಯದಲ್ಲಿ ತುಂಬಿಟ್ಟಿದ್ದ ವಸ್ತುಗಳನ್ನು ತೆರವುಗೊಳಿಸಿದರು, ಮುರಿದುಹೋಗಿದ್ದ ಪೈಪುಗಳನ್ನು ಸರಿಪಡಿಸಿದರು ಹಾಗೂ ಮರುಬಳಕೆಗೆ ಸಾಧ್ಯವಾಗುವವರೆಗೆ ಆ ಒಂದಿಡೀ ಜಾಗವನ್ನು ಉಜ್ಜಿ ಚೊಕ್ಕಗೊಳಿಸಿದರು. ಪರಿಣಾಮವಾಗಿ, ಎರಡೇ ದಿನಗಳಲ್ಲಿ ಶೌಚಾಲಯವು ದುರಸ್ತಿಯಾಯಿತು. ಕುಟುಂಬಿಕರೆಲ್ಲಾ ಅದನ್ನು ಬಳಸಲು ಶುರುಮಾಡಿದರು.

ಶಾಂತಿ ದಮೋರ್ ಕೈಗೊಂಡ ಕಾರ್ಯವು ಆಕೆಯ ಮನೆಗೆ ಮಾತ್ರವೇ ಸೀಮಿತವಾಗಲಿಲ್ಲ. ಆಕೆ ತನ್ನ ಈ ಸಾಹಸಗಾಥೆಯನ್ನು ಮಹಿಳಾ ಸ್ವ-ಸಹಾಯ ಗುಂಪಿನ ಮುಂದಿನ ಸಭೆಯಲ್ಲಿ ಎಲ್ಲರೊಂದಿಗೆ ಹಂಚಿಕೊಂಡಾಗ, ಬರೋಬ್ಬರಿ ಎಂಟು ಕುಟುಂಬಗಳು ಈ ಮಾರ್ಗವನ್ನು ಅನುಸರಿಸಲು ಮುಂದಾದವು. ವರ್ಷಗಳಿಂದ ನಿರ್ಲಕ್ಷಿಸಲ್ಪಟ್ಟಿದ್ದ ಶೌಚಾಲಯಗಳು ಸ್ವಚ್ಛಗೊಂಡವು ಹಾಗೂ ಬಳಕೆಗೆ ಮುಕ್ತವಾದವು. ಈಗ ತಮ್ಮಲ್ಲಿ ಯಾವ ತೆರನಾದ ಸುರಕ್ಷಿತ ಭಾವನೆ ನೆಲೆಯೂರಿದೆ ಎಂಬುದನ್ನು ಮಹಿಳೆಯರು ಮುಕ್ತವಾಗಿ ಹೇಳಿಕೊಂಡರು; ಇನ್ನು ಮುಂದೆ ಶೌಚಕ್ಕೆಂದು ದೂರದ ಬಯಲಿನವರೆಗೆ ಹೆಜ್ಜೆಹಾಕುವ ಅಗತ್ಯವಿಲ್ಲ ಎಂಬುದನ್ನು ಮನಗಂಡ ಮಕ್ಕಳೂ ನಿರಾಳರಾದರು. ಇದಾದ ಕೆಲ ದಿನಗಳ ನಂತರ, ತ್ಯಾಜ್ಯ ನಿರ್ವಹಣೆಯ ಕುರಿತಾದ 'ರೇಡಿಯೋ ತಾಂತ್ಯ'ದ ಮತ್ತೊಂದು ಕಾರ್ಯಕ್ರಮವೂ, ಈ ಮಹಿಳಾ ಸ್ವ-ಸಹಾಯ ಗುಂಪು ಮತ್ತೊಮ್ಮೆ ಕಾರ್ಯಾಚರಣೆಗೆ ಇಳಿಯಲು ಪ್ರೇರಣೆ ನೀಡಿತು. ಹೀಗೆ ಪ್ರೇರಿತರಾಗಿ ಒಗ್ಗೂಡಿದ ಮಹಿಳೆಯರು, ತೆರೆದ ಸ್ಥಳಗಳಲ್ಲಿ ಕಸ/ತ್ಯಾಜ್ಯವನ್ನು ಸುರಿಯುವುದರಿಂದ ಒದಗುವ ಅಪಾಯಗಳ ಬಗ್ಗೆ ಚರ್ಚಿಸಿದರು.

ತ್ಯಾಜ್ಯ ಸಂಗ್ರಹಣೆಯ ಅಗತ್ಯವನ್ನು ಮನಗಂಡ ಮಹಿಳಾ ಸ್ವ-ಸಹಾಯ ಗುಂಪು ಶಾಂತಿಯ ನೇತೃತ್ವದಲ್ಲಿ ಟೊಂಕಕಟ್ಟಿ, ಗ್ರಾಮದ ಶಾಲೆಯ ಬಳಿಯಿದ್ದ ಹಳೆಯ ತಿಪ್ಪೆಗುಂಡಿಯೊಂದನ್ನು ಸ್ವಚ್ಛಗೊಳಿಸಿತು. ಹೀಗೆ ಸಂಗ್ರಹಿಸಲಾದ ತ್ಯಾಜ್ಯವನ್ನು ಕೃಷಿಕಾರ್ಯಕ್ಕೆಂದು ಗೊಬ್ಬರವಾಗಿ ಪರಿವರ್ತಿಸಲು ಯೋಜನೆಗಳನ್ನು ರೂಪಿಸಲಾಯಿತು; ಒಟ್ಟಿನಲ್ಲಿ, ನೈರ್ಮಲ್ಯ ಕಾರ್ಯವು ಜೀವನೋಪಾಯದೊಂದಿಗೆ ಸಂಪರ್ಕವನ್ನು ಹೊಂದುವುದಕ್ಕೆ ಸಾಧ್ಯವಾಯಿತು.

ಇಂದು ಮೋಹನಪುರ ಗ್ರಾಮದಲ್ಲಿನ ನೈರ್ಮಲ್ಯವು 'ಶಾಂತಿ ದಮೋರ್' ಎಂಬ ಯುವತಿಯು ಎತ್ತಿದ ದನಿಗೆ ನಿಕಟವಾಗಿರುವ ಸಕಾರಾತ್ಮಕ ಪ್ರತಿಧ್ವನಿಯಂತೆ ತೋರುತ್ತದೆ. ಇದರಿಂದ ಮತ್ತಷ್ಟು ಪ್ರೇರಣೆಗೊಂಡಿರುವ ಮಹಿಳಾ ಸ್ವ-ಸಹಾಯ ಗುಂಪು, ತನ್ನ ಪ್ರತಿಯೊಂದು ಸಭೆಯಲ್ಲೂ ನೈರ್ಮಲ್ಯದ ವಿಷಯವನ್ನು ಒಂದು ಪ್ರಮುಖ ಕಾರ್ಯಸೂಚಿಯಾಗಿ ಪರಿಗಣಿಸಿದೆ ಹಾಗೂ ಈ ನಿಟ್ಟಿನಲ್ಲಿ ಪ್ರತಿಯೊಂದು ಕುಟುಂಬವನ್ನೂ ನಿಯತವಾಗಿ ಮೇಲ್ವಿಚಾರಣೆ ಮಾಡಲು ನಿರ್ಣಯಿಸಿದೆ. ಸಮುದಾಯ ರೇಡಿಯೋದ ಶಕ್ತಿಯಿಂದ ಉಂಟಾದ ಈ ರೂಪಾಂತರವು, ಕೌಟುಂಬಿಕ ಹಿಂಸೆ ಸೇರಿದಂತೆ ಹತ್ತು ಹಲವು ಸಮಸ್ಯೆಗಳನ್ನು ನಿಭಾಯಿಸುವ ನಿಟ್ಟಿನಲ್ಲಿ ದೇಶದ ಇತರ ಭಾಗಗಳಲ್ಲೂ ಪುನರಾವರ್ತನೆಯಾಗಿದೆ. ಹೊಸ ಸಮಸ್ಯೆಗಳು ಉದ್ಭವಿಸಿದಾಗೆಲ್ಲಾ ತಾವು ಸಮುದಾಯ ರೇಡಿಯೋ ವ್ಯವಸ್ಥೆಯಿಂದ ನೆರವನ್ನು ಪಡೆಯಬಹುದು ಎಂಬುದು ಶಾಂತಿ ದಮೋರ್ ಮತ್ತು ಇತರ ಮಹಿಳೆಯರಿಗೆ ಈಗ ಅರಿವಾಗಿದೆ.

(ಲೇಖಕಿ ಹಿರಿಯ ಪತ್ರಕರ್ತೆ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 26

ಸಮಾಚಾರ ಸಣ್ಣದಲ್ಲ

ಬಿಜೆಪಿಗೆ ಮತಹಾಕಿದ ಎಐಎಂಐಎಂ ಸದಸ್ಯೆ

ಸಂಭಾಜಿನಗರ: ಮಹಾರಾಷ್ಟ್ರ ರಾಜ್ಯದ ಅಮರಾವತಿ ಮಹಾನಗರ ಪಾಲಿಕೆಯ ಮೇಯರ್ ಚುನಾವಣೆ ಭಾನುವಾರ ನಡೆದಿದ್ದು, ಬಿಜೆಪಿ ಪಕ್ಷವನ್ನು ತೀವ್ರವಾಗಿ ವಿರೋಧಿಸುವ 'ಆಲ್ ಇಂಡಿಯ ಮಜ್ಲಿಸ್ ಎ ಇತ್ತೆಹಾದುಲ್ ಮುಸ್ಲಮೀನ್'(ಎಐಎಂಐಎಂ) ಪಕ್ಷದ ನೂತನ ಕೌನ್ಸಿಲರ್ ಮೀರಾ ಕಾಂಬ್ಳೆ ಅವರು ಬಿಜೆಪಿಯ ಮೇಯರ್ ಅಭ್ಯರ್ಥಿ ಶ್ರೀಚಂದ್ ತೇಜ್ವಾನಿ ಅವರಿಗೆ ಮತ ಚಲಾಯಿಸಿದ್ದಾರೆ. ಶ್ರೀಚಂದ್ ಮೇಯರ್ ಆಗಿ ಆಯ್ಕೆಯಾಗಿದ್ದಾರೆ. 87 ಸದಸ್ಯ ಬಲದ ಅಮರಾವತಿ ಮಹಾನಗರ ಪಾಲಿಕೆಯಲ್ಲಿ ಎಐಎಂಐಎಂ ಪಕ್ಷ 12 ಸದಸ್ಯ ಬಲ ಹೊಂದಿದೆ. ಮೇಯರ್ ಚುನಾವಣೆಯಲ್ಲಿ ಯಾವ ಪಕ್ಷವನ್ನೂ ಬೆಂಬಲಿಸದೇ ತಟಸ್ಥವಾಗಿರಲು ಸಂಸದ ಅಸಾದುದ್ದೀನ್ ಒವೈಸಿ ನೇತೃತ್ವದ 'ಎಐಎಂಐಎಂ' ಪಕ್ಷದ ಸ್ಥಳೀಯ ನಾಯಕರು ನಿರ್ಧರಿಸಿದ್ದರು. ಆದರೆ, ಪಕ್ಷದ ಆದೇಶ ಉಲ್ಲಂಘಿಸಿ ಬಿಜೆಪಿ ಪರ ಮತ ಚಲಾಯಿಸಿದ ಮೀರಾ ಅವರನ್ನು ಪಕ್ಷದಿಂದ ಹೊರಹಾಕಲಾಗಿದೆ ಎಂದು ಎಐಎಂಐಎಂ ನಾಯಕಿ ಇಮ್ತಿಯಾಜ್ ಜಲೀಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕ ಒಪ್ಪಂದದಿಂದ ಕೃಷಿಕರಿಗೆ ಹಾನಿ ಆಗಲ್ಲ

ಭೋಪಾಲ್: ಅಮೆರಿಕ ಜತೆಗೆ ಇತ್ತೀಚೆಗೆ ಮಾಡಿಕೊಂಡ ವ್ಯಾಪಾರ ಒಪ್ಪಂದ ನೋಡಿದರೆ ಅಮೆರಿಕಕ್ಕೆ ಭಾರತ ಶರಣಾಗಿದೆ ಎಂಬುದು ಸ್ಪಷ್ಟ. ದೇಶದ ರೈತರಿಗೆ ಭಾರಿ

ಹೊಡೆತ ಬೀಳಲಿದೆ ಎಂದು ಕಾಂಗ್ರೆಸ್ ಸೇರಿದಂತೆ ಹಲವು ಪ್ರತಿಪಕ್ಷಗಳ ನಾಯಕರು ಆರೋಪಿಸುತ್ತಿದ್ದರೆ, ಆ ಎಲ್ಲಾ ಆರೋಪಗಳನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನ ತಮ್ಮ ನಿವಾಸದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಶಿವರಾಜ್ ಸಿಂಗ್ ಚೌಹಾಣ್, ರಚನಾತ್ಮಕ ಮಾತುಕತೆ ಮೂಲಕ ಒಪ್ಪಂದ ಮಾಡಿಕೊಂಡಿದ್ದೇವೆ. ಯಾವುದೇ 'ಸೌದೆಬಾಜಿ' (ಚೌಕಾಶಿ) ನಡೆಸಿಲ್ಲ ಎಂದು ಹೇಳಿದ್ದಾರೆ. ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದವೇನೂ ಭಾರತದ ಕೃಷಿ ಕ್ಷೇತ್ರಕ್ಕೆ ಹಾನಿ ಮಾಡುವುದಿಲ್ಲ, ಬದಲಾಗಿ ಪೂರ್ಣ ರಕ್ಷಣೆ ನೀಡುತ್ತದೆ. ದೇಶದ ರೈತರು ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ಭಾರತ ಸರಕಾರ ಕಾಪಾಡಿದೆ. ಭಾರತದ ಕೃಷಿ ಕ್ಷೇತ್ರದಲ್ಲಿನ ಪ್ರಮುಖ ಉತ್ಪನ್ನಗಳನ್ನು ಒಪ್ಪಂದದ ಚೌಕಟ್ಟಿನಿಂದ ಹೊರಗಿಡಲಾಗಿದೆ. ಭಾರತದ ರೈತರಿಗೆ ಸಣ್ಣ ಹಾನಿ ಮಾಡುವ ಯಾವುದೇ ಅಂಶವನ್ನೂ ಈ ಒಪ್ಪಂದದಲ್ಲಿ ಸೇರಿಸಲಾಗಿಲ್ಲ ಎಂದು ಸಚಿವ ಚೌಹಾಣ್ ವಿವರಿಸಿದ್ದಾರೆ.

ರಷ್ಯಾತೈಲ ಖರೀದಿ ಪ್ರಮಾಣ ಇಳಿಮುಖ?

ದೆಹಲಿ: ಅಮೆರಿಕ ಜತೆಗಿನ ಇತ್ತೀಚಿನ ಒಪ್ಪಂದದ ಪೂರ್ಣ ಜಾರಿಗಾಗಿ ಭಾರತ, ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ಕಡಿಮೆ ಮಾಡಲಿದೆ. ಆದರೆ ಪೂರ್ಣವಾಗಿ ಸ್ಥಗಿತಗೊಳಿಸುವುದಿಲ್ಲ ಎಂದು ಮೂಲಗಳಿಂದ ತಿಳಿದುಬಂದಿದೆ. ಏಕೆಂದರೆ, ತೈಲ ಸಂಸ್ಕರಣಾ ಕ್ಷೇತ್ರದ 'ನಯಾರಾ ಎನರ್ಜಿ'ಯಂತಹ

ಸಂಸ್ಥೆಗಳು ಸೀಮಿತ ಪರ್ಯಾಯಗಳನ್ನು ಹೊಂದಿವೆ. ಹಾಗಾಗಿ ಆಮದು ಸದ್ಯಕ್ಕೆ ಮುಂದುವರಿಯುತ್ತದೆ ಎಂದು ಮೂಲಗಳು ತಿಳಿಸಿವೆ. ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿ ಅಮೆರಿಕದಿಂದ ಖರೀದಿಸಿ, ಇಲ್ಲವೇ ಅಮೆರಿಕದ ನಿಯಂತ್ರಣದಲ್ಲಿರುವ ವೆನೆಜುವೆಲಾದಲ್ಲಿನ ತೈಲ ಕಂಪನಿಗಳಿಂದ ಖರೀದಿಸಿ ಎಂದು ಡೊನಾಲ್ಡ್ ಟ್ರಂಪ್, ಭಾರತದ ಮೇಲೆ ಒತ್ತಡ ಹೇರುತ್ತಿದ್ದಾರೆ. ಅದೇ ಕಾರಣವಾಗಿ ಭಾರತದ ಸರಕುಗಳ ಮೇಲೆ ಹೆಚ್ಚುವರಿಯಾಗಿ ವಿಧಿಸಿದ್ದ ಶೇ.25ರ ದಂಡಸುಂಕವನ್ನೂ ತೆಗೆದುಹಾಕಿದ್ದಾರೆ. ದಂಡನಾತ್ಮಕ ಸುಂಕ ರದ್ದು ಕಾರ್ಯಕಾರಿ ಆದೇಶಕ್ಕೂ ಟ್ರಂಪ್ ಶುಕ್ರವಾರ ಸಹಿ ಹಾಕಿದ್ದಾರೆ. ಹಾಗಾಗಿ, ರಷ್ಯಾದಿಂದ ಕಚ್ಚಾತೈಲ ಖರೀದಿ ಕಡಿಮೆ ಮಾಡುವುದು ಭಾರತಕ್ಕೆ ಅನಿವಾರ್ಯ ಎನ್ನಲಾಗಿದೆ.ರಷ್ಯಾದ ಕಚ್ಚಾತೈಲ ಖರೀದಿ ನಿಲ್ಲಿಸುವಂತೆ ಭಾರತದ ತೈಲ ಸಂಸ್ಕರಣಾ ಘಟಕಗಳಿಗೆ ಯಾವುದೇ ನಿರ್ದೇಶನ ನೀಡಲಾಗಿಲ್ಲ. ಆದರೆ, ಖರೀದಿ ಪ್ರಮಾಣ ಕಡಿಮೆ ಮಾಡುವುದನ್ನು ಪ್ರಾರಂಭಿಸಲು ಅನೌಪಚಾರಿಕ ಸೂಚನೆ ನೀಡಲಾಗಿದೆ ಎಂದು ತೈಲ ಆಮದು ವಲಯದ ಮೂಲಗಳು ತಿಳಿಸಿವೆ. ಸಾಮಾನ್ಯವಾಗಿ ರಷ್ಯಾದಿಂದ ಕಚ್ಚಾತೈಲ ಆಮದಿಗೆ 6ರಿಂದ 8 ವಾರಗಳ ಮುಂಚೆಯೇ ಬೇಡಿಕೆ ಆದೇಶ ನೀಡಲಾಗುತ್ತದೆ. ಆದರೆ ಸದ್ಯ ಹೊಸ ಆದೇಶಗಳನ್ನು ನೀಡುವುದನ್ನು ತಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿರಾಮ
ಪ್ರತಿ ಭಾನುವಾರ

{ ಮೋಹನ್ ಭಾಗವತ್ }
ಆರ್‌ಎಸ್‌ಎಸ್ ಮುಖ್ಯಸ್ಥ

ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ವಿನಾಯಕ ದಾಮೋದರ್ ಸಾವರ್ಕರ್ ಅವರಿಗೆ 'ಭಾರತ ರತ್ನ' ಸಂದರೆ ಆ ಪ್ರಶಸ್ತಿಯ ಘನತೆ ಮತ್ತಷ್ಟು ಹೆಚ್ಚುತ್ತದೆ. ನಾನು ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿಲ್ಲ. ಇದ್ದಿದ್ದರೆ ಖಂಡಿತಾ ಶಿಫಾರಸು ಮಾಡುತ್ತಿದ್ದೆ. ಸಾವರ್ಕರ್ ಭಾರತೀಯರ ಹೃದಯದಲ್ಲಿ ನೆಲೆಸಿದ್ದಾರೆ. ಹಲವು ಸಂಘ ಸಂಸ್ಥೆಗಳೂ ಇದೇ ಮಾತು ಹೇಳುತ್ತಿವೆ, ಆಗ್ರಹಿಸುತ್ತಿವೆ.

75 ವರ್ಷದ ಬಳಿಕದ ಜವಾಬ್ದಾರಿ ಬಗ್ಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ | ಮುಂಬೈನಲ್ಲಿ ಆರ್‌ಎಸ್‌ಎಸ್ ಶತಮಾನ ವರ್ಷದ ವಿಶೇಷ ಕಾರ್ಯಕ್ರಮ

ಸಂಘ ಯಾವಾಗ ಹೇಳಿದರೂ ಆ ಕ್ಷಣವೇ ಹುದ್ದೆ ತ್ಯಜಿಸುವೆ

ಮುಂಬೈ: ನನಗೀಗ 75 ವರ್ಷ. ಈ ವಿಷಯವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೂ(ಆರ್‌ಎಸ್‌ಎಸ್‌ಗೂ) ತಿಳಿಸಿದ್ದೇನೆ. ಆದರೆ, ವಯಸ್ಸಾಗಿದ್ದರೂ ನನಗೆ ಕೆಲಸ ಮುಂದುವರಿಸುವಂತೆ ಸಂಘ ಸೂಚಿಸಿದೆ. ಸಂಘಟನೆ ನನಗೆ ನಿರ್ದೇಶನ ನೀಡಿದ ದಿನವೇ ಈ ಹುದ್ದೆಯಿಂದ ಕೆಳಗಿಳಿಯುತ್ತೇನೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವದಂಗವಾಗಿ ಮುಂಬೈನ ವರ್ಲಿ ಪ್ರದೇಶದಲ್ಲಿನ ನೆಹರು ಸೆಂಟರ್ ಆಡಿಟೋರಿಯಂನಲ್ಲಿ ಭಾನುವಾರ ಆಯೋಜಿಸಿದ್ದ ಸಂವಾದದಲ್ಲಿ ಭಾಗಿಯಾಗಿದ್ದ ಸರಸಂಘಚಾಲಕರು ತಮಗೆ ಎದುರಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಆರ್‌ಎಸ್‌ಎಸ್ ಮುಖ್ಯಸ್ಥರ ಹುದ್ದೆಗೆ ಯಾವುದೇ ಚುನಾವಣೆ ನಡೆಯುವುದಿಲ್ಲ. ಪ್ರಾದೇಶಿಕ ಮತ್ತು ವಿಭಾಗೀಯ ಮುಖ್ಯಸ್ಥರುಗಳೇ ಮುಖ್ಯಸ್ಥರ ನೇಮಕ ಪ್ರಕ್ರಿಯೆ ನಡೆಸುತ್ತಾರೆ. ಸಾಮಾನ್ಯವಾಗಿ ಸಂಘದಲ್ಲಿ 75 ವರ್ಷ ತುಂಬಿದವರು ನಂತರ ಯಾವುದೇ ಹುದ್ದೆ ಅಲಂಕರಿಸದೇ ಸಂಘಕ್ಕಾಗಿ ಸೇವೆ ಸಲ್ಲಿಸಬೇಕು ಎನ್ನಲಾಗುತ್ತದೆ ಎಂದರು.

ಸಂಘಟನೆಯು ನನ್ನನ್ನು ಕೆಲಸ ಮಾಡುವಂತೆ ಸೂಚಿಸಿದೆ. ಸಂಘವು ನನಗೆ ಸೂಚಿಸಿದ ಮರುಕ್ಷಣವೇ ನಾನು ಈ ಹುದ್ದೆಯಿಂದ ಕೆಳಗಿಳಿಯುತ್ತೇನೆ. ಸಂಘದಲ್ಲಿ ದುಡಿಮೆ, ಸೇವೆ ಮಾಡುವ ವಿಚಾರದಲ್ಲಿ ನಿವೃತ್ತಿ ಎಂಬುದೇ ಇರುವುದಿಲ್ಲ ಎಂದು ಹೇಳಿದರು.

ಸಮಸ್ಯೆಗಳು ಇದ್ದೇ ಇರುತ್ತವೆ. ಹಾಗಾಗಿ ಅದರ ಮೇಲೆ ಗಮನ ಕೇಂದ್ರೀಕರಿಸದೇ ಪರಿಹಾರ ಕಂಡುಕೊಳ್ಳುವುದಕ್ಕೆ ನಾವು ಯೋಚಿಸಬೇಕು. ಎಲ್ಲಿಯವರೆಗೆ ಸತ್ಯ ಮುಂದೆ ಬರುವುದಿಲ್ಲವೋ ಅಲ್ಲಿವರೆಗೂ ಭ್ರಮೆಯೇ ಪರಿಣಾಮಕಾರಿ ಆಗಿರುತ್ತದೆ

ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸ್ವಯಂಸೇವಕರು ಕಷ್ಟಪಟ್ಟು ಕೆಲಸ ಮಾಡುವಂತೆ ಸಂಘಟನೆಯು ಉತ್ತೇಜಿಸುತ್ತದೆ. ಅತ್ಯುತ್ತಮ ಪ್ರಯತ್ನಗಳನ್ನು ಕೈಗೊಳ್ಳಲೂ ಒತ್ತಾಯಿಸುತ್ತದೆ. ಆರ್‌ಎಸ್‌ಎಸ್ ಇತಿಹಾಸದಲ್ಲಿ ಯಾರೊಬ್ಬರೂ ನಿವೃತ್ತಿಯಾದ ಅಥವಾ ವಜಾಗೊಂಡ ಉದಾಹರಣೆ ಎಂಬುದೇ ಇಲ್ಲ.

ಸಂಘದ ಕೆಲಸವೆಂದರೆ ವ್ಯಕ್ತಿಯಲ್ಲಿ 'ಸಂಸ್ಕಾರ' ಬೆಳೆಸುವುದೇ ಆಗಿದೆ. ಅದಕ್ಕಾಗಿ ಪ್ರಚಾರ ಬಯಸುವುದಲ್ಲ' ಎಂದು ಭಾಗವತ್ ಹೇಳಿದರು.

ಪ್ರಚಾರದಿಂದ ದೂರ: ಸಂಘವು ತನ್ನ ಬಗ್ಗೆ ಪ್ರಚಾರ ಮಾಡಿಕೊಳ್ಳುವುದರಲ್ಲಿ ಹಿಂದೆ ಬಿದ್ದಿದೆ. ಅತಿಯಾದ ಪ್ರಚಾರ ಜನಪ್ರಿಯತೆಗೆ ಮತ್ತು ನಂತರ ದುರಹಂಕಾರಕ್ಕೆ ಕಾರಣವಾಗುತ್ತದೆ. ಪ್ರತಿಯೊಬ್ಬರೂ ಇದರಿಂದ ರಕ್ಷಿಸಿಕೊಳ್ಳಬೇಕಿದೆ. ಪ್ರಚಾರ ಎಂಬುದು ಮಳೆಯಂತೆ ಇರಬೇಕು. ಸಮಯ ಮತ್ತು ಪ್ರಮಾಣದಲ್ಲಿ ಸಮರ್ಪಕವಾಗಿ ಇರಬೇಕು ಎಂದು ಮೋಹನ್ ಭಾಗವತ್ ಅವರು ತಿಳಿಸಿಕೊಟ್ಟಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ ನೂರನೇ ವರ್ಷಕ್ಕೆ ಕಾಲಿಟ್ಟ ಸಂದರ್ಭ 2025ರ ಅಕ್ಟೋಬರ್‌ನಲ್ಲಿ ವಿಜಯ ದಶಮಿ ದಿನ ಆರಂಭಗೊಂಡಿರುವ 'ಶತಮಾನೋತ್ಸವ ಸಂಭ್ರಮ' ಕಾರ್ಯಕ್ರಮ ವರ್ಷವಿಡೀ ದೇಶಾದ್ಯಂತ ಆಚರಣೆಗೊಂಡು 2026ರ ಅಕ್ಟೋಬರ್‌ನಲ್ಲಿ ವಿಜಯ ದಶಮಿ ದಿನವೇ ದೊಡ್ಡ ಮಟ್ಟದಲ್ಲಿ ಸಮಾರೋಪಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ 'ಪಂಚ ಪರಿವರ್ತನೆ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಘವು ಭಾರತೀಯ ಸಮಾಜ ಮತ್ತು ವ್ಯಕ್ತಿಗಳಲ್ಲಿ 'ಕೌಟುಂಬಿಕ ಮೌಲ್ಯಗಳು, ಸಾಮಾಜಿಕ ಸಾಮರಸ್ಯ, ನಾಗರಿಕ ಜವಾಬ್ದಾರಿಗಳು, ಪರಿಸರ ಸಂರಕ್ಷಣೆ ಮತ್ತು ಸ್ವಯಂ ಜಾಗೃತಿ' ಎಂಬ 5 ಬದಲಾವಣೆಗಳನ್ನು ತರಲು ಕಟಿಬದ್ಧವಾಗಿದೆ ಎಂದು ಸಂಘದ ಮೂಲಗಳು ತಿಳಿಸಿವೆ.

ಇಂಗ್ಲಿಷ್ ಸಂವಹನ ಮಾಧ್ಯಮವೇ ಅಲ್ಲ

ಆರ್‌ಎಸ್‌ಎಸ್ ಕಾರ್ಯನಿರ್ವಹಣೆಯಲ್ಲಿ ಇಂಗ್ಲಿಷ್ ಎಂದೂ ಸಂವಹನ ಮಾಧ್ಯಮವಾಗದು. ಏಕೆಂದರೆ ಅದು ಭಾರತದ ಭಾಷೆ ಅಲ್ಲ. ನಾವು ಭಾರತೀಯರೊಂದಿಗೆ ಕೆಲಸ ಮಾಡಲು ಬಯಸುತ್ತೇವೆ. ಅಗತ್ಯವಿರುವಲ್ಲಿ ಮಾತ್ರವೇ ಇಂಗ್ಲಿಷ್ ಬಳಸುತ್ತೇವೆ. ಅದರಿಂದ ವಿಮುಖರಾಗುವುದಿಲ್ಲ. ಬೆಂಗಳೂರಿನಲ್ಲಿನ ಸಂವಾದದಲ್ಲಿ ಭಾಗಿಯಾಗಿದ್ದ ದಕ್ಷಿಣದ ಹಲವು ರಾಜ್ಯಗಳ ಪ್ರತಿನಿಧಿಗಳಿಗೆ ಹಿಂದಿ ಅರ್ಥವಾಗುವುದಿಲ್ಲ. ಹೀಗಾಗಿ, ನಾನು ಅವರ ಪ್ರಶ್ನೆಗಳಿಗೆ ಇಂಗ್ಲಿಷ್‌ನಲ್ಲಿ ಪ್ರತಿಕ್ರಿಯಿಸಿದೆ. ವಿದೇಶದಲ್ಲಿರುವ ಭಾರತೀಯರೊಂದಿಗಿನ ಸಂವಹನ ಅವರು ಇಂಗ್ಲಿಷ್ ಮಾತನಾಡುವವರೇ ಅಥವಾ ಅಲ್ಲವೇ ಎಂಬುದನ್ನು ಅವಲಂಬಿಸಿ ಹಿಂದಿ ಅಥವಾ ಮಾತೃಭಾಷೆ ಸಂವಹನ ನಡೆಸಲಾಗುತ್ತದೆ. ಬೇಕಿದ್ದರೆ ಇಂಗ್ಲಿಷ್ ಕರಗತ ಮಾಡಿಕೊಳ್ಳಬಹುದು. ಹಾಗೆಂದು ಮಾತೃಭಾಷೆಯನ್ನೇ ಮರೆಯಬೇಕು ಎಂದರ್ಥವಲ್ಲ ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಬಾಲಿವುಡ್ ದಂಡು

2 ದಿನಗಳ ಈ ಕಾರ್ಯಕ್ರಮಕ್ಕೆ ಬಾಲಿವುಡ್‌ನ ಹಲವು ಪ್ರಮುಖರನ್ನು ಸಂಘ ಆಹ್ವಾನಿಸಿತ್ತು. ಅವರಲ್ಲಿ ಖ್ಯಾತ ನಟರಾದ ಸಲ್ಮಾನ್ ಖಾನ್ ಮತ್ತು ರಣಬೀರ್ ಕಪೂರ್ ನಿರ್ಮಾಪಕ-ನಿರ್ದೇಶಕರಾದ ಸುಭಾಷ್ ಗೈ, ಮೋಹಿತ್ ಸೂರಿ, ನಿತೇಶ್ ತಿವಾರಿ, ಓಂ ರಾವತ್, ಮಹಾವೀರ್ ಜೈನ್, ವಿಕ್ರಂ ಮಲ್ಹೋತ್ರ, ಸಂಭಾಷಣೆಕಾರ ಪ್ರಸೂನ್ ಜೋಷಿ ಶನಿವಾರದ ಕಾರ್ಯಕ್ರಮದಲ್ಲಿ ಹಾಜರಾಗಿದ್ದರು. ಸುಭಾಷ್ ಗೈ ಮತ್ತು ಪ್ರಸೂನ್ ಜೋಷಿ ಮಧ್ಯೆ 3ನೇ ಸಾಲಿನಲ್ಲಿ ಆಸೀನರಾಗಿದ್ದ ಸಲ್ಮಾನ್ ಖಾನ್ ವೇದಿಕೆಯಲ್ಲಿದ್ದವರ ಭಾಷಣಗಳನ್ನು ಗಮನವಿಟ್ಟು ಆಲಿಸಿದರು. ಅಪರೂಪಕ್ಕೆ ಮೀಸೆ ಬಿಟ್ಟಿರುವ ರಣಬೀರ್ ಕಪೂರ್ ಮುಂದಿನ ಸಾಲಿನಲ್ಲಿ ಆಸೀನರಾಗಿದ್ದರು.ಭಾನುವಾರದ ಕಾರ್ಯಕ್ರಮಕ್ಕೆ ನಿರ್ಮಾಪಕ-ನಿರ್ದೇಶಕ ಕರಣ್ ಜೋಹರ್, ಮಧುರ್ ಭಂಡಾರ್ಕರ್, ಮಹೇಶ್ ಮಂಜ್ರೇಕರ್, ಹಿರಿಯ ನಟ ಜಾಕಿ ಶ್ರಾಫ್, 'ಉರಿ' ಚಿತ್ರನಟ ವಿಕ್ಕಿ ಕೌಶಲ್, ನಟಿಯರಾದ ರವೀನಾ ಟಂಡನ್, ಶಿಲ್ಪಾ ಶೆಟ್ಟಿ, ಅನನ್ಯಾ ಪಾಂಡೆ, ಸಂಗೀತ ನಿರ್ದೇಶಕ ಪ್ರೀತಂ ಚಕ್ರಬೊರ್ತಿ, ಗಾಯಕ ಅದ್ನಾನ್ ಸಾಮಿ, 'ಮಹಾಭಾರತ' ಟಿವಿ ಸ್ಟಾರ್ ರೂಪಾಲಿ ಗಂಗೂಲಿ, ಮತ್ತಿತರರು ಹಾಜರಾಗಿದ್ದರು.

ಇಬ್ಬಗೆ ನಿಲುವು ಇಲ್ಲವೇ ಇಲ್ಲ: ಮಲೇಷಿಯಾದಲ್ಲಿ ಮೋದಿ | ಭಯೋತ್ಪಾದನೆ ಸಾಕಿ ಸಲಹುವ ದೇಶಗಳಿಗೆ ಕಟು ಎಚ್ಚರಿಕೆ

ಉಗ್ರರ ನಾಶ ವಿಚಾರದಲ್ಲಿ ರಾಜಿ ಇಲ್ಲ: ಭಾರತ

ಕೌಲಾಲಂಪುರ: ಭಯೋತ್ಪಾದನೆ, ಉಗ್ರರ ನಾಶ ವಿಚಾರದಲ್ಲಿ ರಾಜಿ ಎಂಬುದು ಇಲ್ಲ, ಇಬ್ಬಗೆ ನಿಲುವಂತೂ ಇಲ್ಲವೇ ಇಲ್ಲ ಎಂದು ಭಾರತ ದೃಢವಾಗಿ ಹೇಳಿದೆ.

ಎರಡು ದಿನಗಳ ಮಲೇಷಿಯಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಕೌಲಾಲಂಪುರದಲ್ಲಿ ಈ ಮಾತನ್ನು ಭಾನುವಾರ ಸ್ಪಷ್ಟವಾಗಿ ಹೇಳಿದ್ದಾರೆ. ಆ ಮೂಲಕ ಭಯೋತ್ಪಾದನೆಯನ್ನು ಹುಟ್ಟು ಹಾಕುತ್ತಿರುವ, ಸಾಕಿ ಸಲಹುತ್ತಿರುವ ಪಾಕಿಸ್ತಾನದಂತಹ ದೇಶಗಳಿಗೆ ಬಲವಾದ ಸಂದೇಶವನ್ನು ರವಾನಿಸಿದ್ದಾರೆ.

ರಕ್ಷಣಾ ವಲಯ ಮತ್ತು ಭದ್ರತೆ ಹಾಗೂ ಸೆಮಿಕಂಡಕ್ಟರ್‌ಗಳ ತಯಾರಿಕೆ ವಿಚಾರದಲ್ಲಿ ಪರಸ್ಪರ ಸಹಕಾರ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತು ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಜತೆ ಪುತ್ರಜಯದಲ್ಲಿನ 'ಪೆರ್ದಾನಾ ಪುತ್ರ' ಭವನದಲ್ಲಿ ಭಾನುವಾರ ಮಹತ್ವದ ಸಭೆ ನಡೆಸಿದ ಪ್ರಧಾನಿ ಮೋದಿ, ಇನ್ನೂ ಹಲವು ವಿಚಾರಗಳ ಕುರಿತು ಮಾತುಕತೆ ನಡೆಸಿದ್ದಾರೆ. ಆ ಬಳಿಕ ಪ್ರಧಾನಿ ಅನ್ವರ್ ಇಬ್ರಾಹಿಂ ಅವರ ಅಧಿಕೃತ ನಿವಾಸ 'ಸೆರಿ ಪೆರ್ದಾನಾ'ದಲ್ಲಿ ಆಯ್ದ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ದ್ವಿಪಕ್ಷೀಯ ಸಭೆ ನಡೆಸಿದರು.

ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೋದಿ, ಮಲೇಷಿಯಾ ಮತ್ತು ಭಾರತ ವಿಶೇಷ ಸಂಬಂಧವನ್ನು ಹಂಚಿಕೊಂಡಿವೆ.

ಎರಡೂ ದೇಶಗಳು ಒಂದೇ ಸಾಗರ ಪ್ರವೇಶದಲ್ಲಿವೆ. ಶತಮಾನಗಳಿಂದ ಮಿತ್ರ ರಾಷ್ಟ್ರಗಳಾಗಿವೆ. ಎರಡೂ ದೇಶಗಳ ನಾಗರಿಕರು ಪರಸ್ಪರ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಹಾಗಾಗಿಯೇ 2024ರಲ್ಲಿ ವಿವಿಧ ಕ್ಷೇತ್ರಗಳನ್ನು ಒಳಗೊಂಡಂತೆ ಮಾಡಿಕೊಂಡಿರುವ 'ಸಮಗ್ರ ಸ್ವರೂಪದ ಕಾರ್ಯತಂತ್ರ ಪಾಲುದಾರಿಕೆ'ಯನ್ನು ಮುಂದುವರಿಸಲು ಎರಡೂ ದೇಶಗಳೂ ಬದ್ಧವಾಗಿವೆ ಎಂದರು.

ಭಯೋತ್ಪಾದನೆ ನಿವಾರಣೆ ವಿಚಾರದಲ್ಲಿ ನಮ್ಮ ಸಂದೇಶ ಬಲು ಸ್ಪಷ್ಟ. ಈ ವಿಚಾರದಲ್ಲಿ 2 ಬಗೆಯ ನಿಲವಾಗಲೀ, ಗೊಂದಲವಾಗಲೀ ಇಲ್ಲ. ಉಗ್ರರನ್ನು ನಾಶಪಡಿಸುವ ವಿಚಾರದಲ್ಲಿ ರಾಜಿ ಮಾತೇ ಇಲ್ಲ ಎಂದರು.

ಈ ಬಾರಿಯ ಮಾತುಕತೆಯಲ್ಲಿ ಮೂಲಸೌಕರ್ಯ, ರಕ್ಷಣಾ ವಲಯ, ಸಾಗರ ಸಹಕಾರ, ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ(ಎ.ಐ), ಡಿಜಿಟಲ್ ತಂತ್ರಜ್ಞಾನ, ಸ್ಟಾರ್ಟ್‌ಅಪ್, ಕೃಷಿ, ಶಿಕ್ಷಣ, ಆರೋಗ್ಯ, ಆಯುರ್ವೇದ, ಆಹಾರ ಭದ್ರತೆ, ಪ್ರವಾಸೋದ್ಯಮ, ಸಾಂಸ್ಕೃತಿಕ ಸಂಪರ್ಕ ವಿಚಾರಗಳು ಪ್ರಮುಖ ಸ್ಥಾನಗಳನ್ನು ಪಡೆದುಕೊಂಡಿವೆ ಎಂದು ಮೋದಿ ಗಮನ ಸೆಳೆದರು.

'ಅಸೋಸಿಯೇಷನ್ ಆಫ್ ಸೌತ್‌ಈಸ್ಟ್ ಏಷ್ಯನ್ ನೇಷನ್ಸ್'(ಆಸಿಯಾನ್) ಒಕ್ಕೂಟದ ಭಾಗವಾಗಿರುವ ಇಂಡೊ-ಪೆಸಿಫಿಕ್ ವಲಯದಲ್ಲಿ ಅಭಿವೃದ್ಧಿ, ಶಾಂತಿ, ಸ್ಥಿರತೆಯನ್ನು ಕಾಯ್ದುಕೊಳ್ಳುವ ವಿಚಾರಕ್ಕೆ ಭಾರತ ಸದಾ ಬದ್ಧವಾಗಿರುತ್ತದೆ ಎಂದು ಭರವಸೆ ನೀಡಿದರು.

ಇದೇ ವೇಳೆ ಮಾತನಾಡಿದ ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ವ್ಯಾಪಾರ, ಬಂಡವಾಳ ತೊಡಗಿಸುವಿಕೆ, ಸಂಪರ್ಕ ಸಾಧನೆ ಮತ್ತು ರಕ್ಷಣಾ ವಲಯಗಳಲ್ಲಿ ಎರಡೂ ದೇಶಗಳು ಪರಸ್ಪರ ಸಹಕಾರವನ್ನು ಮುಂದುವರಿಸಲಿವೆ ಎಂದು ಭರವಸೆ ನೀಡಿದರು. ಪ್ರಸ್ತುತ ಜಾಗತಿಕ ಮಾರುಕಟ್ಟೆಗಳಲ್ಲಿ ಭಾರತ ಅದ್ಭುತ ಪ್ರಗತಿ ಕಾಣುತ್ತಿದೆ ಎಂದು ಪ್ರಶಂಸಿಸಿದರು.

ಶನಿವಾರ ಮಧ್ಯಾಹ್ನ ಕೌಲಾಲಂಪುರದ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಮೋದಿ ಅವರು ಬಂದಿಳಿದಾಗ ಕೆಂಪು ನೆಲಹಾಸಿನ ಸ್ವಾಗತ ದೊರೆಯಿತು. ಪ್ರಧಾನಿ ಅನ್ವರ್ ಇಬ್ರಾಹಿಂ ಅವರೇ ವಿಮಾನ ನಿಲ್ದಾಣದಲ್ಲಿ ಖುದ್ದು ಹಾಜರಿದ್ದು ಸ್ವಾಗತಿಸಿದರು. ಬಳಿಕ ಇಬ್ಬರೂ ನಾಯಕರು ಒಂದೇ ಕಾರಿನಲ್ಲಿ ಪ್ರಯಾಣಿಸುತ್ತಾ ಕುಶಲೋಪರಿ ನಡೆಸಿದರು. ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ಪ್ರಧಾನಿ ಮೋದಿ ಅವರ ಗೌರವಾರ್ಥ 'ವಿಶೇಷ ಔತಣಕೂಟ' ಆಯೋಜಿಸಿದ್ದರು. ಪ್ರೀತಿಪೂರ್ವಕ ಆತಿಥ್ಯ ನೀಡಿದ್ದಕ್ಕೆ ಧನ್ಯವಾದ ಹೇಳಿದ ಮೋದಿ ಅವರು, ಅನ್ವರ್ ಇಬ್ರಾಹಿಂ ಅವರನ್ನು ಭಾರತಕ್ಕೆ ಭೇಟಿ ನೀಡುವಂತೆ ಆಹ್ವಾನಿಸಿದರು.

ಪ್ರಧಾನಿ ಅನ್ವರ್ ಇಬ್ರಾಹಿಂ ಅಧಿಕೃತ ನಿವಾಸ 'ಸೆರಿ ಪೆರ್ದಾನಾ'ದಲ್ಲಿ ಭಾರತ-ಮಲೇಷಿಯಾ ನಿಯೋಗದ ಸಭೆ.

ಭದ್ರತಾ ವಲಯ ಸೇರಿ ಹಲವು ಒಪ್ಪಂದಗಳಿಗೆ ಸಹಿ

ಕಾರ್ ಪೂಲಿಂಗ್ ರಾಜತಾಂತ್ರಿಕತೆ, ದ್ವಿಪಕ್ಷೀಯ ಸಭೆ, ನಿಯೋಗಗಳ ಮಟ್ಟದ ಮಾತುಕತೆ ಜತೆಗೆ, ಭಾರತ-ಮಲೇಷಿಯಾ ಸಿಇಒಗಳ ವೇದಿಕೆಯ 10ನೇ ಸಭೆಯೂ ಭಾನುವಾರ ನಡೆದಿದೆ. ಆ ಬಳಿಕ

ಭಾರತ-ಮಲೇಷಿಯಾ ಹಲವು ಒಪ್ಪಂದಗಳಿಗೆ ಭಾನುವಾರ ಸಹಿ ಹಾಕಿವೆ. ಡಿಜಿಟಲ್ ಪಾವತಿ ವ್ಯವಸ್ಥೆಗೆ ಒಪ್ಪಿಗೆ, ಭದ್ರತಾ ವಲಯದಲ್ಲಿ ಪರಸ್ಪರ ಸಹಕಾರ ಒಪ್ಪಂದ, ಸೆಮಿಕಂಡಕ್ಟರ್ ಉತ್ಪಾದನೆಗೆ ನೆರವು, ಆರೋಗ್ಯ ಕ್ಷೇತ್ರ ಮತ್ತು ಔಷಧಗಳ ತಯಾರಿಕೆಯಲ್ಲಿ ಸಹಕಾರಕ್ಕೆ ಒಪ್ಪಂದ, ಪ್ರಾಕೃತಿಕ ವಿಕೋಪಗಳ ಸಂದರ್ಭ ಸಹಾಯಹಸ್ತ, ಭ್ರಷ್ಟಾಚಾರ ನಿರ್ಮೂಲನೆಗೆ ಸಹಕಾರ, ಆಡಿಯೊ-ವಿಡಿಯೊಗಳ ಕ್ಷೇತ್ರದಲ್ಲಿ ಜಂಟಿ ಭಾಗಿತ್ವಕ್ಕೆ ಒಪ್ಪಿಗೆ, ತಾಂತ್ರಿಕ ಶಿಕ್ಷಣ ಮತ್ತು ಅಲ್ಪಾವಧಿ ಕೋರ್ಸ್‌ಗಳ ಆರಂಭಕ್ಕೆ ನೆರವು ಮೊದಲಾದ ಹಲವು ಒಪ್ಪಂದಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ಅಲ್ಲದೇ, ಮಲೇಷಿಯಾದಲ್ಲಿರುವ ಭಾರತೀಯ ಕಾರ್ಮಿಕರಿಗೆ ಸುರಕ್ಷತೆ-ಭದ್ರತೆ ಒದಗಿಸುವುದಕ್ಕೆ ಮಲೇಷಿಯಾ ಸರಕಾರವೂ ಪೂರ್ಣ ಬದ್ಧವಾಗಿರುವುದಾಗಿ ಭಾರತ ಸರಕಾರಕ್ಕೆ ವಚನ ನೀಡಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೂ ಪ್ರಧಾನಿ ಮೋದಿ ಜತೆ ಪ್ರವಾಸದಲ್ಲಿದ್ದಾರೆ.

ಮಲೇಷಿಯಾಕ್ಕೆ ತಮಿಳಿನ ಬೆಸುಗೆ

ಭಾರತೀಯರು ಅತ್ಯಧಿಕ ಸಂಖ್ಯೆಯಲ್ಲಿರುವ ದೇಶಗಳಲ್ಲಿ ಮಲೇಷಿಯಾ ವಿಶ್ವದಲ್ಲೇ 2ನೇ ಸ್ಥಾನದಲ್ಲಿದೆ. ಮಲೇಷಿಯಾದಲ್ಲಿ 30 ಲಕ್ಷ ಭಾರತೀಯರಿದ್ದಾರೆ. ಎರಡೂ ದೇಶಗಳು ಒಂದೇ ಸಂಸ್ಕೃತಿಯ ಹಿನ್ನೆಲೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಂದಿದ್ದು, ಬಲು ಆಪ್ತ ದೇಶಗಳಾಗಿವೆ. ತಮಿಳು ಭಾಷೆ ಮೇಲಿನ ಪ್ರೀತಿ ಹಂಚಿಕೆಯು ಭಾರತ-ಮಲೇಷಿಯಾ ದೇಶಗಳನ್ನು ಪರಸ್ಪರ ಹತ್ತಿರವಾಗಿಸಿದೆ. ಮಲೇಷಿಯಾದಲ್ಲಿನ ಶಿಕ್ಷಣ, ಮಾಧ್ಯಮ ಮತ್ತು ಸಾಂಸ್ಕೃತಿಕ ಜೀವನದಲ್ಲಿ ತಮಿಳಿನ ಪ್ರಭಾವ ಕಾಣಬಹುದಾಗಿದೆ. ವಿಶೇಷವಾಗಿ ತಮಿಳು ಸಿನಿಮಾಗಳು ಮಲೇಷಿಯಾ ಜನರ ಹೃದಯಗಳನ್ನು ಭಾರತೀಯರಿಗೆ ಹತ್ತಿರ ತರುತ್ತವೆ ಎಂಬ ವಿಶ್ವಾಸವಿದೆ. 2025ರಲ್ಲಿ ಆಸಿಯಾನ್ ಶೃಂಗಸಭೆಗೆ ಮಲೇಷ್ಯಾಕ್ಕೆ ಬರಲಾಗಲಿಲ್ಲ. ಆದರೆ ಆತ್ಮೀಯ ಸ್ನೇಹಿತ ಇಬ್ರಾಹಿಂ ಅವರಿಗೆ ಆದಷ್ಟು ಬೇಗ ಭೇಟಿ ನೀಡುತ್ತೇನೆ ಎಂದು ಭರವಸೆ ನೀಡಿದ್ದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನಳಂದ ವಿವಿ-ಮಲಯ ವಿವಿ ಪರಸ್ಪರ ಬೆಸುಗೆ

ಎರಡೂ ದೇಶಗಳ ನಾಗರಿಕರ ನಡುವಿನ ಬಾಂಧವ್ಯವನ್ನು ಮತ್ತಷ್ಟು ದೃಢಪಡಿಸಬೇಕಿದೆ. ಮುಖ್ಯವಾಗಿ ಯುವ ಸಮುದಾಯಕ್ಕೆ ಎರಡೂ ದೇಶಗಳೂ ಸಂಸತ್ತು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಜ್ಞಾನ ಹಂಚಿಕೆಗಾಗಿ ವಿನಿಮಯ ಮಾಡಿಕೊಳ್ಳುವ ಅಗತ್ಯವಿದೆ. ಭಾರತದ ಬಿಹಾರದಲ್ಲಿ ಜಗದ್ವಿಖ್ಯಾತ ನಳಂದ ವಿಶ್ವವಿದ್ಯಾಲಯದ ಮರು ನಿರ್ಮಾಣ ನಡೆದಿದ್ದು, ಮಲೇಷಿಯಾದ ಮಲಯ ವಿಶ್ವವಿದ್ಯಾಲಯ ಪರಸ್ಪರ ಸಂಪರ್ಕ ಸಾಧಿಸಬೇಕಿದೆ. ಅಲ್ಲದೇ ತಮಿಳುನಾಡಿನಲ್ಲಿರುವ 'ಐಐಟಿ-ಮದ್ರಾಸ್' ತಾಂತ್ರಿಕ ಸಂಸ್ಥೆಯ ಜತೆಗೆ ಮಲೇಷಿಯಾದಲ್ಲಿನ ಸೆಮಿಕಂಡಕ್ಟರ್ ಅಕಾಡೆಮಿ ಜತೆಗೂಡಬೇಕಿದೆ ಎಂದು ಹೇಳಿದರು. ಮಲೇಷಿಯಾದಲ್ಲಿ ಭಾರತದ ಮೊದಲ ಕಾನ್ಸುಲೇಟ್ ಆರಂಭಿಸಿದ ಬಳಿಕ ಎರಡೂ ದೇಶಗಳ ನಡುವಿನ ಜನಸಂಪರ್ಕ ಬಹಳ ಹೆಚ್ಚಳವಾಗಿದೆ. ಹಾಗೂ ವ್ಯಾಪಾರ ವಹಿವಾಟಿನಲ್ಲಿಯೂ ಭಾರೀ ಬೆಳವಣಿಗೆ ಕಂಡುಬಂದಿದೆ ಎಂದರು.

ಛತ್ತೀಸ್‌ಗಢ: 51 ನಕ್ಸಲರು ಶರಣು

ಬಸ್ತಾರ್: ಛತ್ತೀಸ್‌ಗಢ ರಾಜ್ಯದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡುವೆಯೇ ಬಸ್ತಾರ್ ವಿಭಾಗದ ಎರಡು ಜಿಲ್ಲೆಗಳಲ್ಲಿನ 34 ಮಹಿಳಾ ನಕ್ಸಲರು ಸೇರಿದಂತೆ ಒಟ್ಟು 51 ನಕ್ಸಲರು ಪೊಲೀಸರೆದುರು ಶನಿವಾರ ಶರಣಾದರು. ಈ 51 ನಕ್ಸಲರ ಬಂಧನಕ್ಕೆ ನೆರವಾದವರಿಗೆ ಒಟ್ಟು 1.61 ಕೋಟಿ ರು. ಬಹುಮಾನ ನೀಡುವುದಾಗಿ ಈ ಹಿಂದೆ ಛತ್ತೀಸ್‌ಗಢ ಪೊಲೀಸರು ಘೋಷಿಸಿದ್ದರು. ಬಸ್ತಾರ್ ಜಿಲ್ಲೆಯ ಪೊಲೀಸ್ ಇಲಾಖೆಯ ಪ್ರಧಾನ ಕಚೇರಿ ಜಗದಲ್ಪುರದಲ್ಲಿ ಬಸ್ತಾರ್ ಪಾಂಡಮ್-2026 ಉತ್ಸವ ಉದ್ಘಾಟನೆ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 3 ದಿನಗಳ ಭೇಟಿಗಾಗಿ ರಾಯಪುರಕ್ಕೆ ಆಗಮಿಸಿದ ಸಂದರ್ಭದಲ್ಲೇ ನಕ್ಸಲರ ಈ ಸಾಮೂಹಿಕ ಶರಣಾಗತಿ ಪ್ರಕ್ರಿಯೆ ನಡೆದಿದೆ ಎಂದು ಬಸ್ತಾರ್ ರೇಂಜ್ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್(ಐಜಿಪಿ) ಸುಂದರರಾಜ್ ಪಟ್ಟಿಲಿಂಗಮ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಾಂಗ್ರೆಸ್ ಸಂಸದಗೆ ಪಾಕ್ ತರಬೇತಿ

ಗುವಾಹಟಿ: ಕಾಂಗ್ರೆಸ್ ಪಕ್ಷದ ಲೋಕಸಭಾ ಸದಸ್ಯ ಗೌರವ್ ಗೊಗೊಯ್ ಭಾರತದ ವಲಸೆ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ನೀಡದೇ

2013ರಲ್ಲಿ ಪಾಕಿಸ್ತಾನಕ್ಕೆ ರಹಸ್ಯ ವಾಗಿ ಭೇಟಿ ನೀಡಿದ್ದರು. ಅಲ್ಲದೆ ಅಲ್ಲಿ ವಿಶಿಷ್ಟ ರೀತಿಯ ತರಬೇತಿ ಪಡೆದು ಬಂದಿದ್ದಾರೆ ಎಂಬ ಶಂಕೆ ಇದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಗಂಭೀರ ಆರೋಪ ಮಾಡಿದ್ದಾರೆ. ಗುವಾಹಟಿಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಶರ್ಮ, ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಅವರ ಪತ್ನಿ ಬ್ರಿಟನ್ ಸಂಜಾತೆ ಎಲೆಜಬೆತ್. ಅವರಿಗೆ ಪಾಕಿಸ್ತಾನದ ಕಂಪನಿಯೊಂದು ನೌಕರಿ ನೀಡಿ ಬಳಿಕ ಭಾರತಕ್ಕೆ ವರ್ಗಾಯಿಸಿದೆ. ಆಕೆ ಭಾರತದ 2 ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾಗ ದೇಶದ ಬಗ್ಗೆ ಮಹತ್ವದ ಮಾಹಿತಿಗಳನ್ನು ಕಲೆಹಾಕಿ ಪಾಕಿಸ್ತಾನಕ್ಕೆ ರವಾನಿಸಿದ್ದಾರೆ. ಅವರು ಭಾರತದಿಂದಲೇ 9 ಬಾರಿ ಪಾಕ್‌ಗೆ ಹೋಗಿ ಬಂದಿದ್ದಾರೆ ಎಂದೂ ಆರೋಪಿಸಿದ್ದಾರೆ.

ಪಾಕ್ ಪ್ರಜೆ ಅಲಿ ತೌಕೀರ್ ಶೇಖ್ ಅವರು ಕಾಂಗ್ರೆಸ್ ರಾಜ್ಯ ಘಟಕದ ಮುಖ್ಯಸ್ಥರೂ ಆಗಿರುವ ಸಂಸದ ಗೊಗೊಯ್ ಮತ್ತು ಅವರ ಪತ್ನಿಗೆ ಸಹಕಾರ ನೀಡುತ್ತಿದ್ದಾರೆ. ಮೂವರ ನಡುವೆ ಆಳವಾದ ಸಂಬಂಧವಿದೆ. ಇವರುಗಳ ಭಾರತ ವಿರೋಧಿ ಚಟುವಟಿಕೆ ಬಗ್ಗೆ ತನಿಖೆ ನಡೆಸಲು ಅಸ್ಸಾಂ ಸರಕಾರ ಎಸ್‌ಐಟಿ ರಚಿಸಿದ್ದು, ತನಿಖಾಧಿಕಾರಿ ಸೆ.10ರಂದು ವರದಿ ಸಲ್ಲಿಸಿದ್ದಾರೆ. ಈ ಬಗ್ಗೆ ಕೇಂದದ ತನಿಖಾ ಸಂಸ್ಥೆಗಳೇ ವಿಶಾಲ ತಳಹದಿಯಲ್ಲಿ ತನಿಖೆ ನಡೆಸಬೇಕಿದೆ ಎಂದು ಅಸ್ಸಾಂ ಸರಕಾರ ಶಿಫಾರಸು ಮಾಡುತ್ತದೆ ಎಂದೂ ಸಿಎಂ ಶರ್ಮಾ ಹೇಳಿದ್ದಾರೆ.

ಪಾಕ್ ಜತೆ ಗೊಗೊಯ್ ಹೊಂದಿರುವ ಸಂಪರ್ಕಗಳ ಬಗೆಗೂ ತನಿಖೆ ನಡೆಸಲು ಕೇಂದ್ರ ಗೃಹ ಸಚಿವಾಲಯಕ್ಕೆ ಅಸ್ಸಾಂ ಸಚಿವ ಸಂಪುಟ ಒತ್ತಾಯಿಸುತ್ತದೆ ಎಂದಿದ್ದಾರೆ.

ಎಂಜಿಆರ್ ಅಭಿಮಾನಿ ಅನ್ವರ್

ಕೌಲಾಲಂಪುರ: ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ತಮಿಳು ಸಿನಿಮಾ ರಂಗ ಖ್ಯಾತ ನಟ ಎಂ.ಜಿ.ರಾಮಚಂದ್ರನ್ (ಎಂಜಿಆರ್) ಅವರ 'ದೊಡ್ಡ ಅಭಿಮಾನಿ'. ಭಾರತೀಯರು ಎಂಜಿಆರ್ ಅವರ ಅಭಿಮಾನಿಗಳಾಗಿರುವಂತೆಯೇ ಅನ್ವರ್ ಇಬ್ರಾಹಿಂ ಸಹ ಎಂಜಿಆರ್ ಅವರ ಅಪ್ಪಟ ಅಭಿಮಾನಿ. ಹಾಗಾಗಿಯೇ ಅವರು ಭಾನುವಾರ ಆಯೋಜಿಸಿದ್ದ ಔತಣಕೂಟದಲ್ಲಿ ಎಂಜಿಆರ್ 1975ರಲ್ಲಿ ನಟಿಸಿದ್ದ ತಮಿಳು ಚಿತ್ರ 'ನಾಳೈ ನಮದೇ'ದ ಚಿತ್ರಗೀತೆ ಪ್ರಸಾರ ಮಾಡಲಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. 'ಮರುತೂರ್ ಗೋಪಾಲನ್ ರಾಮಚಂದ್ರನ್' (ಎಂಜಿಆರ್) ಚಿತ್ರರಂಗದಲ್ಲಷ್ಟೇ ಅಲ್ಲದೇ, ತಮಿಳುನಾಡಿನ ರಾಜಕಾರಣದಲ್ಲೂ ಅತ್ಯಂತ ಪ್ರಭಾವಶಾಲಿ. 'ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ'(ಎಐಎಡಿಎಂಕೆ) ಪಕ್ಷವನ್ನು ಸ್ಥಾಪಿಸಿ, ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ನಿಷೇಧಿತ ಸಂಘಟನೆ ಸದಸ್ಯನಿಂದ ಚಾಕು ದಾಳಿ | ಸ್ಥಳಕ್ಕೆ ಭಾರತೀಯ ದೂತಾವಾಸದ ಅಧಿಕಾರಿಗಳು

ರಷ್ಯಾ ಹಾಸ್ಟೆಲ್ ಇರಿತ: 4 ಭಾರತೀಯರಿಗೆ ಗಾಯ

ಮಾಸ್ಕೊ: ರಷ್ಯಾ ರಾಜಧಾನಿ ನಗರ ಮಾಸ್ಕೋದಿಂದ 1,200 ಕಿ.ಮೀ.ದೂರ ಪೂರ್ವ ಭಾಗದಲ್ಲಿರುವ ಬಾಷ್ಕೋರ್‌ಟೋಸ್ತಾನ್ ರಿಪಬ್ಲಿಕ್‌ನ ಉಫಾ ನಗರದಲ್ಲಿರುವ ಸರಕಾರಿ ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಸೇರಿದ ವಿದೇಶಿ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಶಸ್ತ್ರಧಾರಿ ಬಾಲಕನಿಂದ ಹಠಾತ್ ದಾಳಿ ನಡೆದಿದ್ದು, 6 ಮಂದಿ ಇರಿತಕ್ಕೊಳಗಾಗಿದ್ದಾರೆ.

ಹಾಸ್ಟೆಲ್‌ನೊಳಕ್ಕೆ ಶನಿವಾರ ರಾತ್ರಿ ನುಗ್ಗಿದ 15 ವರ್ಷದ ಬಾಲಕ, ಎದುರಿಗೆ ಸಿಕ್ಕಿದವರಿಗೆಲ್ಲಾ ಚಾಕುವಿನಿಂದ ಇರಿದಿದ್ದಾನೆ. ನಾಲ್ವರು ಭಾರತೀಯ ವಿದ್ಯಾರ್ಥಿಗಳು ಸೇರಿ ಆರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಇರಿತದ ಗಾಯವಾಗಿರುವ 6 ಜನರಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಒಬ್ಬನ ಸ್ಥಿತಿ ಗಂಭೀರವಾಗಿದೆ. ಉಳಿದವರ ದೇಹಸ್ಥಿತಿ ಸಹಜವಾಗಿದೆ ಎಂದು ರಷ್ಯಾದ ಫೆಡರಲ್ ಆರೋಗ್ಯ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ.

ಇದು ದುರದೃಷ್ಟಕರ ಘಟನೆ. ಭಾರತದ ನಾಲ್ವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ ಎಂದು ಕಜಾನ್‌ಲ್ಲಿನ ಭಾರತೀಯ ರಾಯಭಾರ ಕಚೇರಿ ಪ್ರತಿಕ್ರಿಯಿಸಿದೆ. ದೂತಾವಾಸದ ಅಧಿಕಾರಿಗಳು ಗಾಯಾಳು ವಿದ್ಯಾರ್ಥಿಗಳಿಗೆ ನೆರವಾಗಲೆಂದು ಉಫಾ ನಗರಕ್ಕೆ ತೆರಳಿದ್ದಾರೆ.

ಚಾಕುವಿನಿಂದ ಹಾಸ್ಟೆಲ್ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿದ ಬಾಲಕ ನಿಷೇಧಿತ ನಿಯೊ ನಾಜಿ ಸಂಘಟನೆಗೆ ಸೇರಿದವನಾಗಿದ್ದು, ರಾಷ್ಟ್ರೀಯವಾದದ ಘೋಷಣೆಗಳನ್ನು ಕೂಗುತ್ತಿದ್ದ ಎಂದು ತಿಳಿದುಬಂದಿದೆ. ಹಾಗಾಗಿ, ಈ ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆಗೆ ರಷ್ಯಾ ಸರಕಾರ ಆದೇಶಿಸಿದ್ದು, ತನಿಖೆ ಅದಾಗಲೇ ಆರಂಭಗೊಂಡಿದೆ.

ರಕ್ತ-ಭಯ: ದಾಳಿ ವೇಳೆಯ ಸಿಸಿಟಿವಿ ದೃಶ್ಯಾವಳಿ ಜಾಲತಾಣದಲ್ಲಿ ವೈರಲ್ ಆಗಿದೆ. ಹಾಸ್ಟೆಲ್ ಹಲವೆಡೆ ಇರಿತ ದಾಳಿ ನಡೆದ ಕಾರಣ ಬಹಳಷ್ಟು ಕಡೆ ರಕ್ತ ಚೆಲ್ಲಿದೆ. ಘಟನೆ ಬಳಿಕ ವಿದೇಶಿ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ಭಯ ಆವರಿಸಿದ್ದು, ವಿವಿಧ ದೇಶಗಳ ವಿದ್ಯಾರ್ಥಿಗಳು ಹಾಸ್ಟೆಲ್ ವಾಸ ಮುಂದುವರಿಸುವ ಬಗ್ಗೆ ಗೊಂದಲದಲ್ಲಿದ್ದಾರೆ.

ದಾಳಿಕೋರ ಬಾಲಕನನ್ನು ಬಂಧಿಸಿ ಹೊತ್ತೊಯ್ಯುತ್ತಿರುವ ರಷ್ಯಾ ಪೊಲೀಸರು.

ಬಾಲಕ ನಿಯೊ ನಾಜಿ ಸಂಘಟನೆಯ ಸದಸ್ಯ

ಶಸ್ತ್ರಧಾರಿ ಬಾಲಕನನ್ನು ಬಂಧಿಸಲು ಯತ್ನಿಸಿದಾಗ ಪೊಲೀಸ್ ಅಧಿಕಾರಿಗಳ ಮೇಲೆಯೂ ಆತ ಹಲ್ಲೆ ನಡೆಸಿದ್ದಾನೆ. ಪರಿಣಾಮ, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ. ಸೆಣಸಾಟ ವೇಳೆ ಬಾಲಕ ತನ್ನ ದೇಹದ ಮೇಲೆಯೂ ಚಾಕುವಿನಿಂದ ಗಾಯ ಮಾಡಿಕೊಂಡಿದ್ದಾನೆ. ಬಾಲಕನನ್ನು ಮಕ್ಕಳ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗೃಹ ಸಚಿವಾಲಯ ವಕ್ತಾರೆ ಮೇಜರ್ ಜನರಲ್ ಐರಿನಾ ವೋಲ್ಕ್ ಹೇಳಿರುವುದಾಗಿ ಸ್ಥಳೀಯ ಚಾನೆಲ್ ವರದಿ ಮಾಡಿದೆ. ದಾಳಿಕೋರ ಬಾಲಕ ನಿಷೇಧಿತ ನವ-ನಾಜಿ ಸಂಘಟನೆಗೆ ಸೇರಿದವನು ಎಂದು ಗುರುತಿಸಲಾಗಿದೆ. ದಾಳಿ ಮಾಡುವಾಗ ಬಾಲಕ ಘೋಷಣೆಗಳನ್ನು ಕೂಗಿದ್ದಾನೆ ಎಂದು ಬಾಜಾ ಚಾನೆಲ್ ವರದಿ ಬಿತ್ತರಿಸಿದೆ.

ವಾಷಿಂಗ್ಟನ್ ಪೋಸ್ಟ್ ಸಿಇಒ ರಾಜೀನಾಮೆ

ವಾಷಿಂಗ್ಟನ್: 'ದಿ ವಾಷಿಂಗ್ಟನ್ ಪೋಸ್ಟ್' ಮಾಧ್ಯಮ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ) ಮತ್ತು

ಪ್ರಕಾಶಕರೂ ಆಗಿರುವ ವಿಲ್ ಲೂಯಿಸ್ ತಮ್ಮ ಸ್ಥಾನಕ್ಕೆ ಶನಿವಾರ ರಾಜೀನಾಮೆ ಸಲ್ಲಿಸಿ ದ್ದಾರೆ. ಸಂಸ್ಥೆಗೆ ಸುಸ್ಥಿರ ಭವಿಷ್ಯ ಖಚಿತಪಡಿಸಲು ಇದುವೇ ಸೂಕ್ತ ಸಮಯ ಎಂಬ ನಿರ್ಧಾರಕ್ಕೆ ಬಂದಿದ್ದ ಸಿಇಒ ವಿಲ್ ಲೂಯಿಸ್, ಸಂಸ್ಥೆಯಲ್ಲಿನ ಮೂರನೇ ಒಂದು ಭಾಗ ಉದ್ಯೋಗಿಗಳನ್ನು ಕೆಲಸದಿಂದ ತೆಗೆದಿದ್ದರು. ಆ ಬಳಿಕ ಉದ್ಯೋಗಿಗಳ ವಿಭಾಗ ಭಾರೀ ಆಕ್ರೋಶ ವ್ಯಕ್ತಪಡಿಸಿತ್ತು. ಈ ಕ್ರಮಕ್ಕೆ ಓದುಗರಿಂದಲೂ ತೀವ್ರ ಅಸಮಾಧಾನ ವ್ಯಕ್ತವಾಗಿತ್ತು. ಆ ನಂತರದಲ್ಲೇ ಲೂಯಿಸ್ ರಾಜೀನಾಮೆ ನಿರ್ಧಾರ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಲೂಯಿಸ್ 2024ರಲ್ಲಿ ಸಿಇಒ ಆಗಿದ್ದರು. ಲೂಯಿಸ್ ರಾಜೀನಾಮೆ ಯನ್ನು ಆಡಳಿತ ಮಂಡಳಿ ತಕ್ಷಣವೇ ಅಂಗೀಕರಿಸಿದೆ. ಪತ್ರಿಕೆಯ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಜೆಫ್ ಡೊನೊಫ್ರಿಯೊ ಅವರನ್ನು ಹಂಗಾಮಿ ಸಿಇಒ ಆಗಿ ನೇಮಿಸಿದೆ.ವಿಲ್ ಲೂಯಿಸ್ ರಾಜೀನಾಮೆ ನೀಡಿದ್ದನ್ನು ಸ್ವಾಗತಿಸಿರುವ ವಾಷಿಂಗ್ಟನ್ ಪೋಸ್ಟ್ ಗಿಲ್ಡ್, 300 ಉದ್ಯೋಗಿಗಳ ವಜಾ ಆದೇಶವನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಜೆಫ್ ಬೆಜೋಸ್ ಮೇಲೆ ಒತ್ತಡ ಹೇರುತ್ತಿದೆ.

ಸಮಾಚಾರ ಸಣ್ಣದಲ್ಲ

500 ಕೋಟಿ ರು. ವಂಚಕನ ಬಂಧನ

ಚಂಡೀಗಢ: 500 ಕೋಟಿ ರು. ವಂಚನೆ ಪ್ರಕರಣದಲ್ಲಿ 32ನೇ ಅವೆನ್ಯೂ ವಾಣಿಜ್ಯ ರಿಯಲ್



ಎಸ್ಟೇಟ್ ಯೋಜನೆಯ ಸ್ಥಾಪಕ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಧ್ರುವ್ ದತ್ ಶರ್ಮಾನನ್ನು ಬಂಧಿಸಲಾಗಿದೆ. ಈತ ತಾನು ನಿರ್ಮಾಣ ಮಾಡಿ ಮಾರಾಟಕ್ಕೆ ಇರಿಸಿರುವ ಒಂದು ಅಪಾರ್ಟ್‌ಮೆಂಟ್ ಫ್ಲೋರ್ ಅನ್ನು 25ಕ್ಕೂ ಹೆಚ್ಚು ಜನರಿಗೆ ಮಾರಾಟ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಈತ ಸುಮಾರು 500 ಕೋಟಿ ರು. ವಂಚನೆ ಮಾಡಿದ್ದಾನೆ ಎನ್ನಲಾಗಿದೆ. ಆರೋಪಿಯನ್ನು ಬಂಧಿಸಿ ನಂತರ ನಗರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಶರ್ಮಾ ವಿವಿಧ ಜನರಿಗೆ ಸುಮಾರು 500 ಕೋಟಿ ರು. ವಂಚಿಸಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿದೆ.

ತಿರುಪತಿಯ ತುಪ್ಪ ಕಲಬೆರಕೆ; ತಪ್ಪೊಪ್ಪಿಗೆ

ಅಮರಾವತಿ (ಆಂಧ್ರ ಪ್ರದೇಶ): ತಿರುಮಲದ ಲಡ್ಡುವಿನಲ್ಲಿ ಕಲಬೆರಕೆ ನಡೆದ ವರದಿಗಳ ನಂತರ

ವಿವಾದ ಭುಗಿಲೆದ್ದಿದ್ದು, ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಮಂಡಳಿಯ ಮಾಜಿ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಅವರು ತಿರುಮಲ ಲಡ್ಡು ತಯಾರಿಸಲು ಬಳಸುವ ತುಪ್ಪದಲ್ಲಿ ಕಲಬೆರಕೆ ನಡೆ ದಿರುವುದನ್ನು ಒಪ್ಪಿಕೊಂಡಿದ್ದಾರೆ. ಆಂಧ್ರದ ಮಾಜಿ ಸಿಎಂ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಆಪ್ತ ಸಂಬಂಧಿ ಆಗಿರುವ ಸುಬ್ಬಾ ರೆಡ್ಡಿ, ಲಡ್ಡು ಮಾದರಿ ಗಳಲ್ಲಿ ರಾಸಾಯನಿಕಗಳು ಮತ್ತು ಇತರ ಪದಾರ್ಥ ಗಳಿವೆ ಎಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿದ ವರದಿಯನ್ನು ತಾವು ಒಪ್ಪುವುದಾಗಿ ಸಾರ್ವ ಜನಿಕವಾಗಿಯೇ ಹೇಳಿದ್ದಾರೆ. ಆದರೆ ಈ ಕೃತ್ಯದಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು ಅವರು ನಿರಾಕರಿ ಸಿದ್ದು, ಅಂತರ ಕಾಯ್ದುಕೊಂಡಿದ್ದಾರೆ. ತುಪ್ಪದಲ್ಲಿ ಕಲಬೆರಕೆ ಆಗಿದ್ದು, ಎಸ್‌ಐಟಿ ವರದಿ ತುಪ್ಪವನ್ನು ತಾಳೆ ಎಣ್ಣೆ, ತಾಳೆ ಕರ್ನಲ್ ಎಣ್ಣೆ ಮತ್ತು ಇತರ ಕೆಲವು ವಸ್ತುಗಳೊಂದಿಗೆ ಕಲಬೆರಕೆ ಮಾಡಲಾಗಿದೆ ಎಂದು ಹೇಳಿದೆ. ಅಧಿಕಾರಿಗಳೂ ಸೇರಿ ಅನೇಕ ಮಂದಿ ಕಲಬೆರಕೆ ತುಪ್ಪದ ಪೂರೈಕೆಯಲ್ಲಿ ಭಾಗಿಯಾಗಿದ್ದಾರೆ ಎಂದು ವರದಿ ತಿಳಿಸಿದೆ. ಅವರ ಹೆಸರು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಅಜಿತ್ ದೋವಲ್ ಕೆನಡಾಕ್ಕೆ ಭೇಟಿ

ಒಟ್ಟಾವಾ: ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಕೆನಡಾಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ದ್ವಿಪಕ್ಷೀಯ ಭದ್ರತಾ ಸಂವಾದದ ಭಾಗವಾಗಿ ಕೆನಡಾದ ಪ್ರಧಾನ ಮಂತ್ರಿಯ ಉಪ ಗುಮಾಸ್ತ ಮತ್ತು ರಾಷ್ಟ್ರೀಯ ಭದ್ರತೆ ಮತ್ತು ಗುಪ್ತಚರ ಸಲಹೆಗಾರ್ತಿ ನಥಾಲಿ ಡ್ರೌಯಿನ್ ಅವರೊಂದಿಗೆ ಮಾತುಕತೆ ನಡೆಸಿದರು. ದೋವಲ್ ಮತ್ತು ಡ್ರೌಯಿನ್ ನಡುವಿನ ಮಾತುಕತೆಗಳು ಭಾರತ-ಕೆನಡಾ ಸಂಬಂಧಗಳಲ್ಲಿ ಸ್ಪಷ್ಟವಾದ ಮರುಸ್ಥಾಪನೆಯನ್ನು ಸೂಚಿಸಿವೆ. ಖಲಿಸ್ತಾನಿ-ಸಂಬಂಧಿತ ಗುಂಪುಗಳಿಗೆ ಸಂಬಂಧಿಸಿದಂತೆ ಮಾದಕ ದ್ರವ್ಯಗಳು, ಸೈಬರ್ ಬೆದರಿಕೆಗಳು ಮತ್ತು ಉಗ್ರವಾದದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಅಧಿಕೃತ ಹೇಳಿಕೆಯ ಪ್ರಕಾರ, ಎರಡೂ ಕಡೆಯವರು ತಮ್ಮ ದೇಶಗಳು ಮತ್ತು ನಾಗರಿಕರ ಸುರಕ್ಷತೆ ಮತ್ತು ಭದ್ರತೆಯನ್ನು ಬೆಂಬಲಿಸುವ ಗುರಿಯನ್ನು ಹೊಂದಿರುವ ಉಪಕ್ರಮಗಳಲ್ಲಿನ ಪ್ರಗತಿಯನ್ನು ಒಪ್ಪಿಕೊಂಡರು. ರಾಷ್ಟ್ರೀಯ ಭದ್ರತೆ ಮತ್ತು ಕಾನೂನು ಜಾರಿ ವಿಷಯಗಳ ಕುರಿತು ದ್ವಿಪಕ್ಷೀಯ ಸಹಕಾರವನ್ನು ಮಾರ್ಗದರ್ಶನ ಮಾಡಲು ಮತ್ತು ಆಯಾ ಆದ್ಯತೆಗಳಲ್ಲಿ ಪ್ರಾಯೋಗಿಕ ಸಹಯೋಗವನ್ನು ಸಕ್ರಿಯಗೊಳಿಸಲು ಹಂಚಿಕೆಯ ಕಾರ್ಯಯೋಜನೆಗೆ ಒಪ್ಪಿಗೆ ನೀಡಲಾಗಿದೆ.

ಸೂರಜ್‌ಕುಂಡ್ ದುರಂತ ಇನ್ಸ್‌ಪೆಕ್ಟರ್ ಸಾವು

ಚಂಡಿಗಢ: ಹರಿಯಾಣದ ಸೂರಜ್‌ಕುಂಡ್ ಅಂತಾರಾಷ್ಟ್ರೀಯ ಕರಕುಶಲ ಮೇಳದಲ್ಲಿ ಸಂಭವಿಸಿದ ಸ್ವಿಂಗ್ ದುರಂತ ಪ್ರಕರಣದಲ್ಲಿ ರಕ್ಷಣೆಗೆ ತೆರಳಿದ್ದ ಇನ್ಸ್‌ಪೆಕ್ಟರ್ ದುರಂತ ಸಾವನ್ನಪ್ಪಿದ್ದು, ಈ ಬೆಳವಣಿಗೆ ಬೆನ್ನಲ್ಲೇ ಸ್ವಿಂಗ್ ಮಾಲೀಕ ಮತ್ತು ಆಪರೇಟರ್ ಅನ್ನು ಪೊಲೀಸರು ಬಂಧಿಸಿದ್ದಾರೆ. ಮೇಳದಲ್ಲಿ ನಿಯೋಜಿಸಲ್ಪಟ್ಟಿದ್ದ ಅಪರಾಧ ವಿಭಾಗದ ಇನ್ಸ್‌ಪೆಕ್ಟರ್ ಜಗದೀಶ್ ಪ್ರಸಾದ್ (58) ಅವರು ಗಾಯಗೊಂಡ ಜನರನ್ನು ರಕ್ಷಿಸಲು ಮುಂದಾದಾಗ ಉಯ್ಯಾಲೆ ಅವರ ಮೇಲೆ ಬಿದ್ದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಅವರೊಂದಿಗೆ ಇತರೆ ಹನ್ನೆರಡು ಮಂದಿ ನಾಗರಿಕರು ಗಾಯಗೊಂಡಿದ್ದಾರೆ. ಪೊಲೀಸರ ಪ್ರಕಾರ, ಈ ದುರಂತದ ಸಂದರ್ಭದಲ್ಲಿ ಸುಮಾರು 19 ಜನರು ತೂಗುಯ್ಯಾಲೆಯ ಮೇಲೆ ಇದ್ದರು, ಅದು ಒಂದು ಬದಿಯಿಂದ ಓರೆಯಾಗಿ ಜಾರಿತು. ಈ ವೇಳೆ ಇನ್ಸ್‌ಪೆಕ್ಟರ್ ಜಗದೀಶ್ ಪ್ರಸಾದ್ ಮತ್ತು ಇತರ ಪೊಲೀಸ್ ಸಿಬ್ಬಂದಿ ಸಿಕ್ಕಿಬಿದ್ದವರನ್ನು ರಕ್ಷಿಸಲು ಧಾವಿಸಿದರು. ರಕ್ಷಣಾ ಕಾರ್ಯ ನಡೆಯುತ್ತಿರುವಾಗ ಇನ್ನೊಂದು ಬದಿಯಿಂದ ತೂಗುಯ್ಯಾಲೆ ಬಿದ್ದು ರಕ್ಷಣಾ ಸಿಬ್ಬಂದಿ ಮೇಲೆ ಕುಸಿದು ಗಂಭೀರ ಗಾಯಗಳಾಗಿದ್ದವು.

ಸಂಪನ್ಮೂಲ ಕುಸಿತ, ವೆಚ್ಚಗಳ ಗಾತ್ರದ ಏರುಗತಿ, ಸಾಲಕ್ಕೆ ಮಿತಿ ನಡುವೆ ಆಯವ್ಯಯ ತಯಾರಿ ತಿಣುಕಾಟ

ಬಜೆಟ್‌ಗೆ ಸಾಲು ಸಾಲು ಚುನಾವಣೆಗಳ ಸವಾಲು

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಸರಕಾರ ಈ ಬಾರಿ ಚುನಾವಣೆಗಳ ಬಜೆಟ್ ಸಿದ್ಧಪಡಿಸುತ್ತಿದ್ದು, ಇದಕ್ಕೆ ಸಂಪನ್ಮೂಲ ಹೊಂದಿಸಲು

ತಿಣಕಾಡುವಂತಾಗಿದೆ. ಅದರಲ್ಲೂ ಈತನಕ 16 ಬಾರಿಯೂ ಉತ್ತಮ ಬಜೆಟ್ ಮಂಡಿಸುವ ಮೂಲಕ ದೇಶದ ಗಮನ ಸೆಳೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಾರಿ 17ನೇ ಬಜೆಟ್ ದೊಡ್ಡ ಸವಾಲೇ ಆಗಿದೆ.

ಕಾರಣ, ಗ್ಯಾರಂಟಿಗಳ ಹಣಕಾಸು ಆರ್ಭಟ ಹಾಗೂ ಕೇಂದ್ರ ಸರಕಾರದ ಆರ್ಥಿಕ ಅಸಹಕಾರದಿಂದ ರಾಜ್ಯ ಸರಕಾರ ಅನೇಕ ಯೋಜನೆಗಳಿಗೆ ಹಣವಿಲ್ಲದೆ ಪರದಾಡುವಂತಾಗಿದೆ. ಇಂಥ ಸ್ಥಿತಿಯಲ್ಲಿ ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಚುನಾವಣೆ ಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ತಯಾರಿಸ ಬೇಕಿದೆ. ಇದರೊಂದಿಗೆ ನಡೆಸಲೇಬೇಕಾದ ಅನಿವಾ ರ್ಯದ ಐದು ಪಾಲಿಕೆಗಳ ಜಿಬಿಎ ಚುನಾವಣೆ. ಅಷ್ಟಕ್ಕೂ ಈ ಹಿಂದೆ ಹಾಗೊಮ್ಮೆ ಹೀಗೊಮ್ಮೆ ಬರುತ್ತಿದ್ದ ಚುನಾವಣೆಗಳು ಸಾಲಾಗಿ ಈಗ ಒಮ್ಮೆಲೇ ಬಂದು ದುತ್ತೆಂದು ಬಂದು ನಿಂತಿರುವುದು ಹಾಗೂ ಅವುಗ ಳನ್ನು ಎದುರಿಸಲು ಯೋಜನೆಗಳಿಗೆ ಅನುದಾನ ಹೊಂದಿಸುವುದು ಸರಕಾರಕ್ಕೆ ತ್ರಾಸದಾಯಕ ಎನ್ನಲಾಗಿದೆ.

ಈ ಮಧ್ಯೆ ಕಳೆದ ಎರಡೂ ಬಜೆಟ್‌ಗಳಲ್ಲೂ ಹೆಚ್ಚಿನ ಅನುದಾನ ಆದ್ಯತೆ ಪಡೆದುಕೊಂಡಿದ್ದ ಗ್ಯಾರಂಟಿ ಗಳಿಂದ ಕ್ಷೇತ್ರಗಳ ಅಭಿವೃದ್ಧಿಯ ಬಂಡವಾಳ ವೆಚ್ಚಕ್ಕೆ ಆದ್ಯತೆ ಸಿಗುತ್ತಿಲ್ಲ ಎನ್ನುವ ಕಾಂಗ್ರೆಸ್ ಶಾಸಕರ ಅಳಲು ಅಳಿಸಬೇಕಿದೆ. ಆದರೆ ವಾಣಿಜ್ಯ ತೆರಿಗೆ, ಆಸ್ತಿಗಳ ನೋಂದಣಿ ಸೇರಿದಂತೆ ಪ್ರಮುಖ ಆದಾಯ ಮೂಲ ಗಳಿಂದ ನಿರೀಕ್ಷಿತ ಆದಾಯ ಕ್ರೋಢೀಕರಣ ವಾಗದ ಕಾರಣ ಎಲ್ಲ ಯೋಜನೆಗಳಿಗೂ ಎಲ್ಲಿಂದ ಸಂಪನ್ಮೂಲ ಕ್ರೋಢೀಕರಿಸುವುದು ಎನ್ನುವ ತಲೆ ನೋವು ಸರಕಾರದ್ದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿದ್ದುಗೆ ಈ ಬಾರಿ ವಿಶೇಷ ಸವಾಲು: ಹೆಚ್ಚು ಬಾರಿ ಬಜೆಟ್ ಮಂಡಿಸಿದ ಖ್ಯಾತಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಾರಿ ಬಜೆಟ್ ವಿಶೇಷ ಸವಾಲನ್ನೇ ಒಡ್ಡಿದೆ ಎನ್ನಲಾಗಿದೆ. ಕಳೆದ ಬಾರಿ 4.09 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ ಅವರು ಈ ಸಾಲಿನಲ್ಲಿ ಕಡಿಮೆ ಮೊತ್ತವನ್ನಾದರೂ ದಾಖಲಿಸಿ ಗಾತ್ರ ಹೆಚ್ಚಿಸುವ ಸಾಧ್ಯತೆ ಇದೆ. ಹಾಗಂತ ಸಾಲದ ಪ್ರಮಾಣವನ್ನೂ ಹೆಚ್ಚಿಸುವಂತಿಲ್ಲ. ಕಳೆದ ಬಾರಿಯಂತೆ ಕೊರತೆ ಬಜೆಟ್ ಮಂಡಿಸುವಂತಿಲ್ಲ. ಹಾಗೆಯೇ ಹಿಂದಿನ ಸಾಲಿನಲ್ಲಿದ್ದ ವಿತ್ತೀಯ ಕೊರತೆ (ಜಿಎಸ್‌ಡಿಪಿಯ ಶೇ.3ರ ಮೀರದಂತೆ) 90,428 ಕೋಟಿ ರು.ಗಳಿಗಿಂತ ಈಗ ಹೆಚ್ಚಿಸಬೇಕಾದ ಅನಿವಾರ್ಯವೂ ಬಜೆಟ್ ಕರ್ತೃ ಸಿದ್ದರಾಮಯ್ಯ ಅವರಿಗೆ ಇದೆ ಎನ್ನಲಾಗಿದೆ.

ಇನ್ನು ಸಿಗ್ನೇಚರ್ ಯೋಜನೆ ಎನ್ನಲಾದ ಗ್ಯಾರಂಟಿ ಗಳಿಗೂ ಅನುದಾನ ಕೊರತೆ ಮಾಡದೆ, ಅತ್ತ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಹಾಗೂ ಪಾಲಿಕೆಗಳ ಚುನಾವಣೆಗಳ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ಬೆಂಗಳೂರು ಹಾಗೂ ಇತರ ನಗರ ಪ್ರದೇಶಗಳಿಗೆ ಹೆಚ್ಚಿನ ಅನುದಾನ ಘೋಷಣೆ ಮಾಡಬೇಕಾದ ಸಂದಿಗ್ಧತೆಯಲ್ಲೂ ಸರಕಾರವಿದೆ ಎಂದು ಹೇಳಲಾಗಿದೆ. ಇನ್ನು ರಾಜಕೀಯ ದಾಳವಾದ ಅಹಿಂದ ಸಂತುಷ್ಟಿಯ ಒಂದಷ್ಟು ಕಾರ್ಯಕ್ರಮಗಳನ್ನೂ ಪ್ರಕಟಿಸಬೇಕಿದೆ. ಆದರೆ ಕೇಂದ್ರ ಸರಕಾರದ ಅಸಹಕಾರ ಮತ್ತು ತೆರಿಗೆ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಇಂಥ ಸ್ಥಿತಿಯಲ್ಲಿ ಎಲ್ಲರನ್ನೂ ಸಂತೈಸುವ ಬಜೆಟ್ ಸೃಷ್ಟಿ ಹೇಗೆ ಸಾಧ್ಯ ಎನ್ನುವ ಪ್ರಶ್ನೆ ಮುಂದಿಟ್ಟುಕೊಂಡು ಸಿದ್ದರಾಮಯ್ಯ ಬಜೆಟ್ ಸಿದ್ಧಪಡಿಸುತ್ತಿರುವ ಅರ್ಥಿಕ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಂಪನ್ಮೂಲ ಕೊರತೆ ಎಲ್ಲಿ? ಹೇಗೆ?

ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಗಳನ್ನು ನಡೆಸಿ 5 ವರ್ಷಗಳಿಗೂ ಹೆಚ್ಚಿನ ಅವಧಿಯಾಗಿದ್ದು, ಹೈಕೋರ್ಟ್ ತಪರಾಕಿಯಿಂದ ಜೂನ್ ಒಳಗೆ ಚುನಾವಣೆ ನಡೆಸಬೇಕಿದೆ. ಇದೇ ರೀತಿ 6 ವರ್ಷಗಳಿಂದ ಚುನಾವಣೆಯನ್ನೇ ಕಾಣದ ಬೆಂಗಳೂರಿನಲ್ಲಿ ಐದು ಪಾಲಿಕೆಗಳ ಚುನಾವಣೆಗೆ ಸುಪ್ರೀಂಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿರುವ ಕಾರಣ ಚುನಾವಣೆ ನಡೆಸಲೇಬೇಕಿದೆ. ಇಲ್ಲಿ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬಹುತೇಕ ಮೂರು ವರ್ಷಗಳಿಂದ ಹೆಚ್ಚಿನ ಅನುದಾನ ಸಿಗದ ಕಾರಣ ಈ ಬಾರಿ ಹೆಚ್ಚಿನ ಅನುದಾನ ನೀಡುವುದು ಸಿದ್ದರಾಮಯ್ಯ ಅವರಿಗೆ ಅನಿವಾರ್ಯ. ಇನ್ನು ಬೆಂಗಳೂರಿನಲ್ಲಿ ಜಿಬಿಎ ಚುನಾವಣೆ ಹಿನ್ನೆಲೆಯಲ್ಲಿ ಸುರಂಗ ಮಾರ್ಗ ಸೇರಿದಂತೆ ಅನೇಕ ಮೇಲು ಸೇತುವೆ, ಉಪನಗರ, ಅಂಡರ್‌ಪಾಸ್‌ನಂಥ ಬೃಹತ್ ಯೋಜನೆಗಳನ್ನು ಪ್ರಕಟಿಸಬೇಕಿದೆ. ಆದರೆ ಬಜೆಟ್‌ನ ಮೂಲ ಆದಾಯವಾಗಿರುವ ವಾಣಿಜ್ಯ ತೆರಿಗೆಯಲ್ಲಿ ನಿರೀಕ್ಷಿತ ಪ್ರಗತಿ ಕಂಡಿಲ್ಲ. ಅಂದರೆ ಕಳೆದ ಬಾರಿ 1 ಲಕ್ಷ ಕೋಟಿ ರು. ಮೀರಿದ್ದ ತೆರಿಗೆ ಸಂಗ್ರಹ ಈ ಬಾರಿ 90 ಸಾವಿರ ಕೋಟಿ ರು. ಗಳಿಗೆ ಸುಸ್ತಾಗಿದೆ. ಇದೇ ರೀತಿ ಮುಂದ್ರಾಂಕ ಮತ್ತು ನೋಂದಣಿಯಲ್ಲೂ 1000 ಕೋಟಿ ರು.ಗಳಿಗೂ ಹೆಚ್ಚಿನ ಕೊರತೆ ಉಂಟಾಗಿದೆ. ಹಾಗೆಯೇ ಮೋಟಾರ್ ವಾಹನ ನೋಂದಣಿಯಲ್ಲೂ ಕುಠಿತ ವಾಗಿದೆ. ಇನ್ನು ಪ್ರಮುಖ ಆದಾಯವಾಗಿದ್ದ ಅಬಕಾರಿಯಲ್ಲೂ ನಿರೀಕ್ಷಿತ ಆದಾಯ ಸಂಗ್ರವಾ ಗಿಲ್ಲ. ಅಷ್ಟಕ್ಕೂ ಹೊಸದಾಗಿ 600 ಲೈಸೆನ್ಸ್‌ಗಳನ್ನು ಹರಾಜು ಮಾಡಿದ್ದರೆ ಕನಿಷ್ಠ 500 ಕೋಟಿ ರು. ಹೆಚ್ಚುವರಿ ಆದಾಯ ಸಿಗುತ್ತಿತ್ತು. ಆದರೆ ಸದ್ಯಕ್ಕೆ ಅದೂ ದೂರದ ಮಾತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗ್ಯಾರಂಟಿಗಳಿಗೆ ಕತ್ತರಿ ಪ್ರಯೋಗ

ಸಂಪನ್ಮೂಲ ಕೊರತೆ ಹಿನ್ನೆಲೆಯಲ್ಲಿ ಈ ಬಾರಿ ಗ್ಯಾರಂಟಿಗಳಿಗೆ ಕೊಂಚ ಕಠಿಣ ನಿಯಮಗಳನ್ನು ಹಾಕಿ ಅನಗತ್ಯ ವೆಚ್ಚ ಕಡಿಮೆ ಮಾಡಲು ಚಿಂತಿಸಲಾಗಿದೆ. ಅಂದರೆ ಸರಕಾರಿ ನೌಕರರು, ಹೆಚ್ಚಿನ ಭೂಮಿ ಹೊಂದಿರುವವರ ಬಿಪಿಎಲ್ ಕಾರ್ಡ್‌ಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳು ರದ್ದುಗೊಳಿಸುವುದು, ಆದಾಯ ತೆರಿಗೆ ಪಾವತಿಸುವವರು ಹಾಗೂ ಜೀವಿತ ಪ್ರಮಾಣಪತ್ರ ನೀಡದವರಿಗೆ ಗೃಹಲಕ್ಷ್ಮೀ ಯೋಜನೆಯಿಂದ ಮುಕ್ತಿ ನೀಡುವುದು, ಶಕ್ತಿ ಯೋಜನೆ ಮತ್ತು ಗೃಹಜ್ಯೋತಿ ವೆಚ್ಚಕ್ಕೆ ಕೊಂಚ ಕಡಿವಾಣ ಹಾಕಿ, ಸುಮಾರು 60 ಸಾವಿರ ಕೋಟಿಗಳ ಹೊರೆಯನ್ನು 50 ಸಾವಿರ ಕೋಟಿಗೆ ಇಳಿಸಲು ಸಾಧ್ಯವೇ ಎನ್ನುವ ಚಿಂತನೆ ಆರ್ಥಿಕ ಅಧಿಕಾರಿಗಳದ್ದು, ಇದರ ಜತೆಗೆ ಅಬಕಾರಿ ಮತ್ತು ಸಿಗರೇಟ್‌ನಂತಹ ರಾಜ್ಯ ವ್ಯಾಪ್ತಿಯ ಕೆಲವು ವಿಲಾಸಿ ವಸ್ತುಗಳ ಮೇಲೆ ತೆರಿಗೆ ಏರಿಕೆ ಮಾಡಿ ಸಂಪನ್ಮೂಲ ಹೊಂದಾಣಿಕೆ ಮಾಡುವ ನಿಟ್ಟಿನಲ್ಲಿ ಚರ್ಚೆ ನಡೆದಿದೆ ಎಂದು ಆರ್ಥಿಕ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವವಾಣಿ ಅಂಕಣಕಾರ ಕಿರಣ್ ಉಪಾಧ್ಯಾಯ ಸಲಹೆ

ವಿದ್ಯಾರ್ಥಿಗಳು ಕೀಳರಿಮೆ ತೊರೆಯಲಿ

ಆಶುಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಅಧ್ಯಾಯ ಟ್ರಸ್ಟ್ ಶಿರಸಿ ನಿರ್ದೇಶಕ ಕಿರಣ್ ಉಪಾಧ್ಯಾಯ, ವಿದ್ಯಾರ್ಥಿ ಕಟಪಾಡಿ ನರೇಂದ್ರ ಶೆಟ್ಟಿ, ನಿರ್ದೇಶಕ ಸಂತೋಷ್ ನಾಯಕ್ ಪಟ್ಲ, ಕವಿ ಶಾಂತಾರಾಮ್ ಶೆಟ್ಟಿ, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಸತ್ಯೇಂದ್ರ ಪೈ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಕೀಳರಿಮೆಯನ್ನು ತೊರೆದು ಕನ್ನಡದಲ್ಲಿ ಪ್ರೌಢಿಮೆ ಗಳಿಸಿದರೆ ಉಳಿದ ಭಾಷೆಗಳು ಕಲಿಯುವುದು ಸಲೀಸು ಎಂದು ವಿಶ್ವವಾಣಿ ಅಂಕಣಕಾರ, ಅಧ್ಯಾಯನ ಟ್ರಸ್ಟ್ ನಿರ್ದೇಶಕ ಕಿರಣ್ ಉಪಾಧ್ಯಾಯ ಅಭಿಪ್ರಾಯಪಟ್ಟರು.

ಅಧ್ಯಾಯ ಟ್ರಸ್ಟ್‌ನಿಂದ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಕನ್ನಡ ಮಾಧ್ಯಮ ಅನುದಾನಿತ ಪ್ರೌಢಶಾಲಾ ವಿಭಾಗದ ಮೂರನೇ ತರಗತಿಗಳ ವಿದ್ಯಾರ್ಥಿಗಳಿಗಾಗಿ ಆಶುಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಅವರು, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಕೀಳರಿಮೆಯನ್ನು ತೊರೆದು ಕನ್ನಡದಲ್ಲಿ ಪ್ರೌಢಿಮೆ ಗಳಿಸಿಕೊಂಡರೆ ಉಳಿದ ಭಾಷೆಗಳು ತಾನಾಗಿ ಕೈವಶವಾಗುವುದು ಎಂದರು.

ಶಾಲಾ ಹಳೇ ವಿದ್ಯಾರ್ಥಿ ಕಟಪಾಡಿ ನರೇಂದ್ರ ಶೆಟ್ಟಿ ಮಾತನಾಡಿ, ನಮ್ಮ ವ್ಯಕ್ತಿತ್ವಗಳನ್ನು ತಿದ್ದಿದ ಗುರುಗಳನ್ನು ಯಾವಾಗಲೂ ಸ್ಮರಿಸಬೇಕು. ಯಕ್ಷಗಾನ, ತಾಳಮದ್ದಲೆಯಂತಹ ಕಲೆಯ ಪ್ರದರ್ಶನವನ್ನು ನೋಡುವ ಅಭ್ಯಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ನಿರ್ದೇಶಕ ಸಂತೋಷ್ ನಾಯಕ್ ಪಟ್ಲ, ಕವಿ ಶಾಂತಾರಾಮ್ ಶೆಟ್ಟಿ, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಸತ್ಯೇಂದ್ರ ಪೈ, ವೆಂಕಟರಮಣ ಭಟ್, ಗಣೇಶ್ ಕಿಣಿ, ಶ್ರೀನಿವಾಸ ಕಿಣಿ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಫ್ರಾನ್ಸ್‌ನ 114 ರಫೇಲ್ ಖರೀದಿಗೆ ಸಿದ್ಧತೆ

ದೆಹಲಿ: ಫ್ರಾನ್ಸ್‌ನಿಂದ 114 ರಫೇಲ್ ಫೈಟರ್ ಜೆಟ್ ಖರೀದಿಗೆ ಭಾರತ ಈಗ ತಯಾರಿ ನಡೆಸುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಹಲವಾರು ದೇಶಗಳೊಂದಿಗೆ ಪ್ರಮುಖ ಒಪ್ಪಂದಗಳನ್ನು ಮಾಡಿಕೊಳ್ಳುವಲ್ಲಿ ನಿರತವಾಗಿರುವ ಭಾರತ ಇದೀಗ ಫ್ರಾನ್ಸ್‌ನಿಂದ ರಫೇಲ್ ಫೈಟರ್ ಜೆಟ್ ಖರೀದಿಗೆ ಮುಂದಾಗಿದೆ. ಕೆನಡಾ , ಬ್ರಿಟನ್, ಯುರೋಪಿಯನ್ ಒಕ್ಕೂಟ, ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಇತ್ತೀಚೆಗೆ ಭಾರತ ಸಹಿ ಹಾಕಿದೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರ ಭಾರತ ಭೇಟಿಗೂ ಮುನ್ನವೇ ಭಾರತ 114 ರಫೇಲ್ ಜೆಟ್‌ಗಳ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಈಗಾಗಲೇ ಅನುಮೋದನೆ ಪಡೆಯಲಾಗಿರುವ 42 ಸ್ಕ್ವಾಡ್ರನ್‌ಗಳನ್ನು 29 ಸ್ಕ್ವಾಡ್ರನ್‌ಗಳಿಗೆ ಇಳಿಸಲಾಗಿದ್ದು ಫ್ರಾನ್ಸ್‌ನಿಂದ 114 ರಫೇಲ್ ಫೈಟರ್ ಜೆಟ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲು 3.25 ಲಕ್ಷ ಕೋಟಿ ರು. ಯೋಜನೆಗೆ ಅನುಮೋದನೆ ನೀಡಲು ಭಾರತೀಯ ರಕ್ಷಣಾ ಮಂಡಳಿ ಸಿದ್ಧತೆ ನಡೆಸುತ್ತಿದೆ.

ಬಹು ಶತಕೋಟಿ ಡಾಲರ್ ಒಪ್ಪಂದದ ಬಗ್ಗೆ ಪರಿಶೀಲನೆ ನಡೆಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ರಕ್ಷಣಾ ಸ್ವಾಧೀನ ಮಂಡಳಿ ಶೀಘ್ರದಲ್ಲೇ ಸಭೆ ಸೇರಲಿದೆ. ಈಗಾಗಲೇ ರಕ್ಷಣಾ ಕಾರ್ಯದರ್ಶಿ ನೇತೃತ್ವದ ರಕ್ಷಣಾ ಖರೀದಿ ಮಂಡಳಿಯು ಕಳೆದ ತಿಂಗಳು ರಫೇಲ್ ಸ್ವಾಧೀನ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಔಪಚಾರಿಕ ಮಾತುಕತೆಗಳನ್ನು ನಡೆಸಿದೆ.

ಯುದ್ಧ ವಿಮಾನಗಳ ಶೇ. 80ರಷ್ಟನ್ನು ದೇಶೀಯವಾಗಿ ಉತ್ಪಾದಿಸುವ ನಿರೀಕ್ಷೆಯಿದೆ. ಸ್ಥಳೀಯ ಉತ್ಪಾದನೆ ಮತ್ತು ವಿಮಾನಗಳ ಜೋಡಣೆಗಾಗಿ ಭಾರತೀಯ ಖಾಸಗಿ ವಲಯದ ಕಂಪನಿಗಳೊಂದಿಗೆ ಡಸಾಲ್ಟ್ ಏವಿಯೇಷನ್ ಒಪ್ಪಂದ ಮಾಡಿಕೊಳ್ಳುವ ನಿರೀಕ್ಷೆಯಿದೆ.

500 ಬಿಲಿಯನ್ ಡಾಲರ್ ಸರಕು ಖರೀದಿ ಕಷ್ಟವೇನಲ್ಲ

ದೆಹಲಿ: ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಬಿಲಿಯನ್ ಡಾಲರ್ (ಸರಿಸುಮಾರು ₹45.28 ಲಕ್ಷ ಕೋಟಿ) ಮೌಲ್ಯದ ಸರಕುಗಳನ್ನು ಖರೀದಿಸುವುದು

ಭಾರತಕ್ಕೆ ಕಷ್ಟವಾಗದು ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಈ ಮೊತ್ತದ ಸರಕುಗಳ ಖರೀದಿಯು ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಭಾಗವಾಗಿದೆ.

ಕಚ್ಚಾ ತೈಲ, ದ್ರವೀಕೃತಕ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ದ್ರವೀಕೃಕ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮಾತ್ರವಲ್ಲದೆ ವೈಮಾನಿಕ ಕ್ಷೇತ್ರವೊಂದಕ್ಕೇ ನಮಗೆ 100 ಬಿಲಿಯನ್ ಡಾಲರ್‌ಗಿಂತ (ಸರಿಸುಮಾರು ₹9 ಲಕ್ಷ ಕೋಟಿ) ಹೆಚ್ಚು ಮೌಲ್ಯದ ಸರಕುಗಳು ಬೇಕು ಎಂಬುದು ನನ್ನ ಅನಿಸಿಕೆ ಎಂದು ಗೋಯಲ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕ ಮತ್ತು ಭಾರತ ಶನಿವಾರ ಹೊರಡಿಸಿರುವ ಜಂಟಿ ಹೇಳಿಕೆ ಪ್ರಕಾರ, ಭಾರತವು ಅಮೆರಿಕದಿಂದ ಐದು ವರ್ಷಗಳಲ್ಲಿ 500 ಬಿಲಿಯನ್ ಡಾಲರ್ ಮೌಲ್ಯದ ಇಂಧನ, ವಿಮಾನ ಮತ್ತು ಅದರ ಬಿಡಿಭಾಗಗಳು, ತಂತ್ರಜ್ಞಾನ ಉತ್ಪನ್ನಗಳು ಸೇರಿದಂತೆ ವಿವಿಧ ಉತ್ಪನ್ನಗಳನ್ನು ಖರೀದಿಸುವ ಬಯಕೆಯನ್ನು ವ್ಯಕ್ತಪಡಿಸಿದೆ.

ಕಾರ್ಮಿಕರ ಶ್ರಮ ಹೆಚ್ಚಿನ ಮಟ್ಟದಲ್ಲಿ ಅಗತ್ಯವಿರುವ ಜವಳಿ, ಚರ್ಮೋದ್ಯಮ ಮತ್ತು ಪಾದರಕ್ಷೆಗಳು, ಕರಕುಶಲ ಉತ್ಪನ್ನಗಳು, ರಾಸಾಯನಿಕಗಳು, ಹವಳಗಳು ಹಾಗೂ ಆಭರಣ ಉದ್ಯಮದಕ್ಕೆ ಭಾರತದ ಸರಕುಗಳ ಮೇಲಿನ ಸುಂಕ ಕಡಿಮೆ ಆಗುತ್ತಿರುವ ಕಾರಣದಿಂದಾಗಿ ಹೆಚ್ಚು ಅನುಕೂಲ ಆಗಲಿದೆ, ಈ ವಲಯದ ಉತ್ಪನ್ನಗಳು ಅಮೆರಿಕದಲ್ಲಿ ಬೇರೆ ಕೆಲವು ದೇಶಗಳ ಇದೇ ಬಗೆಯ ಉತ್ಪನ್ನಗಳಿಗಿಂತ ಕಡಿಮೆ ಬೆಲೆಗೆ ಸಿಗಲಿವೆ.

ಅಮೆರಿಕದ ಜತೆಗಿನ ವ್ಯಾಪಾರ ಒಪ್ಪಂದವು ದೇಶದ ರೈತರ ಹಿತವನ್ನು ಕಾಯಲಿದೆ ಎಂದು ಗೋಯಲ್ ಪುನರುಚ್ಚರಿಸಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತೆ ನರ್ಗೆಸ್‌ಗೆ 6 ವರ್ಷ ಜೈಲು

ಟೆಹ್ರಾನ್: ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ನರ್ಗೆಸ್ ಮೊಹಮ್ಮದಿಗೆ ಇರಾನಿನ ನ್ಯಾಯಾಲಯವು ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅಪರಾಧಗಳನ್ನು ನಡೆಸಲು ಗುಂಪು

ಗೂಡುವಿಕೆ ಮತ್ತು ಒಳಸಂಚು ನಡೆಸಿದ್ದಕ್ಕಾಗಿ ಆಕೆಗೆ ಈ ಕಠಿಣ ಶಿಕ್ಷೆ ವಿಧಿಸಲಾಗಿದೆ ಎಂದು ವಕೀಲೆ ಮೊಸ್ತಫಾ ನಿಲಿ ಹೇಳಿದ್ದಾರೆ. ದೇಶವನ್ನು ತೊರೆಯದಂತೆ ಎರಡು ವರ್ಷಗಳ ನಿಷೇಧವನ್ನು ಸಹ ಹೇರಲಾಗಿದೆ.

ಮೊಹಮ್ಮದಿ ಅವರಿಗೆ ಆರೋಗ್ಯ ಸಮಸ್ಯೆಗಳಿಂದಾಗಿ ಚಿಕಿತ್ಸೆ ಪಡೆಯಲು ಜಾಮೀನಿನ ಮೇಲೆ ಬಿಡುಗಡೆಯಾಗಬಹುದು ಎಂದು ತಿಳಿಸಲಾಗಿದೆ. ಹೊರಡಿಸಲಾದ ತೀರ್ಪು ಅಂತಿಮ ವಾಗಿಲ್ಲ, ಮೇಲ್ಮನವಿ ಸಲ್ಲಿಸಬಹುದು. ಕಳೆದ ಕಾಲು ಶತಮಾನದಲ್ಲಿ 53 ವರ್ಷದ ಮೊಹಮ್ಮದಿ ಇರಾನ್‌ನಲ್ಲಿ ಮರಣದಂಡನೆ ಮತ್ತು ಮಹಿಳೆಯರಿಗೆ ಕಡ್ಡಾಯ ವಸ್ತ್ರ ಸಂಹಿತೆಯ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ ಪದೇ ಪದೇ ವಿಚಾರಣೆಗೆ ಒಳಗಾಗಿ ಜೈಲುಪಾಲಾಗುತ್ತಿದ್ದಾರೆ. ಮೊಹಮ್ಮದಿ ಕಳೆದ ದಶಕದಲ್ಲಿ ಹೆಚ್ಚಿನ ಸಮಯವನ್ನು ಜೈಲಿನಲ್ಲಿ ಕಳೆದಿದ್ದಾರೆ. 2015ರಿಂದ ಪ್ಯಾರಿಸ್‌ನಲ್ಲಿ ವಾಸಿಸುವ ತನ್ನ ಅವಳಿ ಮಕ್ಕಳನ್ನು ನೋಡಿಲ್ಲ. ಇರಾನ್‌ನಲ್ಲಿ ಮರಣ ದಂಡನೆಯ ವಿರುದ್ಧದ ಅಭಿಯಾನಕ್ಕಾಗಿ ಮೊಹಮ್ಮದಿ 2023 ರಲ್ಲಿ ಶಾಂತಿ ಪ್ರಶಸ್ತಿ ಲಭಿಸಿತ್ತು. ಆ ಸಮಯದಲ್ಲಿ ಜೈಲಿನಲ್ಲಿದ್ದ ಕಾರಣ ಮೊಹಮ್ಮದಿ ಮಕ್ಕಳು ಅವರ ಪರವಾಗಿ ಪ್ರಶಸ್ತಿ ಸ್ವೀಕರಿಸಿದ್ದರು.

ಕರ್ನಾಟಕದಲ್ಲಿ ವನ್ಯಜೀವಿ ಬೇಟೆ ಶಂಕೆ | ಕೇರಳದಲ್ಲಿ ಹುಲಿ ಚರ್ಮ, ಹಲ್ಲು, ಉಗುರು ಮಾರಾಟಕ್ಕೆ ಯತ್ನಿಸಿದವರ ಸೆರೆ

ಕೇರಳದಲ್ಲಿ ವನ್ಯಜೀವಿ ಮಾಂಸ ಮಾರಾಟ ದಂಧೆ

ಕಣ್ಣೂರು: ಕರ್ನಾಟಕದಲ್ಲಿ ವನ್ಯಜೀವಿಗಳ ಬೇಟೆಯಾಡಿ ಅವುಗಳ ಚರ್ಮ, ಉಗುರು, ಮಾಂಸ ಕಳ್ಳಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ತಂಡವೊಂದನ್ನು ಕೇರಳ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಮೂಲಕ ಪತ್ತೆ ಹಚ್ಚಿದ್ದಾರೆ. 7 ಮಂದಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿದ್ದು, ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಈ ಕಾರ್ಯಾಚರಣೆ ನಡೆದಿದೆ. ಅರಣ್ಯ ಅಧಿಕಾರಿಗಳು ಏಳು ಸದಸ್ಯರ ಗ್ಯಾಂಗ್ ಅನ್ನು ಬಂಧಿಸಿ ಅವರ ಬಳಿ ಇದ್ದ ಹುಲಿ ಚರ್ಮ, ಉಗುರುಗಳು ಮತ್ತು ಹಲ್ಲುಗಳನ್ನು ವಶಪಡಿಸಿಕೊಂಡಿದ್ದಾರೆ. ಹುಲಿ ದೇಹದ ಭಾಗಗಳನ್ನು ಮಾರಾಟ ಮಾಡುವ ಗ್ಯಾಂಗ್‌ನ ಯತ್ನದ ಬಗ್ಗೆ ಅರಣ್ಯ ಸಿಬ್ಬಂದಿಗೆ ರಹಸ್ಯ ಗುಪ್ತಚರ ಮಾಹಿತಿಯ ನಂತರ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ಈ 7 ಜನರನ್ನು ಜೈಲಿಗೆ ಅಟ್ಟುವುದರಲ್ಲಿ ಯಶಸ್ವಿಯಾಗಿದ್ದಾರೆ.

ಶುಕ್ರವಾರ ರಾತ್ರಿ ದೊರೆತ ಸುಳಿವಿನ ಮೇರೆಗೆ ಅರಣ್ಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಕಣ್ಣೂರು ಜಿಲ್ಲೆಯ ತಲಶ್ಶೇರಿ ತಾಲೂಕಿನ ಕತಿರೂರಿನಲ್ಲಿರುವ ಶಾಲೆಯ ಬಳಿ ಮೂವರು ಶಂಕಿತರನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಮೊದಲು ಬಂಧಿಸಲ್ಪಟ್ಟವರು ಎರುವಟ್ಟಿ ಮೂಲದ ಅಶ್ವಿನ್ ಮತ್ತು ಚೆರುವಾಂಚೇರಿಯ ಮೂಲದ ಸಂದೇಶ್ ಮತ್ತು ಬಾಲನ್. 'ಹುಲಿ ಚರ್ಮ, ಉಗುರುಗಳು ಮತ್ತು ಹಲ್ಲುಗಳನ್ನು ವಶಪಡಿಸಿಕೊಂಡಿದ್ದು, ಅವರು ಈ ವಸ್ತುಗಳನ್ನು ಮಾರಾಟ ಮಾಡಲು ಸ್ಥಳಕ್ಕೆ ಬಂದಿದ್ದರು ಎಂದು ಕಣ್ಣಾನ್ನೂರು ಕೊಟ್ಟಿಯೂರಿನ ಅರಣ್ಯ ವಲಯ ಅರಣ್ಯ ಅಧಿಕಾರಿ ನಿತಿನ್‌ರಾಜ್ ತಿಳಿಸಿದ್ದಾರೆ.

ಪ್ರಾಥಮಿಕ ವಿಚಾರಣೆಯ ಸಮಯದಲ್ಲಿ ಪಡೆದ ಮಾಹಿತಿಯ ಆಧಾರದ ಮೇಲೆ, ಅರಣ್ಯ ಅಧಿಕಾರಿಗಳು ಇನ್ನೂ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಕಲ್ಲಿಕಂಡಿಯ ಶರತ್ ಕೆ.ಕೆ, ಮಾಂಗಡ್‌ನ ರಾಜೇಶ್, ಚೆರುವಾಂಚೇರಿಯ ವಿಥುಲ್ ಮತ್ತು ಮಲಾಲ್‌ನ ರಾಖಿಲ್ ಬಂಧಿತ ಆರೋಪಿಗಳು. ಬಂಧಿತರಿಂದ ಹುಲಿಯ ದೇಹದ ಭಾಗಗಳನ್ನು ಸಾಗಿಸಲು ಬಳಸಲಾಗುತ್ತಿತ್ತು ಎನ್ನಲಾದ ಇನ್ನೋವಾ ಕಾರು ಮತ್ತು ಕಾರ್ಯಾಚರಣೆಯ ಸಮಯದಲ್ಲಿ ಬಳಸಲಾದ ಸ್ಕೂಟರ್ ಅನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ವರದಿಯಾಗಿದೆ. ಬಂಧಿತರಿಂದ ವಶಪಡಿಸಿಕೊಂಡ ವಸ್ತುಗಳನ್ನು ವೈದ್ಯರು ಪರೀಕ್ಷಿಸಿದ್ದು, ಅವು ಹುಲಿಗೆ ಸೇರಿದ್ದು ಎಂಬುದನ್ನು ದೃಢಪಡಿಸಿದ್ದಾರೆ.

ಬ್ಯಾಡಗಿ ಮೆಣಸಿನಕಾಯಿ ಶೇ.50ರಷ್ಟು ಬೆಳೆ ಕುಸಿತ | ಮಾರುಕಟ್ಟೆಗೆ ಆವಕ ಕೂಡ 50ರಷ್ಟು ಕಡಿಮೆ | ಈ ವರ್ಷ ಡಬ್ಬಿ ಮೆಣಸಿನಕಾಯಿ ಕೆಜಿಗೆ 600 ರು.

ಮೆಣಸಿನಕಾಯಿ ಬೆಳೆಗಾರರಿಗೆ ಸಿಹಿ, ಗ್ರಾಹಕರ ಬಾಯಿ ಕಾರ

ಹೂವಪ್ಪ ಐ.ಎಚ್. ಬೆಂಗಳೂರು

ಏಷ್ಯಾದಲ್ಲಿಯೇ ಅತಿಹೆಚ್ಚು ವಹಿವಾಟು ನಡೆಸುವ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯೂ ಒಂದು.

ಸತತ 2 ವರ್ಷಗಳಿಂದ ಬೆಲೆ ಕುಸಿತದಿಂದ ತತ್ತರಿಸಿದ್ದ ಮೆಣಸಿನಕಾಯಿ ರೈತರಿಗೆ ಈ ವರ್ಷದ ಆರಂಭದಲ್ಲಿಯೇ ಉತ್ತಮ ದರ ದೊರೆಯುತ್ತಿರುವುದು ಮೆಣಸಿನಕಾಯಿ ಬೆಳೆಗಾರರ ಬಾಯಿ ಸಿಹಿಯಾಗಿದೆ. ಆದರೆ ತೀವ್ರ ಬೆಲೆ ಏರಿಕೆಯಿಂದ ಗ್ರಾಹಕರ ಬಾಯಿ ಭಾರೀ ಖಾರವಾಗಿದೆ. ಕಳೆದ ವರ್ಷ ರಾಜ್ಯದಲ್ಲಿ ಮೆಣಸಿನಕಾಯಿ ಬೆಳೆ ಇಳುವರಿ ಹೆಚ್ಚಿತ್ತು. ಜತೆಗೆ ಹಳೇ ದಾಸ್ತನು ಕೂಡ ಇದ್ದ ಪರಿಣಾಮ ಬ್ಯಾಡಗಿ ಮಾರುಕಟ್ಟೆಗೆ ಭಾರೀ ಪ್ರಮಾಣದಲ್ಲಿ ಆವಕವಾಗಿ ಬೆಲೆ ಭಾರೀ ಇಳಿಕೆಯಾಗಿ ಗ್ರಾಹಕರಿಗೆ ಖುಷಿ ಕೊಟ್ಟಿತ್ತು. ಕಳೆದ ವರ್ಷ ಗ್ರಾಹಕರು ಕೆಜಿಗೆ ಬ್ಯಾಡಗಿ ಉತ್ತಮ ಮೆಣಸಿನಕಾಯಿ 300-350 ರು. ಗೆ ಖರೀದಿಸಿದ್ದರು. ಈ ವರ್ಷ 600-650 ರು. ಗೆ ಖರೀದಿ ಮಾಡಬೇಕಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿ ಈ ವರ್ಷ ದುಪ್ಪಟ್ಟು ಬೆಲೆ ಏರಿಕೆಯಾಗಿದೆ. ಇತರೆ ವೆರೈಟಿ ಶೇ.70ರಷ್ಟು ಏರಿಕೆಯಾಗಿದೆ.

ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ದರ ಕಳೆದ ಸಾಲಿನಲ್ಲಿ ಕ್ವಿಂಟಲ್‌ಗೆ ಕನಿಷ್ಠ 8,000-9,000 ರು. ಹಾಗೂ ಗರಿಷ್ಠ 12,000-13,000 ರು. ಇತ್ತು. ಡಬ್ಬಿ ಮೆಣಸಿನಕಾಯಿಗೆ ಕನಿಷ್ಠ 3,000-3,500, ರು. ಗರಿಷ್ಠ 4,000-5,000 ರು. ಇತ್ತು. ಗುಂಟೂರು ಮೆಣಸಿನಕಾಯಿ ಕ್ವಿಂಟಲ್‌ಗೆ ಕನಿಷ್ಠ 9,000 ಹಾಗೂ ಗರಿಷ್ಠ 16,409 ರು.ಗೆ ಮಾರಾಟವಾಗಿತ್ತು. ಪ್ರಸಕ್ತ ವರ್ಷ ಬ್ಯಾಡಗಿ ಮಾರುಕಟ್ಟೆಗೆ ಹೆಚ್ಚು ಕಡಿಮೆ ದಿನನಿತ್ಯ 50-60 ಸಾವಿರ ಚೀಲಗಳಷ್ಟು ಪೂರೈಕೆಯಾಗುತ್ತಿದ್ದು, ಉತ್ತಮ ಡಬ್ಬಿ ಮೆಣಸಿನಕಾಯಿ ಪ್ರಸ್ತುತ ದರ ಕ್ವಿಂಟಲ್‌ಗೆ ಗರಿಷ್ಠ ದರ 75,500 ರು. ಕನಿಷ್ಠ 50,500 ರು. ಗೆ ಮಾರಾಟವಾಗಿದೆ. ಕಡ್ಡಿ ಮೆಣಸಿನಕಾಯಿ ಗರಿಷ್ಠ 62,000 ರು. ಕನಿಷ್ಠ 43,000 ರು. ಗೆ ಮಾರಾಟವಾಗಿದೆ. ಇನ್ನೂ ಗುಂಟೂರು, ಮೆಣಸಿನಕಾಯಿ ಕ್ವಿಂಟಲ್‌ಗೆ 14,000 ರು. ನಿಂದ 18,000 ರು.ವರೆಗೆ ವಹಿವಾಟಾಗಿದೆ. ಇನ್ನು ಬೆಂಗಳೂರು, ಮಾರುಕಟ್ಟೆಯಲ್ಲಿ ಬ್ಯಾಡಗಿ ಡಬ್ಬಿ ಕನಿಷ್ಠ 35,000 ರಿಂದ ಗರಿಷ್ಠ 78,000 ರು.ಗೆ, ಗುಂಟೂರು ಮೆಣಸಿನಕಾಯಿ 25,000-35,000 ರು. ಗೆ ಮಾರಾಟವಾಗಿದೆ.

ಈ ವರ್ಷ ಬೆಳೆ ಕಡಿಮೆ: ಕಳೆದ ಎರಡು ವರ್ಷ ಮಳೆರಾಯನ ಆರ್ಭಟ ಮೆಣಸಿನಕಾಯಿ ಬೆಳೆಗಾರರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಮೆಣಸಿನಕಾಯಿ ಗಿಡಕ್ಕೆ ಹಾನಿ ತಂದಿದ್ದಲ್ಲದೇ, ನಂತರ ಡಿಸೆಂಬರ್‌ನಲ್ಲಿ ಮೆಣಸಿನಕಾಯಿ ಒಣಗಲು ಹಾಕಿದಾಗ ಸಹ ಮಳೆರಾಯ ಆರ್ಭಟಿಸಿದ್ದು, ಗುಣಮಟ್ಟದ ಬೆಳೆ ಹೆಚ್ಚು ಪ್ರಮಾಣದಲ್ಲಿ ಸಿಗಲಿಲ್ಲ. ಅಲ್ಲದೇ ಸತತ ಎರಡು ವರ್ಷ ಅಧಿಕ ಲಾಭದ ಆಸೆಗೆ ರೈತರು ಹೆಚ್ಚಿಗೆ ಬೆಳೆ ಮಾಡಿದ್ದರು. ಇದರಿಂದ ಕಳೆದ ಸಾಲಿನಲ್ಲಿ ಮಾರುಕಟ್ಟೆಗೆ ಪೂರೈಕೆ ಅಧಿಕವಾಯಿತು, ದರ ಕಡಿಮೆಯಾಯಿತು. ಆದರೆ ಸತತ ಎರಡು ವರ್ಷಗಳಿಂದ ಮೆಣಸಿನಕಾಯಿ ಬೆಳೆಯಲ್ಲಿ ಅಲ್ಪಲಾಭ ಮತ್ತು ಹಾನಿ ಅನುಭವಿಸಿದ್ದ ರೈತರು ಈ ವರ್ಷ ಕಡಿಮೆ ವಿಸ್ತೀರ್ಣದಲ್ಲಿ ಮೆಣಸಿನಕಾಯಿ ಬೆಳೆ ಹಾಕಿದ್ದಾರೆ ಎಂದು ಹೇಳಲಾಗುತ್ತಿದೆ.

ಕಳೆದ ವರ್ಷ ಆವಕ ಹೆಚ್ಚು, ಬೆಲೆ ಕಡಿಮೆ: ಮಾರುಕಟ್ಟೆ ಕಳೆದ ವರ್ಷ ಇತಿಹಾಸದಲ್ಲಿ ಕಾಣದಷ್ಟು ಮೆಣಸಿನಕಾಯಿ ವಹಿವಾಟು ನಡೆಸಿತ್ತು. ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಚೀಲ ಹಿಡಿಯಲಾರದಷ್ಟು ಆವಕವಾಗಿತ್ತು. ಮಾರುಕಟ್ಟೆಯ ಪ್ರಾಂಗಣದಲ್ಲಿ ಅಷ್ಟೇ ಅಲ್ಲದೆ ತಾಲೂಕು ಕ್ರೀಡಾಂಗಣದಲ್ಲಿ ಸಹ ಮೆಣಸಿನಕಾಯಿ ಚೀಲವಿಟ್ಟು ಟೆಂಡರ್ ಹಾಕಲಾಗಿತ್ತು. ಸುಮಾರು ಅಂದಾಜು 3 ಲಕ್ಷ 20 ಸಾವಿರ ಮೆಣಸಿನಕಾಯಿ ಚೀಲಗಳು ಕಳೆದ ವರ್ಷದ ಸೀಸನ್‌ನಲ್ಲಿ ಆವಕವಾಗಿತ್ತು. ಅಧಿಕ ಲಾಭ ಸಿಗುವ ಭರವಸೆಯಿಟ್ಟುಕೊಂಡ ರೈತರು ಹೆಚ್ಚಿನ ವಿಸ್ತೀರ್ಣದಲ್ಲಿ ಬೆಳೆ ಬೆಳೆದಿದ್ದರು. ಅಧಿಕ ಇಳುವರಿಯ ಜತೆಗೆ ಮಳೆಯ ಚೆಲ್ಲಾಟದಲ್ಲಿ ಮೆಣಸಿನಕಾಯಿ ದರದಲ್ಲಿ ಕುಸಿತ ತಂದಿತ್ತು. ರೈತರು ಲಾಭ ಇರಲಿ, ಬೆಳೆಗೆ ಮಾಡಿದ ಖರ್ಚು ಸಿಗಲಾರದಷ್ಟು ಬೆಲೆ ಕುಸಿದಿತ್ತು ಎನ್ನುತ್ತಾರೆ ರೈತರು.

ಈ ವರ್ಷ ಲೋಕಲ್ ಮೆಣಸಿನಕಾಯಿ ಕಮ್ಮಿ:

ರೋಗ ಬಾಧೆ ಸೇರಿದಂತೆ ನಾನಾ ಕಾರಣಗಳಿಂದ ಮೆಣಸಿನಕಾಯಿ ಬೆಳೆ ಕ್ಷೇತ್ರ ಕಡಿಮೆಯಾಗಿದ್ದು, ಮಾರುಕಟ್ಟೆಗೆ ಆವಕ ಕಡಿಮೆಯಾಗಿದೆ. ಬೇರೆ ರಾಜ್ಯದಿಂದ ಬರುವ ಸೀಡ್ಸ್ ವೆರೈಟಿ ಮೆಣಸಿನಕಾಯಿ ಆವಕದಲ್ಲಿ ಕೊರತೆ ಒಂದೆಡೆಯಾದರೆ ಮತ್ತೊಂದೆಡೆ ರಾಜ್ಯದಲ್ಲಿನ ಕುಂದಗೋಳ, ಅಣ್ಣಿಗೇರಿ, ಅಂತೂರ, ಬೆಂತೂರ, ಗದಗ, ಸಂಶಿ, ಸುತ್ತಲ ಪ್ರದೇಶದಲ್ಲಿ ಬೆಳೆಯುತ್ತಿದ್ದ ಲೋಕಲ್ ಮೆಣಸಿನಕಾಯಿ ಬೆಳೆ ಕಮ್ಮಿಯಾಗಿದೆ. ಈಗ ಉತ್ತಮ ಬೆಲೆ ಸಿಗುತ್ತಿರುವುದಕ್ಕೆ ಇದು ಕೂಡ ಕಾರಣವಾಗಿದೆ.

ಎಷ್ಟು ಉತ್ಪಾದನೆ?

2024-25ರಲ್ಲಿ ಮೆಣಸಿನಕಾಯಿ ಬೆಳೆಯ ಪ್ರದೇಶ ಸುಮಾರು 1.24 ಲಕ್ಷ ಹೆಕ್ಟೇರ್ ಪ್ರದೇಶವಾಗಿದ್ದು, ಸುಮಾರು 2.19 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿತ್ತು. 2025-26ರಲ್ಲಿ ಸುಮಾರು 79,152 ಹೆಕ್ಟೇರ್‌ನಲ್ಲಿ ಬೆಳೆಯಲಾಗಿದ್ದು, ಸುಮಾರು 1.58 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ.

ಈ ವರ್ಷ ಮೆಣಸಿನಕಾಯಿ ಬೆಳೆ ಕಡಿಮೆ ಇರುವುದರಿಂದ ಬ್ಯಾಡಗಿ ಮಾರುಕಟ್ಟೆಗೆ ಅವಕ ಕಡಿಮೆ ಇದೆ. ಇದರ ಪರಿಣಾಮ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಯಾಗಿದೆ.

– ಬಿ.ಎಸ್.ಗೌಡರ
ಬ್ಯಾಡಗಿ ಎಪಿಎಂಸಿ ಸಹಾಯಕ ಕಾರ್ಯದರ್ಶಿ

ಮೆಣಸಿನಕಾಯಿ ಬೆಲೆ ಭಾರೀ ಏರಿಕೆ ಕಂಡಿದೆ. ಬ್ಯಾಡಗಿ ಡಬ್ಬಿ ಮತು ಕಡ್ಡಿ ತಳಿ ಕಳೆದ ವರ್ಷಕ್ಕಿಂತ ಈ ವರ್ಷ ಬೆಲೆ ದುಪ್ಪಟ್ಟಾಗಿದೆ. ಇತರೆ ತಳಿ ಮೆಣಸಿನಕಾಯಿ ಬೆಲೆ ಶೇ.70-80ರಷ್ಟು ಏರಿಕೆಯಾಗಿದೆ. ಈ ತೀವ್ರ ಬೆಲೆ ಏರಿಕೆಯಾಗಿದ್ದ ರಿಂದ ವ್ಯಾಪಾರ ಸ್ವಲ್ಪ ಮಂಧಗತಿ ಇದೆ.

– ಪಿ.ಸಿ.ಎನ್.ಪ್ರಭಾಕರ
ಬೆಂಗಳೂರು ಎಪಿಎಂಸಿ ಮೆಣಸಿನಕಾಯಿ ವರ್ತಕ

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

ಸೂರ್ಯನ ಹೊಸ ಪಂದ್ಯಶ್ರೇಷ್ಠ ದಾಖಲೆ



ಮುಂಬೈ: ಇಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡದ ಗೆಲುವಿನ ರೂವಾರಿಯಾಗಿದ್ದ ನಾಯಕ ಸೂರ್ಯಕುಮಾರ್ ಯಾದವ್ ತಮ್ಮ 17ನೇ 'ಪ್ಲೇಯರ್ ಆಫ್ ದಿ ಮ್ಯಾಚ್' ಪ್ರಶಸ್ತಿಯನ್ನು ಗೆದ್ದರು, ಇದರೊಂದಿಗೆ ಅವರು ವಿರಾಟ್ ಕೊಹ್ಲಿ ಅವರ 16 ಪ್ರಶಸ್ತಿಗಳ ದಾಖಲೆಯನ್ನು ಮುರಿದರು. ಕೊಹ್ಲಿ 125 ಟಿ20 ಪಂದ್ಯಗಳಲ್ಲಿ 16 ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದಿದ್ದರು. ಸೂರ್ಯಕುಮಾರ್ ಅವರು ಶನಿವಾರ ಟಿ20 ವಿಶ್ವಕಪ್‌ನಲ್ಲಿ ತಮ್ಮ ನಾಲ್ಕನೇ ಪಂದ್ಯಶ್ರೇಷ್ಠ ಪ್ರಶಸ್ತಿ ಗಳಿಸಿದ್ದು, ವಿರಾಟ್ ಕೊಹ್ಲಿ 8 ಬಾರಿ ವಿಶ್ವಕಪ್‌ನಲ್ಲಿ ಪಂದ್ಯಶ್ರೇಷ್ಠ ಪಡೆದಿದ್ದರು. ವಿಶ್ವಾದ್ಯಂತ ಟಿ20ಗಳಲ್ಲಿ ಅತೀ ಹೆಚ್ಚು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದ ವಿಶ್ವದಾಖಲೆ ಮಲೇಷ್ಯಾದ ವೀರಂದೀಪ್ ಸಿಂಗ್ ಅವರ ಹೆಸರಿನಲ್ಲಿದೆ. ವೀರಂದೀಪ್ 111 ಪಂದ್ಯಗಳಲ್ಲಿ 22 ಸಲ ಪ್ರಶಸ್ತಿ ಗೆದ್ದಿದ್ದಾರೆ. ಎರಡನೇ ಸ್ಥಾನದಲ್ಲಿ ಜಿಂಬಾಬ್ವೆಯ ಸಿಕಂದರ್ ರಾಜಾ ಇದ್ದು, 127 ಪಂದ್ಯಗಳಲ್ಲಿ ಅವರು 19 ಪ್ರಶಸ್ತಿ ಗೆದ್ದಿದ್ದಾರೆ. ಈ ವಿಶ್ವ ದಾಖಲೆಯಲ್ಲಿ ಸೂರ್ಯಕುಮಾರ್ ಯಾದವ್ 3 ಹಾಗೂ ಕೊಹ್ಲಿ 4ನೇ ಸ್ಥಾನದಲ್ಲಿದ್ದಾರೆ.

ಭಾರತ-ಪಾಕ್ ಪಂದ್ಯದ ನಿರೀಕ್ಷೆ ಇನ್ನೂ ಜೀವಂತ?

ಕೊಲಂಬೊ: ಫೆ.15ರಂದು ಭಾರತ ವಿರುದ್ಧ ನಿಗದಿಯಾಗಿರುವ ಟಿ20 ವಿಶ್ವಕಪ್ ಪಂದ್ಯವನ್ನು ಬಹಿಷ್ಕರಿಸುವುದಾಗಿ ಘೋಷಿಸಿದ್ದ ಪಾಕಿಸ್ತಾನ ಇದೀಗ ಯೂ-ಟರ್ನ್ ಹೊಡೆದು ಪಂದ್ಯ ಆಡಲು ನಿರ್ಧರಿಸಿದೆ ಎಂಬ ಸುದ್ದಿ ಶನಿವಾರದಿಂದ ಹರಿದಾಡುತ್ತಿದೆ. ಪಂದ್ಯದಲ್ಲಿ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ), ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಜತೆ ಹೊಸದಾಗಿ ಮಾತುಕತೆ ಆರಂಭಿಸಿದೆ ಎಂದು ತಿಳಿದು ಬಂದಿದೆ. ಕಳೆದ ಭಾನುವಾರ ಪಾಕಿಸ್ತಾನ ಸರಕಾರ, ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡ ಪಾಲ್ಗೊಳ್ಳಲಿದೆ. ಆದರೆ ಭಾರತ ವಿರುದ್ಧದ ಮಹತ್ವದ ಪಂದ್ಯವನ್ನು ಬಹಿಷ್ಕರಿಸುವುದಾಗಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿತ್ತು. ಇದರ ಬೆನ್ನಲ್ಲೇ ಐಸಿಸಿ, ಕಾರಣವಿಲ್ಲದೆ ಪಂದ್ಯ ಬಹಿಷ್ಕರಿಸಿದರೆ ಮುಂದೆ ಪಾಕ್ ವಿರುದ್ಧ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಎಚ್ಚರಿಕೆ ನೀಡಿತ್ತು. ಇಕ್ಕಟ್ಟಿಗೆ ಸಿಲುಕಿದ ಪಾಕ್ ಕ್ರಿಕೆಟ್ ಮಂಡಳಿ ತನ್ನ ನಿರ್ಧಾರದ ಬಗ್ಗೆ ಐಸಿಸಿಗೆ ಸ್ಪಷ್ಟನೆ ನೀಡಬೇಕಾದ ಪರಿಸ್ಥಿತಿ ಎದುರಾದಾಗ, ಪಿಸಿಬಿಯು ಲಿಖಿತ ಉತ್ತರ ನೀಡಿ ತನ್ನ ನಿರ್ಧಾರವನ್ನು ಪರಿಗಣಿಸುವಂತೆ ಐಸಿಸಿಗೆ ತಿಳಿಸಿತ್ತು. ಆದರೆ ಪಾಕ್ ನೀಡಿರುವ ವಿವರಣೆಯಲ್ಲಿ ಯಾವುದೇ ತರ್ಕವಿಲ್ಲ ಎಂದು ಐಸಿಸಿ ತಿಳಿಸಿತು.

ಅಫ್ಘಾನಿಸ್ತಾನ ವಿರುದ್ಧ ಗೆದ್ದು ಬೀಗಿದ ಕಿವೀಸ್

ಚೆನ್ನೈ: ಇಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್‌ನ 4ನೇ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಅಫ್ಘಾನಿಸ್ತಾನದ ವಿರುದ್ಧ 5 ವಿಕೆಟ್‌ಗಳ ಗೆಲುವು ಸಾಧಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 20 ಓವರ್‌ಗಳಲ್ಲಿ 182 ರನ್ ಕಲೆಹಾಕಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಕಿವೀಸ್ 17.5 ಓವರ್‌ಗಳಲ್ಲಿ 183 ರನ್‌ಗಳನ್ನು ಗಳಿಸಿ ಗೆಲುವು ದಾಖಲಿಸಿತು. ಈ ಗೆಲುವಿನೊಂದಿಗೆ ನ್ಯೂಜಿಲೆಂಡ್ ಕಳೆದ ವಿಶ್ವಕಪ್‌ನಲ್ಲಿನ ಸೋಲಿಗೆ ಸೇಡು ತೀರಿಸಿಕೊಂಡಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಅಫ್ಘಾನ್ ತಂಡವು ಕಳಪೆ ಆರಂಭ ಮಾಡಿತು. 6ನೇ ಓವರ್‌ನಲ್ಲೇ 2 ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ಇಬ್ರಾಹಿಂ ಝದ್ರಾನ್ 10 ರನ್ ಗಳಿಸಿ ಔಟಾದರೆ, ಅದೇ ಓವರ್‌ನ ಕೊನೆಯ ಎಸೆತದಲ್ಲಿ ಗುರ್ಬಾಜ್ ಕೂಡ ಔಟಾದರು. ಎರಡೂ ವಿಕೆಟ್‌ಗಳನ್ನು ಲಾಕಿ ಫರ್ಗುಸನ್ ಪಡೆದರು. ನಂತರ ಗುಲ್ಬಾದಿನ್ ಮತ್ತು ಸೆದಿಕುಲ್ಲಾ 79 ರನ್‌ಗಳ ಜತೆಯಾಟ ಆಡಿ ಅಫ್ಘಾನಿಸ್ತಾನವನ್ನು 17 ಓವರ್‌ಗಳಲ್ಲಿ 150ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ಗುಲ್ಬಾದಿನ್ ಅರ್ಧಶತಕ ಗಳಿಸಿ ಪೆವಿಲಿಯನ್ ಸೇರಿದರು. ಅಫ್ಘಾನಿಸ್ತಾನವನ್ನು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಕಿವೀಸ್ ಪರ ಲಾಕಿ ಫರ್ಗುಸನ್ 2 ವಿಕೆಟ್‌ಗಳನ್ನು ಪಡೆದರು.

ಅಫ್ಘಾನಿಸ್ತಾನ ನೀಡಿದ ಮೊತ್ತವನ್ನು ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು ಆರಂಭದ ಎರಡು ಓವರ್‌ಗಳಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಫಿನ್ ಅಲೆನ್ ಮತ್ತು ರಚಿನ್ ರವೀಂದ್ರ, ಅಫ್ಘಾನ್ ಸ್ಪಿನ್ನರ್ ಮುಜೀಬ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಟಿಮ್ ಸೀಫರ್ಟ್ ಅದ್ಭುತ ಬ್ಯಾಟಿಂಗ್ ಮೂಲಕ ಅರ್ಧಶತಕದೊಂದಿಗೆ ಇನ್ನಿಂಗ್ಸ್ ಅನ್ನು ಸ್ಥಿರಗೊಳಿಸಿದರು. ಸೀಫರ್ಟ್ 65 ರನ್ ಗಳಿಸಿದ್ದ ವೇಳೆ ಔಟಾದರು. ಗ್ಲೆನ್ ಫಿಲಿಪ್ಸ್ 25 ಬಾಲ್‌ಗಳನ್ನು ಎದುರಿಸಿ 42 ರನ್ ಗಳಿಸಿದರು. ನಂತರ ಮಿಚೆಲ್ ಸ್ಯಾಂಟ್ನರ್ (17) ಮತ್ತು ಡ್ಯಾರಿಲ್ ಮಿಚೆಲ್ (25) ಒಟ್ಟಾಗಿ ತಂಡವನ್ನು 17.5 ಓವರ್‌ಗಳಲ್ಲಿ ಗೆಲುವಿನತ್ತ ಕೊಂಡೊಯ್ದರು.

ಅಫ್ಘಾನಿಸ್ತಾನ
ಗುಲ್ಬಾದಿನ್: 63, ಸೇದಿಕುಲ್ಲಾ: 29, ನ್ಯೂಜಿಲೆಂಡ್ ಬೌಲಿಂಗ್: ಫರ್ಗುಸನ್: 40/2, ರಚಿನ್: 14/1

ಕಿವೀಸ್
ಸೀಫರ್ಟ್: 65, ಫಿಲಿಫ್ಸ್: 42, ಆಫ್ಘಾನ್ ಬೌಲಿಂಗ್: ರಹಮಾನ್ 31/2, ಎಂ. ನಬಿ: 18/1

ನೇಪಾಳಕ್ಕೆ ವೀರೋಚಿತ ಸೋಲು

ಮುಂಬೈ: ಇಲ್ಲಿನ ವಾಂಖೆಡೆ ಮೈದಾನದಲ್ಲಿ ಭಾನುವಾರ ನಡೆದ ರೋಚಕ ಪಂದ್ಯದಲ್ಲಿ ನೇಪಾಳ ತಂಡವು ಇಂಗ್ಲೆಂಡ್ ವಿರುದ್ಧದ ಹಣಾಹಣಿಯಲ್ಲಿ ಕೊನೆಯ ಓವರ್‌ವರೆಗೂ ಪೈಪೋಟಿ ನೀಡಿ ವೀರೋಚಿತ ಸೋಲು ಕಂಡಿದೆ. ಕೊನೆಯ ಓವರ್ ವರೆಗೂ ಭಾರೀ ಪೈಪೋಟಿ ನೀಡಿದ ನೇಪಾಳಕ್ಕೆ ಕೊನೆಯ ಓವರ್‌ನಲ್ಲಿ ಗೆಲ್ಲಲು 10 ರನ್‌ಗಳ ಅಗತ್ಯವಿತ್ತು, ಆದರೆ ಇಂಗ್ಲೆಂಡ್‌ನ ಬೌಲರ್ ಸ್ಯಾಮ್ ಕರನ್ ಕೇವಲ 5 ರನ್ ಮಾತ್ರ ಬಿಟ್ಟುಕೊಟ್ಟು ತಮ್ಮ ತಂಡಕ್ಕೆ 4 ರನ್‌ಗಳ ರೋಚಕ ಗೆಲುವನ್ನು ತಂದುಕೊಟ್ಟರು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡ 184 ರನ್ ಗಳಿಸಿ ನೇಪಾಳಕ್ಕೆ 185 ರನ್‌ಗಳ ಗುರಿ ನೀಡಿತ್ತು. ಒಂದು ಹಂತದಲ್ಲಿ ನಾಯಕ ರೋಹಿತ್ ಪೌಡೆಲ್, ದೀಪೇಂದ್ರ ಸಿಂಗ್ ಐರಿ 3ನೇ ವಿಕೆಟ್‌ಗೆ 82 ರನ್‌ಗಳ ಜತೆಯಾಟ ಪ್ರದರ್ಶಿಸಿ ಪಂದ್ಯದಲ್ಲಿ ಇಂಗ್ಲೆಂಡ್ ತಂಡಕ್ಕೆ ಸೋಲಿನ ಭೀತಿ ಹುಟ್ಟಿಸಿದ್ದರು. ಅವರಿಬ್ಬರ ವಿಕೆಟ್ ಬಳಿಕ ನೇಪಾಳ ತಂಡದ ಲೋಕೇಶ್ ಬಹದ್ದೂರ್ ಬಾಮ್ ಪಂದ್ಯವನ್ನು ಕೊನೆಯ ಓವರ್‌ವರೆಗೆ ಕೊಂಡೊಯ್ದು ಆಂಗ್ಲರ ಬೆವರಿಳಿಸಿದ್ದರು. ವಿಶ್ವದ ಟಾಪ್ ವೇಗಿಗಳಲ್ಲಿ ಒಬ್ಬರಾದ ಜೋಫ್ರಾ ಆರ್ಚರ್ ಎಸೆದ 18ನೇ ಓವರ್‌ನಲ್ಲಿ ಆರಿಫ್ ಹಾಗೂ ಲೋಕೇಶ್ 22 ರನ್ ಸಿಡಿಸಿ ಪಂದ್ಯದ ಗತಿಯನ್ನೇ ಬದಲಿಸಿದ್ದರು.

ಗೆಲುವು ಕಸಿದ ಕರನ್: ಕೊನೆಯ ಓವರ್‌ನಲ್ಲಿ ಕೈಯಲ್ಲಿ 4 ವಿಕೆಟ್ ಉಳಿದಿರುವಂತೆ ನೇಪಾಳ ಗೆಲುವಿಗೆ 10 ರನ್ ಅಗತ್ಯವಿತ್ತು. ಆದರೆ ಸ್ಯಾಮ್ ಕರನ್ ತನ್ನ ಬೌಲಿಂಗ್ ನಿಯಂತ್ರಿಸಿ ಇಂಗ್ಲೆಂಡ್‌ಗೆ ರೋಚಕ ಗೆಲುವು ತಂದು ಕೊಟ್ಟರು.

ಇಂಗ್ಲೆಂಡ್ ಸವಾಲಿನ ಮೊತ್ತ: ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ್ದ ಇಂಗ್ಲೆಂಡ್ ತಂಡ ಜಾಕೋಬ್ ಬೆಥೆಲ್ ಹಾಗೂ ನಾಯಕ ಹ್ಯಾರಿ ಬ್ರೂಕ್ ಸಿಡಿಸಿದ ಅರ್ಧಶತಕಗಳ ನೆರವಿನಿಂದ 184 ರನ್‌ಗಳ ಸವಾಲಿನ ಮೊತ್ತ ದಾಖಲಿಸಿತ್ತು.

ಸ್ಕಾಟ್ಲೆಂಡ್-ಇಟಲಿ ಹಣಾಹಣಿ ಇಂದು

ಕೊಲ್ಕತ್ತಾ: ಇಲ್ಲಿನ ಈಡೆನ್ ಗಾರ್ಡನ್ಸ್‌ನಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವು ಇಟಲಿಯನ್ನು ಎದುರಿಸಲಿದೆ. ಈ ಸಲದ ಟಿ20 ವಿಶ್ವಕಪ್‌ನಲ್ಲಿ ಬಾಂಗ್ಲಾದೇಶ ತಂಡವು ಭಾಗವಹಿಸುವುದಿಲ್ಲ ಎಂಬ ನಿರ್ಧಾರ ಪ್ರಕಟಿಸಿದಾಗ ಆ ಸ್ಥಾನದಲ್ಲಿ ಸ್ಕಾಟ್ಲೆಂಡ್ ತಂಡಕ್ಕೆ ಅವಕಾಶ ಕೊಡಲಾಯಿತು. ಸ್ಕಾಟ್ಲೆಂಡ್ ತಂಡವು 2007ರಲ್ಲಿ ಮೊದಲ ಬಾರಿ ಟಿ20 ಪಂದ್ಯವನ್ನಾಡಿತ್ತು. ಒಟ್ಟು 110 ಪಂದ್ಯಗಳನ್ನು ಅದು ಆಡಿದ್ದು, 49ರಲ್ಲಿ ಮಾತ್ರ ಜಯ ಗಳಿಸಲು ಸಾಧ್ಯವಾಗಿದೆ. ರಿಚಿ ಬೆರಿಂಗ್‌ಟನ್ ಸ್ಕಾನಾಯಕತ್ವದ ಸ್ಕಾಟ್ಲೆಂಡ್ ತಂಡವು ಮೈಕಲ್ ಜಾನ್ಸ್, ಮ್ಯಾಥ್ಯು ಕ್ರಾಸ್, ಸಫಿಯಾನ್ ಶರೀಫ್ ರಂತಹ ಬ್ಯಾಟ್ಸ್‌ಮ್ಯಾನ್‌ಗಳನ್ನು ಹೊಂದಿದ್ದಾರೆ. ಟಾಮ್ ಬ್ರೂಸ್, ಮಾರ್ಕ್ ವ್ಯಾಟ್, ಬ್ರ್ಯಾಡ್ಲೀ ಕ್ಯೂರಿಯಂತಹ ಬೌಲರ್‌ಗಳೂ ತಂಡದಲ್ಲಿದ್ದಾರೆ.

ಇಟಲಿ ಟಿ20 ತಂಡವನ್ನು ಈ ವಿಶ್ವಕಪ್‌ನಲ್ಲಿ ವೇನ್ ಮೆಡ್ಸೆನ್ ಮುನ್ನಡೆಸುತ್ತಿದ್ದಾರೆ. 2019ರಲ್ಲಿ ಜರ್ಮನಿ ವಿರುದ್ಧ ಇಟಲಿ ತಂಡವು ತನ್ನ ಮೊದಲ ಟಿ20 ಪಂದ್ಯವನ್ನಾಡಿತ್ತು. ಒಟ್ಟು 39 ಟಿ20 ಪಂದ್ಯಗಳನ್ನು ಇದುವರೆಗೆ ಆಡಿರುವ ಇಟಲಿ ತಂಡವು 25ರಲ್ಲಿ ಗೆದ್ದು, 13ರಲ್ಲಿ ಸೋತಿದೆ.

ಇಂದಿನ ಪಂದ್ಯ

ಸ್ಕಾಟ್ಲೆಂಡ್ vs ಇಟಲಿ	ಬೆ.11	ಕೋಲ್ಕತ್ತಾ
ಜಿಂಬಾಬ್ವೆ vs ಒಮಾನ್	ಮ.3	ಕೊಲಂಬೊ
ದ. ಆಫ್ರಿಕಾ vs ಕೆನಡಾ	ರಾತ್ರಿ 7	ಅಹಮದಾಬಾದ

ಮೆಂಡಿಸ್ ಅರ್ಧ ಶತಕ | ಅತಿಥೇಯರ ಶುಭಾರಂಭ

ಐರ್ಲೆಂಡ್ ವಿರುದ್ಧ ಲಂಕಾಗೆ ಜಯ

ಲಂಕಾ ಪರ ಅರ್ಧ ಶತಕ ಬಾರಿಸಿದ ಕುಸಲ್ ಮೆಂಡಿಸ್.

ಕೊಲಂಬೊ: ಇಲ್ಲಿನ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅತಿಥೇಯ ಲಂಕಾ ತಂಡವು ಐರ್ಲೆಂಡ್ ತಂಡವನ್ನು 20 ರನ್‌ಗಳಿಂದ ಸೋಲಿಸಿ ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಿದೆ. ಲಂಕಾ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 163 ರನ್ ಗಳಿಸಿದರೆ, ಐರ್ಲೆಂಡ್ ತಂಡವು 8 ವಿಕೆಟ್‌ಗೆ 143 ರನ್‌ಗಳಿಸಲಷ್ಟೇ ಶಕ್ತವಾಯಿತು.

ಟಾಸ್ ಗೆದ್ದ ಐರ್ಲೆಂಡ್ ತಂಡವು ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಲಂಕಾ ತಂಡವು ಆರಂಭದ ವಿಕೆಟ್‌ಗೆ 28 ರನ್ ಸೇರಿಸಿತು. ಆರಂಭಿಕ ಆಟಗಾರ ಕಾಮಿಲ್ ಮಿಶಾರ 11 ಬಾಲ್‌ಗಳಲ್ಲಿ 14 ರನ್ ಗಳಿಸಿ ಮಾರ್ಕ್ ಅಡೈರ್ ಬಾಲ್‌ನಲ್ಲಿ ಬ್ಯಾರಿ ಮೆಕಾರ್ಥಿ ಅವರಿಗೆ ಕ್ಯಾಚ್ ನೀಡಿ ಔಟ್ ಆದರು.

ಆ ಬಳಿಕ ಕುಸಲ್ ಮೆಂಡಿಸ್-ಪಾತುಂ ನಿಸ್ಸಾಂಕ ಮಧ್ಯೆ 2ನೇ ವಿಕೆಟ್ ಜತೆಯಾಟ ಸಾಗಿತು. ನಿಸ್ಸಾಂಕ 23 ಬಾಲ್‌ಗಳಲ್ಲಿ 24 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆ ನಂತರ ಕ್ರೀಸ್‌ಗೆ ಬಂದ ಪವನ್ ರತ್ನಾಯಕೆ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನೆಲೆವೂರದೆ, ಕೇವಲ 5 ರನ್ ಗಳಿಸಿ ಪೆವಿಲಿಯನ್ ಸೇರಿದರು.

ದುನಿತ್ ವೆಲ್ಲಾಲಗೆ 10 ರನ್ ಗಳಿಸಿ ಗ್ಯಾರೆತ್ ಡೆಲನಿ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಕಳೆದುಕೊಂಡರು. ಆದರೆ ಕಮಿಂದು ಮೆಂಡಿಸ್ 19 ಬಾಲ್‌ಗಳನ್ನು ಎದುರಿಸಿ ಸ್ಫೋಟಕ ಬ್ಯಾಟಿಂಗ್ ನೀಡಿ 19 ಬಾಲ್‌ಗಳಲ್ಲಿ 44 ರನ್ ಸಿಡಿಸಿ ಜಾರ್ಜ್ ಡ್ರಾಕೆಲ್ ಅವರಿಗೆ ವಿಕೆಟ್ ಒಪ್ಪಿಸಿದರು. ಲಂಕಾ ಪರ ದಾಸನ್ ಶನಕ ಯಾವುದೇ ರನ್ ಗಳಿಸಲು ಶಕ್ತರಾಗಲಿಲ್ಲ, ವನಿಂದು ಹಸರಂಗ ಕೇವಲ 1 ರನ್ ಗಳಿಸಿ ಅಜೇಯರಾಗುಳಿದರು. ಮೂರನೇ ಕ್ರಮಾಂಕದಲ್ಲಿ ಲಂಕಾ ಪರ ಬ್ಯಾಟಿಂಗ್‌ಗೆ ಇಳಿದಿದ್ದ ಕುಸಲ್ ಮೆಂಡಿಸ್ ಅರ್ಧ ಶತಕ (56 ಅಜೇಯ) ಗಳಿಸಿ ಲಂಕಾ ತಂಡದ ಸ್ಕೋರ್ ಅನ್ನು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 163ಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಗುರಿಯನ್ನು ಬೆಂಬತ್ತಿದ ಐರ್ಲೆಂಡ್ 24 ರನ್ ಆಗಿದ್ದಾಗ ಆರಂಭಿಕ ಆಟಗಾಗ ಪಾಲ್ ಸ್ಟಿರ್ಲಿಂಗ್ ಅವರ ವಿಕೆಟ್ ಅನ್ನು ಕಳೆದುಕೊಂಡಿತು. ಅವರು ಕೇವಲ 6 ರನ್ ಗಳಿಸಿದ್ದರು. ಆ ಬಳಿಕ ರಾಸ್ ಅಡೈರ್-ಹ್ಯಾರಿ ಟೆಕ್ಕರ ಮಧ್ಯೆ ಉತ್ತಮ ಜತೆಯಾಟ ಮೂಡಿ ಬಂತು. ಅಡೈರ್ 23 ಬಾಲ್‌ಗಳಲ್ಲಿ 34 ರನ್ ಗಳಿಸಿ ಔಟ್ ಆದರು. ಹ್ಯಾರಿ ಟೆಕ್ಕರ್ 34 ಬಾಲ್‌ಗಳನ್ನು ಎದುರಿಸಿ 40 ರನ್ ಗಳಿಸುವಲ್ಲಿ ಸಫಲರಾದರು. ಆ ನಂತರ ಕ್ರೀಸ್‌ಗೆ ಬಂದ ಬೆಂಜಮಿನ್ ಕ್ಯಾಲಿಟ್ಜ್ ಕೇವಲ 4 ರನ್ ಗಳಿಸಿದರೆ, ಗರೆಥ್ ಡೆಲಾನಿ ಯಾವುದೇ ರನ್ ಗಳಿಸಲಿಲ್ಲ.

ಭಾರತ ತಂಡಕ್ಕೆ ವಾಷಿಂಗ್ಟನ್ ಸುಂದರ್ ಸೇರ್ಪಡೆ

ಮುಂಬೈ: ಫೆಬ್ರವರಿ 12ರಂದು ನಮೀಬಿಯಾ ವಿರುದ್ಧದ ಟಿ20 ವಿಶ್ವಕಪ್ ಪಂದ್ಯಕ್ಕೂ ಮುನ್ನ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಭಾರತ ತಂಡ ಸೇರಲಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯ ಸಂದರ್ಭದಲ್ಲಿ ವಾಷಿಂಗ್ಟನ್ ಸುಂದರ್ ಪಾರ್ಶ್ವನೋವು ಮತ್ತು ಪಕ್ಕೆಲುಬಿನ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರು. ಹೀಗಾಗಿ ಸರಣಿಯಿಂದಲೇ ಹೊರಗುಳಿದಿದ್ದರು. ಇದೀಗ ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ನಾಯಕ ಸೂರ್ಯಕುಮಾರ್ ಯಾದವ್ ತಿಳಿಸಿದರು. ಅಮೆರಿಕ ವಿರುದ್ಧದ ಪಂದ್ಯದ ಗೆಲುವಿನ ಬಳಿಕ ಮಾತನಾಡಿರುವ ಸೂರ್ಯಕುಮಾರ್, ವಾಷಿಂಗ್ಟನ್ ಸುಂದರ್ ಫಿಟ್ ಸಂಪೂರ್ಣ ಫಿಟ್ ಆಗಿರುವುದಾಗಿ ವೈದ್ಯಕೀಯ ಮತ್ತು ಕ್ರೀಡಾ ವಿಜ್ಞಾನ ತಂಡ ಮಾಹಿತಿ ನೀಡಿದೆ. ಅವರು ನಮೀಬಿಯಾ ಪಂದ್ಯಕ್ಕೂ ಮುನ್ನ ದೆಹಲಿಯಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದರು. ವಾಷಿಂಗ್ಟನ್ ಸುಂದರ್ ಲಭ್ಯತೆ ಬಗ್ಗೆ ಹಲವು ಅನುಮಾನ ಗಳಿದ್ದವು. ಆದರೂ ಅವರನ್ನು ತಂಡದಿಂದ ಬಿಡುಗಡೆ ಮಾಡದೇ ಉಳಿಸಕೊಳ್ಳಲಾಗಿತ್ತು. ಇದೀಗ ಅವರು ಆಡಲು ಫಿಟ್ ಆಗಿರುವ ಕಾರಣ ತಂಡಕ್ಕೆ ಸೇರ್ಪಡೆ ಆಗಿದ್ದಾರೆ.

ಕರ್ನಾಟಕ-ಮುಂಬೈ ಕ್ವಾ.ಫೈನಲ್ ಪಂದ್ಯ | ರಾಹುಲ್ ಅಜೇಯ ಅರ್ಧಶತಕ

ರೋಚಕ ಘಟ್ಟದತ್ತ ರಣಜಿ

ರಾಜ್ಯ ತಂಡದ ಇನ್ನಿಂಗ್ಸ್ ಆಧರಿಸಿರುವ ಕೆಎಲ್ ರಾಹುಲ್.

ಮುಂಬೈ: ಕರ್ನಾಟಕ ಹಾಗೂ ಮುಂಬೈ ತಂಡಗಳ ನಡುವಣ ರಣಜಿ ಟ್ರೋಫಿಯ ಕ್ವಾರ್ಟರ್ ಫೈನಲ್ ಪಂದ್ಯ ರೋಚಕ ಘಟ್ಟದತ್ತ ಸಾಗಿದೆ. ಪಂದ್ಯ ಗೆಲ್ಲಲು ಕರ್ನಾಟಕಕ್ಕೆ 212 ರನ್‌ಗಳ ಅವಶ್ಯಕತೆ ಇದೆ.

ಭಾನುವಾರ ಮುಂಬೈ ತಂಡ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 189 ರನ್‌ಗಳಿಂದ ಆಟ ಮುಂದುವರೆಸಿತು. 49 ರನ್ ಬಾರಿಸಿದ್ದ ಮುಶೀರ್ ಖಾನ್, ವಿದ್ಯಾಧರ್ ಪಾಟೀಲ್ ಬೌಲಿಂಗ್‌ನಲ್ಲಿ ಔಟ್ ಆದರು. ಅರ್ಧಶತಕ ಬಾರಿಸಿ ಭರವಸೆ ಮೂಡಿಸಿದ್ದ ಆಕಾಶ್ ಆನಂದ್ 70 ರನ್ ಗಳಿಸಿ ಪೆವಿಲಿಯನ್ ಸೇರಿದರು. ಉಳಿದಂತೆ ಮುಂಬೈ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಜವಾಬ್ದಾರಿ ಮರೆತು ಬ್ಯಾಟಿಂಗ್ ಮಾಡಿದರು. ಸಿದ್ದೇಶ್ ಲಾಡ್ 25, ಸೂರ್ಯಾಂಶ್ ಶೆಡ್ಜ್ 25 ರನ್ ಬಾರಿಸಿದರು.

ಆದರೆ 9ನೇ ವಿಕೆಟ್‌ಗೆ ತುಷಾರ್ ದೇಶಪಾಂಡೆ ಹಾಗೂ ಕರ್ನಾಟಕ ಮೂಲದ ತನುಷ್ಕ ಕೋಟ್ಯಾನ್ ಜೋಡಿ ರಾಜ್ಯ ತಂಡದ ಬೌಲರ್‌ಗಳನ್ನು ಕೊಂಚ ಕಾಲ ಕಾಡಿದರು. ಈ ಜೋಡಿ 87 ರನ್ ಜತೆಯಾಟದ ಕಾಣಿಕೆ ನೀಡಿ ಆರ್ಭಟಿಸಿತು. ಈ ವೇಳೆ 47 ರನ್ ಬಾರಿಸಿ ಮುನ್ನಡೆಸುತ್ತಿದ್ದ ತುಷಾರ್ ದೇಶಪಾಂಡೆ ಅವರನ್ನು ವಿದ್ವತ್ ಕಾವೇರಪ್ಪ ಔಟ್ ಮಾಡಿದರು. ತನುಷ್ಕ 5 ಬೌಂಡರಿ, 1 ಸಿಕ್ಸರ್ ಸಹಾಯದಿಂದ ಅಜೇಯ 48 ರನ್ ಸಿಡಿಸಿದರು.ಅಂತಿಮವಾಗಿ ಮುಂಬೈ 377 ರನ್‌ಗಳಿಗೆ ಆಲೌಟ್ ಆಯಿತು.

ಕೆ.ಎಲ್. ರಾಹುಲ್ ಅರ್ಧಶತಕ: ಸವಾಲಿನ ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡದ ಆರಂಭ ಕಳಪೆಯಾಗಿತ್ತು. ಮೊದಲ ಇನ್ನಿಂಗ್ಸ್‌ನಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದ ಮಯಾಂಕ್ ಅಗರ್ವಾಲ್ (3) ರನ್ ಗಳಿಸಿ ಔಟ್ ಆದರು. ಆದರೆ 2ನೇ ವಿಕೆಟ್‌ಗೆ ಕೆಎಲ್ ರಾಹುಲ್ ಅವರು, ನಾಯಕ ದೇವದತ್ ಪಡಿಕ್ಕಲ್ ಜತೆಗೂಡಿ 84 ರನ್‌ಗಳ ಜತೆಯಾಟ ಪ್ರದರ್ಶಿಸಿದರು.ದೇವದತ್ 39 ರನ್ ಬಾರಿಸಿ ಔಟ್ ಆದರೆ, ಭರವಸೆಯ ಬ್ಯಾಟರ್ ಕೆಎಲ್ ರಾಹುಲ್ 7 ಬೌಂಡರಿ ಸೇರಿದಂತೆ ಅಜೇಯ 60 ರನ್ ಬಾರಿಸಿ ಕ್ರೀಸ್‌ನಲ್ಲಿದ್ದಾರೆ. ಕರುಣ್ ನಾಯರ್ ಕೂಡಾ ಅಜೇಯರಾಗಿದ್ದಾರೆ.

ಕರ್ನಾಟಕ ಸೋಮವಾರ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡುವ ಅವಶ್ಯಕತೆ ಇದೆ. ಇನ್ನೂ 8 ವಿಕೆಟ್ ಉಳಿದಿದ್ದು, ಪಂದ್ಯದಲ್ಲಿ ಗೆದ್ದರೆ ಸೆಮಿಫೈನಲ್ ಪ್ರವೇಶಿಸುವ ರಾಜ್ಯ ತಂಡದ ಕನಸು ನನಸಾಗಲಿದೆ.

ವಿಟಾಕೀಸ್

ಈ ಹಿಂದೆ ಕನ್ನಡದಲ್ಲಿ ಅಯ್ಯನಮನೆ, ಮಾರಿಕಲ್ಲು ಸೇರಿದಂತೆ ಹಲವು ವೆಬ್ ಸರಣಿಗಳು ಪ್ರಸಾರವಾಗಿ ಯಶಸ್ಸು ಕಂಡಿವೆ. ಈ ಖುಷಿಯಲ್ಲಿ ಈಗ ಮತ್ತಷ್ಟು ವೆಬ್ ಸೀರೀಸ್‌ಗಳು ಪ್ರಸಾರವಾಗುತ್ತಿವೆ. ಸದ್ಯ ರಾಕ್ಷಸ ಶೀರ್ಷಿಕೆಯಲ್ಲಿ ವೆಬ್ ಸರಣಿ ಪ್ರಸಾರ ಆರಂಭಿಸಲಿದೆ. ಕರಾಳ ಅಪರಾಧ ಕಥೆಯ ಸುತ್ತ ಈ ವೆಬ್ ಸರಣಿ ಸಾಗಲಿದೆ. ಸುಹಾನ್ ಪ್ರಸಾದ್ ಮತ್ತು ಅಪೂರ್ವಾ ಒಟ್ಟಾಗಿ ಈ ಕಥೆ ಬರೆದಿದ್ದು, ಸುಹಾನ್ ಪ್ರಸಾದ್ ನಿರ್ದೇಶನ ಮಾಡಿದ್ದಾರೆ. ಖ್ಯಾತ ನಿರ್ದೇಶಕ ತರುಣ್ ಸುಧೀರ್ ತಮ್ಮದೇ 'ತರುಣ್ ಸುಧೀರ್ ಪ್ರೊಡಕ್ಷನ್ಸ್' ಬ್ಯಾನರ್‌ನಲ್ಲಿ ರಾಕ್ಷಸ ವೆಬ್ ಸರಣಿ ನಿರ್ಮಾಣ ಮಾಡುತ್ತಿದ್ದಾರೆ. ನಟ ವಿಜಯ್ ರಾಘವೇಂದ್ರ, ರಾಕ್ಷಸ ಸರಣಿಯ ಮೂಲಕ ವೆಬ್ ಸೀರೀಸ್ ಲೋಕಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಮಯೂರಿ, ಅವಿನಾಶ್, ಮಾಳವಿಕ, ಅಪ್ಪಣ್ಣ ಮತ್ತು ಅಭಿಜಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. 'ರಾಕ್ಷಸ ವೆಬ್ ಸರಣಿಯ ಮೂಲಕ ಒಟಿಟಿ ಅಂಗಳಕ್ಕೆ ಕಾಲಿಟ್ಟಿದ್ದೇನೆ. ಇದು ನನಗೆ ತುಂಬಾ ಖುಷಿಕೊಟ್ಟಿದೆ. ಕರ್ತವ್ಯ, ನಂಬಿಕೆ ಮತ್ತು ವೈಯಕ್ತಿಕ ಜವಾಬ್ದಾರಿಯ ನಡುವೆ ಸಾಗುವ ವ್ಯಕ್ತಿಯ ಭಾವನಾತ್ಮಕ ಪಾತ್ರ ಇದಾಗಿದ್ದು, ಪ್ರೇಕ್ಷಕರಿಗೆ ಖಂಡಿತಾ ಹಿಡಿಸುತ್ತದೆ' ಎಂದು ವಿಜಯ್ ರಾಘವೇಂದ್ರ ತಿಳಿಸಿದರು. ರಾಕ್ಷಸ ಗಟ್ಟಿಯಾದ ಕಂಟೆಂಟ್ ಒಳಗೊಂಡಿದ್ದು, ಅಷ್ಟೇ ಉತ್ತಮ ನಿರೂಪಣೆಯಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಸ್ಟೋರಿ ಸಾಗಲಿದ್ದು, ಈ ವೆಬ್ ಸರಣಿಯನ್ನು ನಿರ್ಮಿಸಿರುವುದು ಸಂತಸ ತಂದಿದೆ ಎಂದು ನಿರ್ಮಾಪಕ ತರುಣ್ ಸುಧೀರ್ ನುಡಿಯುತ್ತಾರೆ. ಕ್ರೈಂ ಸೈಕಾಲಜಿಕಲ್ ಕಥಾ ಹಂದರ ಹೊಂದಿರುವ ರಾಕ್ಷಸ ಸರಣಿ ಏಳು ಭಾಗಗಳಲ್ಲಿ ಪ್ರಸಾರವಾಗಲಿದೆ.

ಮಂತ್ರಾಲಯದಲ್ಲಿ ತಾರೆಯರ ಸಮಾಗಮ



ಕಲಿಯುಗದ ಕಾಮಧೇನು, ಕಲ್ಪವೃಕ್ಷ ಎಂದು ಖ್ಯಾತರಾದ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ದಿವ್ಯ ಚರಿತ್ರೆ ಭಕ್ತರ ಮುಂದೆ ಬರಲಿದೆ. ಹಿಂದೆಂದೂ ಕಾಣದ ರೀತಿಯಲ್ಲಿ ದೃಶ್ಯೀಕರಿಸುವ ರಾಯರ ದರ್ಶನ ಆಲ್ಬಂ ಸಾಂಗ್ ಸದ್ದಿಲ್ಲದೆ ಸಿದ್ಧವಾಗುತ್ತಿದೆ. ಶ್ರೀಲಕ್ಷ್ಮೀ ಗಣೇಶ ಪ್ರೊಡಕ್ಷನ್ ಮತ್ತು ದಿ ನ್ಯೂ ಇಂಡಿಯನ್ ಟೈಮ್ಸ್ ಹೆಮ್ಮೆಯಿಂದ ಅರ್ಪಿಸುತ್ತಿರುವ ಈ ವಿಶೇಷ ಪ್ರಾಜೆಕ್ಟ್‌ಗೆ ಚಿತ್ರರಂಗದ ದೈತ್ಯ ಪ್ರತಿಭೆಗಳು ಕೈಜೋಡಿಸಿರುವುದು ವಿಶೇಷ.

ಈ ಆಲ್ಬಂ ಕೇವಲ ಒಂದು ಭಕ್ತಿಗೀತೆಯಾಗಿ ಉಳಿಯದೆ, ದಕ್ಷಿಣ ಭಾರತದ ಖ್ಯಾತ ನಟರ ಸಮಾಗಮಕ್ಕೆ ಸಾಕ್ಷಿಯಾಗುತ್ತಿದೆ. ಇದರಲ್ಲಿ ಸೂಪರ್ ಸ್ಟಾರ್ ರಜನಿಕಾಂತ್, ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ನವರಸ ನಾಯಕ ಜಗ್ಗೇಶ್, ನೆನಪಿರಲಿ ಪ್ರೇಮ್ ಸೇರಿದಂತೆ ಚಿತ್ರರಂಗದ ಇಪ್ಪತ್ತೈದಕ್ಕೂ ಹೆಚ್ಚು ಜನಪ್ರಿಯ ತಾರೆಯರು ಕಾಣಿಸಿಕೊಳ್ಳುತ್ತಿದ್ದಾರೆ. ವಿಶೇಷವೆಂದರೆ, ಈ ಆಲ್ಬಂ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಾಣವಾಗುತ್ತಿದ್ದು, ಜಾಗತಿಕ ಮಟ್ಟದ ಭಕ್ತರನ್ನು ತಲುಪುವ ಗುರಿ ಹೊಂದಿದೆ.

ಮಂತ್ರಾಲಯದ ಗುರು ಸಾರ್ವಭೌಮರ ಕುರಿತು ಈವರೆಗೆ ಯಾರು ಹೇಳದ ಮತ್ತು ತೋರಿಸದ ರಾಯರ ಬದುಕಿನ ಕೆಲವು ಅಪರೂಪದ ವಿಷಯಗಳನ್ನು ಈ ಆಲ್ಬಂನಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಮಂತ್ರಾಲಯದ ಪ್ರಸ್ತುತ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಈ ಪ್ರಾಜೆಕ್ಟ್ ಅತ್ಯಂತ ಅದ್ದೂರಿಯಾಗಿ ಮೂಡಿಬರುತ್ತಿದೆ.

ಚಂದನವನಕ್ಕೆ ಮರಳಿದ ಸಂಗೀತಾ

ಕ್ರೇಜಿಸ್ಟಾರ್ ರವಿಂದ್ರನ್ ಅಭಿನಯದ 'ಯಾರೇ ನೀನು ಚೆಲುವೆ' ಸೂಪರ್ ಹಿಟ್ ಸಿನಿಮಾವಾಗಿತ್ತು. ಈ ಚಿತ್ರದಲ್ಲಿ ಅಭಿನಯಿಸಿದ್ದ ಸಂಗೀತಾ ಮುಗ್ಧತೆಯಲ್ಲಿಯೇ ಸಿನಿಪ್ರಿಯರ ಮನಗೆದ್ದಿದ್ದರು. ಆ ಬಳಿಕ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ ಸಂಗೀತಾ ಮತ್ತೆ ಯಾವುದೇ ಕನ್ನಡ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ಬಹಳ ವರ್ಷಗಳ ನಂತರ ಸಂಗೀತಾ ಮತ್ತೆ ಸ್ಯಾಂಡಲ್‌ವುಡ್ ಕಡೆ ಮುಖಮಾಡಿದ್ದಾರೆ. ಹೊಸ ತಂಡವೊಂದು ಇವರನ್ನು ಕನ್ನಡ ಚಿತ್ರರಂಗಕ್ಕೆ ಕರೆತಂದಿದೆ. ಸ್ಯಾಂಡಲ್‌ವುಡ್‌ನಲ್ಲಿ ಸೆಟ್ಟೇರಿರುವ ಹೊಸ ಚಿತ್ರದಲ್ಲಿ ಸಂಗೀತಾ ಪ್ರಮುಖ ಪಾತ್ರ ದಲ್ಲಿ ಅಭಿನಯಿಸುತ್ತಿದ್ದಾರೆ.

ಈ ಹಿಂದೆ ಕಿಚ್ಚ ಸುದೀಪ್ ನಟನೆಯ ರನ್ನ, ಶರಣ್ ಅಭಿನಯದ 'ವಿಕ್ಟರಿ' ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಕಿರಣ್ ವಿಶ್ವನಾಥ್ ಈಗ ಹೊಸ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರದಲ್ಲಿ ಸಂಗೀತಾ, ಭಾಗ್ಯಾ ಎಂಬ ಪಾತ್ರದಲ್ಲಿ ನಟಿಸುತ್ತಿದ್ದು, ನಾಯಕನ ತಾಯಿಯಾಗಿ ಪಾತ್ರ ನಿರ್ವಹಿಸಲಿದ್ದಾರೆ. ಈ ಹಿಂದೆ ಯಷ್ಟೇ ಚಿತ್ರತಂಡ ನಾಯಕಿಯನ್ನು ಪರಿಚಯಿಸಿತ್ತು. ಈ ಸಿನಿಮಾದಲ್ಲಿ ಮಹಾನಟಿ ಖ್ಯಾತಿಯ ಪ್ರಿಯಾಂಕಾ ಆಚಾರ್ ನಾಯಕಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಇದೀಗ ಸಂಗೀತಾ ಅವರು ಕೂಡ ಚಿತ್ರತಂಡ ಸೇರಿರುವುದು ಆರಂಭದಲ್ಲಿಯೇ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಈ ಸಿನಿಮಾದ ನಾಯಕ ಯಾರು ಅನ್ನೋದನ್ನ ಚಿತ್ರತಂಡ ಸಸ್ಪೆನ್ಸ್ ಆಗಿ ಇಟ್ಟಿದೆ. 'ಗೌರಿ ಆರ್ಟ್ಸ್' ಬ್ಯಾನರ್‌ನಲ್ಲಿ ಮೂಡಿ ಬರುತ್ತಿರುವ ಚೊಚ್ಚಲ ಚಿತ್ರ ಇದಾಗಿದ್ದು, ಅದ್ದೂರಿಯಾಗಿ ನಿರ್ಮಾಣವಾಗಲಿದೆ.